ಡಾ. ವ್ಹಿ.ಜಿ. ಪೂಜಾರ ಅವರ ಬದುಕು-ಬರಹ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಅಶೋಕ ಈರಗೊಂಡ ಧವಳೇಶ್ವರ

ಮಾರ್ಗದರ್ಶಕರು
ಡಾ. ಜಗನ್ನಾಥ ಹೆಬ್ಬಾಳೆ
ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನಾ ಕೇಂದ್ರ ಬೀದರ

ಕನ್ನಡ ವಿಶ್ವ ವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೦೧

ಡಾ. ವ್ಹಿ.ಜಿ. ಪೂಜಾರ ಅವರ ಬದುಕು–ಬರಹ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಅಶೋಕ ಈರಗೊಂಡ ಢವಳೇಶ್ವರ

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನಾ ಕೇಂದ್ರ ಬೀದರ

ಕನ್ನಡ ವಿಶ್ವ ವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩೨೭೬

೨೦೧೧

ಪ್ರಮಾಣ ಪತ್ರ

ಶ್ರೀ ಅಶೋಕ ಈರಗೊಂಡ ಧವಳೇಶ್ವರ ಇವರು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಸಂಶೋಧನೆ ಕೈಗೊಂಡು **"ಡಾ. ವ್ಹಿ.ಜಿ. ಪೂಜಾರ ಅವರ ಬದುಕು-ಬರಹ"** ಎಂಬ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದು ಇವರ ಮೂಲ ನಿಬಂಧವಾಗಿದ್ದು, ಈ ಮೊದಲು ಇದು ಇಡಿಯಾಗಿ ಇಲ್ಲವೇ ಬಿಡಿಯಾಗಿ, ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ಸ್ಥಳ : ಬೀದರ
ದಿನಾಂಕ: ೧೪-೦೬-೨೦೧೧

ಡಾ. ಜಗನ್ನಾಥ ಹೆಬ್ಬಾಳೆ
ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನಾ ಕೇಂದ್ರ ಬೀದರ

ಘೋಷಣಾ ಪತ್ರ

"ಡಾ. ವ್ಹಿ.ಜಿ. ಪೂಜಾರ ಅವರ ಬದುಕು-ಬರಹ" ಎಂಬ ನಿಬಂಧವನ್ನು ನಾನು ಡಾ. ಜಗನ್ನಾಥ ಹೆಬ್ಬಾಳೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಇದನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಪ್ರಮಾಣಿಕರಿಸುತ್ತಾ, ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಸಾದರ ಪಡಿಸುತ್ತಿದ್ದೇನೆ.

ಸ್ಥಳ: ಬೀದರ

ದಿನಾಂಕ: ೧೫-೦೬-೨೦೧೧

ಅಶೋಕ ಈರಗೊಂಡ ಢವಳೇಶ್ವರ



ಡಾ. ವ್ಹಿ.ಜಿ. ಪೂಜಾರ ಎಂ.ಎ. ಪಿಹೆಚ್.ಡಿ.



ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹೈದ್ರಾಬಾದ ಕರ್ನಾಟಕ ಪ್ರದೇಶವು ಸಾಂಸ್ಕೃತಿಕ ದೃಷ್ಟಿಯಿಂದ ಖಣಿ ಎಂದು ಹೇಳುವಷ್ಟರ ಮಟ್ಟಿಗೆ ಶ್ರೀಮಂತವಾಗಿದೆ. ಸಾಹಿತ್ಯ ಪರಂಪರೆಯು ಕೂಡ ಅದರಷ್ಟೇ ಸಮೃದ್ಧವಾಗಿ ಬೆಳೆದಿದೆ. ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯವು ತುಂಬಾ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಕನ್ನಡ ಸಾಹಿತ್ಯವು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಯುಗದವರೆಗೂ ಹಲವಾರು ಪ್ರಕಾರ ಹಾಗೂ ವೈವಿಧ್ಯಗಳಲ್ಲಿ ಹೊರಹೊಮ್ಮಿರುವುದು ಕಾಣಸಿಗುತ್ತದೆ. ಅಂದಿನಿಂದ ಇಂದಿನವರೆಗೂ ಕನ್ನಡತನವನ್ನು ಉಳಿಸುವಲ್ಲಿ ಕನ್ನಡಕ್ಕೆ ನೀರೆರೆದು ಬೆಳೆಸಿದ ಮಹನೀಯರ ಸಂಖ್ಯೆ ಗಣನೀಯವಾಗಿದೆ.

ನಮ್ಮ ಕನ್ನಡ ಸಾಹಿತ್ಯವು ಸಹಸ್ರ ಶತಮಾನಗಳ ಇತಿಹಾಸ ಹೊಂದಿದೆ. ಈ ಸಾಹಿತ್ಯದಲ್ಲಿ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ನಾಲ್ಕು
ಘಟ್ಟಗಳಾಗಿ ವಿಂಗಡಿಸಲಾಗಿದೆ. ಹೊಸಗನ್ನಡ ಸಾಹಿತ್ಯವು ಉಳಿದ ಘಟ್ಟಗಳಿಗಿಂತ ದಟ್ಟವಾಗಿ ಬೆಳೆದು ಬಂದಿದೆ.

ಹೊಸಗನ್ನಡ ಸಾಹಿತ್ಯವು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಿನೂತನ ಅಧ್ಯಾಯವನ್ನೆ ತೆರೆಯಿತು ಈ ಹೊಸಗನ್ನಡ ಸಾಹಿತ್ಯವು ಆಂಗ್ಲ ಸಾಹಿತ್ಯದ ಸ್ಫೂರ್ತಿಯಿಂದ ತನ್ನದೇ ಆದ ಮಾರ್ಗದಲ್ಲಿ ಭೋರ್ಗರೆಯುತ್ತ ತನ್ನ ಪ್ರಭಾವ ಮುಂದುವರೆಸಿತು. ಆ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ರೆಂಬೆ-ಕೊಂಬೆಗಳಿಗೆ ಹೊಸ ಚಿಗುರು ಅಂಕುರಿಸಲು ಪ್ರಾರಂಭವಾಯಿತು. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯ ಯುಗವು ಕನ್ನಡ ಸಾಹಿತ್ಯದ ವಸಂತ ಪರ್ವಕಾಲ ಎನಿಸಿತು.

೧೯ನೆಯ ಶತಮಾನದ ಕೊನೆಯಲ್ಲಿ ಹೊಸಗನ್ನಡದ ಮುಂಗೋಳಿಯಾಗಿ ಮುದ್ದಣ್ಣ ಮೂಡಿ ಬಂದನು. ಕನ್ನಡ ಸಾಹಿತ್ಯವು ತನ್ನ ಧೋರಣೆ, ವಸ್ತು, ಭಾಷೆ, ರೂಪ, ಛಂದಸ್ಸು ಈ ಮೊದಲಾದವುಗಳಲ್ಲಿ ಹೊಸ ಹೆಜ್ಜೆಯನ್ನಿಟ್ಟು ಬೆಳೆದು ಬಂದಿದೆ.

ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಹೀಗೆ ಮೊದಲಾದ ಘಟ್ಟಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಹೊಸಗನ್ನಡ ಸಾಹಿತ್ಯದ ಪ್ರಕಾರಗಳಾಗಿ, ಕಾವ್ಯ, ಸಣ್ಣ ಕಥೆ, ಕಾದಂಬರಿ, ನಾಟಕ, ವಿಮರ್ಶೆ ಪ್ರಬಂಧ ಈ ಮೊದಲಾದ ಭಿನ್ನ ಸಾಹಿತ್ಯ ಪ್ರಕಾರಗಳು ಬೆಳೆದು ಬಂದಿವೆ. ಇದಲ್ಲದೆ ಜನಪದ ಸಾಹಿತ್ಯ ಸಂಗ್ರಹ, ಗ್ರಂಥ ಸಂಪಾದನೆ ಸಂಶೋಧನೆ ಮೊದಲಾದ ಸಾಹಿತ್ಯದ ಭಾಗಗಳು ಬೆಳೆದು ಬಂದವು.

ಹೀಗೆ ಕನ್ನಡ ಸಾಹಿತ್ಯವು ವೈವಿಧ್ಯಮಯವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದು, ಅಚ್ಚರಿಯ ಸಂಗತಿಯೇ ಎನ್ನಬಹುದು.

ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸಂಶೋಧನೆಯು ಒಂದು ವಿಶಿಷ್ಟವಾದ ಪ್ರಕಾರ ಇಂತಹ ಕ್ಷೇತ್ರಗಳಲ್ಲಿ ನಾಡಿನ ಅನೇಕ ಸಂಶೋಧಕರು ವಿವಿಧ ಹೊಸ ಸಂಶೋಧನೆಯ ಮುಖಾಂತರ ಸಾಹಿತ್ಯದ ಅನೇಕ ಅಂಶಗಳನ್ನು ಶಾಸನಗಳು ಪುರಾಣಗಳು, ಹಸ್ತ ಪ್ರತಿಗಳು, ತಾಳೆಗರಿಗಳನ್ನು ಓದಿ ನೋಡಿ ಅವುಗಳ ಸತ್ಯಾಂಶಗಳನ್ನು ಹೊರಹಾಕಿ ಇತಿಹಾಸವನ್ನು ಪುನಃ ರಚಿಸಿದರು. ಅಂತಹ ಮಹಾನ್ ಸಂಶೋಧಕರಾದ ಡಾ.ಎಂ.ಎಂ.ಕಲಬುರ್ಗಿ, ಡಾ.ಎಂ.ಚಿದಾನಂದ ಮೂರ್ತಿ, ಡಾ.ಎಲ್.ಬಸವರಾಜ, ಡಾ.ಸಂಗಮೇಶ ಸವದತ್ತಿ ಮಠ, ಡಿ.ಎಲ್.ನರಸಿಂಹಚಾರ್ಯ ಹೀಗೆ ಹತ್ತು ಹಲವು ಸಂಶೋಧಕರು ಹೊಸ ಅವಿಷ್ಕಾರಗಳ ಮುಖಾಂತರ ಸತ್ಯವನ್ನು ಹೊರಹಾಕತೊಡಗಿದರು. ಅಂಥಹವರ ಸಾಲಿನಲ್ಲಿ ಡಾ.ವ್ಹಿ.ಜಿ.ಪೂಜಾರರು ಒಬ್ಬರು.

ಡಾ.ವ್ಹಿ.ಜಿ.ಪೂಜಾರರು ಮೂಲತಃ ಬೆಳಗಾವಿ ಜಿಲ್ಲೆಯ ಹೊಸುರು ಗ್ರಾಮದಲ್ಲಿ ೧೯೫೨ ರಲ್ಲಿ ಜನಿಸಿದರು. ಇವರು ಮೂಲತಃ ಕೃಷಿಕ ಮನೆತನದವರಾದರೂ ಸಹ ಓದಿ ವಿದ್ಯಾವಂತರಾಗಿ ವೃತ್ತಿಯಿಂದ ಅಧ್ಯಾಪಕರಾಗಿ, ಅಧ್ಯಯನ, ಅಧ್ಯಾಪನ, ಸಂಶೋಧನೆ ಇವರು ನಿರಂತರವಾಗಿ ಮುಂದುವರಿಸಿಕೊಂಡು ಬಂದರು. ಇವರು ಈಗ ನಲವತ್ತೂರಕ್ಕು ಹೆಚ್ಚು ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಭಾಷಾ ವಿಜ್ಞಾನ, ವಚನ ಸಾಹಿತ್ಯ, ಮತು ಸಂಶೋಧನೆ ಇವರ ಆಸಕ್ತಿಯ ಕ್ಷೇತ್ರಗಳು.

ಸದ್ಯ ೫೯ ವಸಂತಗಳನ್ನು ಪೂರೈಸಿರುವ ಇವರು ಸರಳತೆ, ಸಜ್ಜನಿಕೆಗೆ ಹೆಸರಾದವರು. ಶ್ರೀಯುತರು ಎಲ್ಲರೊಳಗೊಂದಾಗಿ ಬದುಕುವ ಮಾನವೀಯ ಗುಣವನ್ನು ಹೊಂದಿದ್ದಾರೆ.
ವಿಶ್ವವಿದ್ಯಾಲಯದ ಅನೇಕ ಉನ್ನತ ಹುದ್ದೆಗಳನ್ನು ಅಲಂಕರಿಸಿದರೂ ಅಹಂನಿಂದ ಬೀದಿದವರಲ್ಲ. ಅನೇಕ ಕೆಲಸಗಳ ಒತ್ತಡದಲ್ಲಿಯೂ ಉತ್ಸಾಹದಿಂದ, ಶ್ರದ್ಧೆಯಿಂದ ಆತ್ಮಫಲ ಪ್ರಮಾಣಿಕತೆಯಿಂದ ಶಿಸ್ತು ಸಂಯಮದಿಂದ ಸಂಶೋಧನೆ ಗೈಯುತ್ತ ಹಲವಾರು ಎಂ.ಫಿಲ್ ಹಾಗೂ ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ.ವ್ಹಿ.ಜಿ.ಪೂಜಾರವರು ಒಂದು ಸಂಸ್ಥೆ ಮಡುವ ಕೆಲಸವನ್ನು ತಾವೇ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿ ತೋರಿಸಿದ್ದಾರೆ. ಇಂತಹವರನ್ನು ಗುರುತಿಸಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಸಂಘ ಸಂಸ್ಥೆಯವರು ಗೌರವಿಸಿದ್ದಾರೆ.

ಡಾ.ವ್ಹಿ.ಜಿ.ಪೂಜಾರವರ ಬದುಕು ಹಾಗೂ ಸಾಹಿತ್ಯ ಅಧ್ಯಯನದ ಅವಶ್ಯಕತೆಯನ್ನು ಮನಗಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಮತ್ತು ಕ್ಷೇತ್ರ ಕಾರ್ಯ ಹಾಗೂ ಅವರ ಕೃತಿಗಳ ಹಿನ್ನೆಲೆಯ ಆಧಾರದಿಂದ ಈ ಅಧ್ಯಯನವನ್ನು ಮಾಡಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ತಿಳಿಸಲಾಗಿದೆ. ಇಲ್ಲಿ ಪ್ರಸ್ತುತ ಡಾ.ಪೂಜಾರರ ಬದುಕು ಮತ್ತು ಬರಹ ಅವಶ್ಯಕತೆ ಇಂದಿನ ಯುಗದಲ್ಲಿ ಎಷ್ಟರಮಟ್ಟಿಗೆ ಅವಶ್ಯಕವಿದೆ ಎಂಬುದರ ಕುರಿತು ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಡಾ.ವ್ಹಿ.ಜಿ.ಪೂಜಾರ ಜೀವನ ಮತ್ತು ಸಾಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಹಾಗೂ ಮನೆತನ, ಬಾಲ್ಯ, ಜನನ, ಶಿಕ್ಷಣ, ಸಾಹಿತ್ಯಿಕ ಹಿನ್ನಲೆ ಹಾಗೂ ಪರಿಸರ, ಅವರ ಕೌಟುಂಬಿಕ ಜೀವನ, ಪ್ರಶಸ್ತಿ ಗೌರವಗಳು ವ್ಯಕ್ತಿತ್ವವನ್ನು ವಿವರಿಸಲಾಗಿದೆ.

ಅಧ್ಯಾಯ-೨

ಡಾ.ವ್ಹಿ.ಜಿ.ಪ್ರಜಾರರ ಜೀವನ ಮತ್ತು ಸಾಧನೆ.

- ಮನೆತನ
- ಜನನ
- ಬಾಲ್ಯ
- ಶಿಕ್ಷಣ
- ಸಾಹಿತ್ಯಿಕ ಹಿನ್ನಲೆ ಹಾಗೂ ಪರಿಸರ
- ಕೌಟಂಬಿಕ ಜೀವನ
- ಪ್ರಶಸ್ತಿ ಗೌರವಗಳು
- ವ್ಯಕ್ತಿತ್ವ

ಅಧ್ಯಾಯ – ೨
ಡಾ.ವ್ಹಿ.ಜಿ.ಪೂಜಾರರ ಜೀವನ ಮತ್ತು ಸಾಧನೆ.

ಇವರು ಮೂಲತಃ ಬೆಳಗಾವಿ ಜಿಲ್ಲೆಯವರಾದ ಡಾ.ವ್ಹಿ.ಜಿ ಪೂಜಾರರು ಮಧ್ಯಮ ವರ್ಗದಿಂದ ಬಂದಿದ್ದರೂ ತಮ್ಮ ಸ್ವ ಪ್ರಯತ್ನ ಅಚಲ ನಿಷ್ಠೆ, ಸಹನಶೀಲತೆ ಈ ಮುಂತಾದ ಗುಣಗಳು ಅವರಲ್ಲಿ ಇವೆ.

ಅವು ಇಲ್ಲಿಯ ತನಕ ಸುಮಾರು ೧೦೦ ಸಂಶೋಧನಾತ್ಮಕ ಲೇಖನಗಳು ಮತ್ತು ಸುಮಾರು ೫೦ ರಷ್ಟು ವಿಚಾರ ಸಂಕೀರಣ, ಸಭೆ, ಸಮ್ಮೇಳಗಳಲ್ಲಿ ಮಂಡಿಸಿದ ಸಂಶೋಧನಾ ಪ್ರಬಂಧಗಳು ಮತ್ತು ಸುಮಾರು ೪೩ ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಅಧ್ಯಾಯದಲ್ಲಿ ಡಾ. ಪೂಜಾರರ ಜೀವನ ಮತ್ತು ಸಾಧನೆಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

೧) ಮನೆತನ :

ಅತೀ ಶ್ರೀಮಂತರೂ ಅಲ್ಲದ ಅತೀ ಬಡವರೂ ಅಲ್ಲದ ಮಧ್ಯಮ ವರ್ಗದ ಕುಟುಂಬದಲ್ಲಿ ಡಾ. ಪೂಜಾರರು ಜನಿಸಿದರು. ಅವರ ಪೂರ್ವಜರು ಊರಿನ ಹನುಮಂತ ದೇವರ ಪೂಜಾರಿಕೆ ಮಡುತ್ತಿದ್ದು ಹೂವು, ಪತ್ರಿಗಳನ್ನು ಮನೆ ಮನೆಗೆ ಕೊಟ್ಟು ಜೀವನ ನಡೆಸುತ್ತಿದ್ದರು. ತಂದೆ ಗಿರಿಮಲ್ಲಪ್ಪ ತಾಯಿ ಹನುಮವ್ವ, ಇವರಿಗೆ ಒಟ್ಟು ಆರು ಜನ ಮಕ್ಕಳು ಇಬ್ಬರು ಗಂಡು ಮಕ್ಕಳು ನಾಲ್ಕು ಜನ ಹೆಣ್ಣುಮಕ್ಕಳು ಅವರಲ್ಲಿ ಎರಡನೆಯ ಮಗನಾಗಿ ಡಾ.ವ್ಹಿ.ಜಿ.ಪೂಜಾರವರು ಜನಿಸಿದರು.

೨) ಜನನ :

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಒಂದು ಚಿಕ್ಕ ಗ್ರಾಮವಾದ (ಹೊಸೂರು) ಚಿಪ್ಪಲಕಟ್ಟೆಯಲ್ಲಿ ಕ್ರಿ.ಸ. ೧೯೫೨ ಜೂನ ೧ ರಂದು ಡಾ.ವ್ಹಿ.ಜಿ.ಪೂಜಾರರು ಜನಿಸಿದರು. ಅವರ ಪೂರ್ಣ ಹೆಸರು ವೆಂಕಪ್ಪ ಗಿರಿಮಲ್ಲಪ್ಪ ಪೂಜಾರ ಅವರ ತಂದೆ ಶ್ರೀ ಗಿರಿಮಲ್ಲಪ್ಪ ಹಾಗೂ ತಾಯಿ ಶ್ರೀಮತಿ ಹನುಮವ್ವ,

೩) ಬಾಲ್ಯ ಶಿಕ್ಷಣ:

ಡಾ. ಪೂಜಾರರದು ಮಧ್ಯಮ ವರ್ಗದ ಕುಟುಂಬವಾದುದರಿಂದ ಅವರಿಗೆ ಹೆಚ್ಚಿನ ಸೌಲಭ್ಯಗಳೇನೂ ಒದಗಲಿಲ್ಲ ಆದರೂ ಅವರ ವಿದ್ಯೆಯ ಹಂಬಲ ಅವರನ್ನು ಮುಂದೆ ಸಾಗಲು ಪ್ರೇರಣೆಯನ್ನೊದಗಿಸಿತು.

೧ ನೇ ತರಗತಿಯಿಂದ ೭ ನೇ ತರಗತಿವರೆಗೆ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹುಟ್ಟೂರಾದ ಹೊಸೂರಿನಲ್ಲಿ ಕಲಿತರು. ೭ನೇ ತರಗತಿಯಲ್ಲಿ ಅಂದು ಪಬ್ಲಿಕ್ ಪರೀಕ್ಷೆಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಹೊಸೂರಿನ ಸಮೀಪದ ಹಾಲಹಳ್ಳಿ ಎಂಬ ಗ್ರಾಮದಲ್ಲಿ ಅವರ ಪರೀಕ್ಷಾ ಕೇಂದ್ರವಿತ್ತು. ಅಲ್ಲಿ ೧೦೦ಕ್ಕೆ ಶೇಕಡ ೮೯ ಪ್ರತಿಶತ ಅಂಕಗಳನ್ನು ಪಡೆದು ಆ ಪರೀಕ್ಷಾ ಕೇಂದ್ರಕ್ಕೆ ಮೊದಲನೆಯ ಸ್ಥಾನ ಪಡೆದು ಉತ್ತೀರ್ಣರಾದರು.

ಡಾ. ಪೂಜಾರರಿಗೆ ಈ ನಡುವೆ ಉಂಟಾದ ಒಂದು ಅಪಘಾತವೆಂದರೆ, ಸುಮಾರು ೧೨ ವರ್ಷದವರಾಗಿದ್ದಾಗಲೇ ಅವರ ತಂದೆಯವರು ತೀರಿಹೋದದ್ದು, ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ತಂದೆಯ ಆಸರೆಯನ್ನು ಕಳೆದುಕೊಂಡ ಮೇಲೆ ಅವರ ತಾಯಿಯೇ ಅವರಿಗೆ ತಂದೆಯ ಸ್ಥಾನದಲ್ಲಿ ನಿಂತು ಕಾಳಜಿ ವಹಿಸಿ ಮುಂದಿನ ವಿದ್ಯಾಭ್ಯಾಸ ಕಲಿಯಲು ನೆರವಾದರು. ಅವರ ಪ್ರೌಢ ಮಾಧ್ಯಮಿಕ ಶಿಕ್ಷಣವು ಹುಟ್ಟೂರಿನ ಸಮೀಪದ ಹೊಸಕೋಟೆ ಎಂಬ ಊರಿನಲ್ಲಿ ನಡೆಯಿತು. ೮ನೇ ತರಗ ತಿಯಿಂದ ೧೦ನೇ ತರಗತಿವರೆಗೆ ಅಲ್ಲಿಯೇ ಓದಿದರು. ಮುಂದೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶಾಲೆಯಲ್ಲಿರುವ ೩೦ ಜನ ವಿದ್ಯಾರ್ಥಿಗಳಲ್ಲಿ ಕೇವಲ ೦೪ ವಿದ್ಯಾರ್ಥಿಗಳು ಮಾತ್ರ ಪಾಸಾಗಿದ್ದರು. ಅವರಲ್ಲಿ ಪೂಜಾರರು ಒಬ್ಬರು. ೧೯೬೯ರಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದರು.

ಮುಂದಿನ ಕಾಲೇಜು ಮಟ್ಟದ ವಿದ್ಯಾಭ್ಯಾಸಕ್ಕಾಗಿ ಬೆಳಗಾವಿಗೆ ಹೋದರು. ಅಲ್ಲಿನ ಲಿಂಗರಾಜ ಕಾಲೇಜಿನಲ್ಲಿ ಪಿ.ಯು.ಸಿ ಮತ್ತು ಬಿ.ಎ ಮಟ್ಟದ ಕಾಲೇಜು ವಿದ್ಯಾಭ್ಯಾಸವನ್ನು ಕೊಳ್ಳುರ ಸ್ವಾಮಿ ದೇವರ ಉಚಿತ ಪ್ರಸಾದ ನಿಲಯದಲ್ಲಿ ಇದ್ದುಕೊಂಡು ಅಭ್ಯಾಸ ಪೂರ್ಣಗೊಳಿಸಿದರು. ನಂತರದಲ್ಲಿ ಬಿ.ಎ ಪದವಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಇಡೀ ಕಾಲೇಜಿಗೆ ಪ್ರಥಮ ದರ್ಜೆಯಲ್ಲಿ ಪಾಸಾದರು. ಬಿ.ಎ ಪದವಿಯಲ್ಲಿ ಅವರ ಮುಖ್ಯ ವಿಷಯ ಕನ್ನಡ ಆದುದರಿಂದ ಮತ್ತು ಅವರ ಪ್ರಥಮ ದರ್ಜೆ ಪಡೆದುದ್ದರಿಂದ ಆಗ ತಾನೇ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತ್ತಕೋತ್ತರ ಕೇಂದ್ರ ಗುಲಬರ್ಗಾದಲ್ಲಿ ಪ್ರಾರಂಭವಾಗಿತ್ತು. ಅಲ್ಲಿ ಅವರಿಗೆ ಎಂ.ಎ ಪದವಿಯಲ್ಲಿ

ಪ್ರವೇಶ ನೀಡಲಾಯಿತು. ಈ ಸ್ನಾತಕೋತ್ತರ ಪದವಿಯನ್ನು ಓದುತ್ತಿರುವ ಸಂದರ್ಭದಲ್ಲಿ ೧೯೭೩ರಿಂದ ೧೯೭೫ರ ಎರಡು ವರ್ಷದ ಅವಧಿಯಲ್ಲಿ ಡಾ.ಪೂಜಾರರು 'ಕರ್ನಾಟಕ ಸಂಘ'ದ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು.

ಮುಂದೆ ಎಂ.ಎ ತರಗತಿಯಲ್ಲಿ ಓದುತ್ತಿದ್ದ ೫೦ ಜನ ವಿದ್ಯಾರ್ಥಿಗಳಲ್ಲಿ ಕೇವಲ ಮೂರು ಜನರು ಪ್ರಥಮ ದರ್ಜೆಯಲ್ಲಿ ಪಾಸಾದರು. ಅವರಲ್ಲಿ ಡಾ.ಪೂಜಾರರು ಒಬ್ಬರು.

ನಂತರದಲ್ಲಿ ಡಾ.ಪೂಜಾರರಿಗೆ ವಿಶ್ವವಿದ್ಯಾಲಯ ಆಯೋಗದ ಯು.ಜಿ.ಸಿ ರಿಸರ್ಚ ಫೆಲೋಶಿಪ್ ದೊರೆತುದರಿಂದ ಅವರು ಎಲ್ಲಿಯು ಕೆಲಸಕ್ಕಾಗಿ ಹುಡುಕಾಟ ನಡೆಸದೇ ನೇರವಾಗಿ ಸಂಶೋಧನೆಯಲ್ಲಿ ತೊಡಗಿಕೊಂಡರು. ೧೯೭೯ರಲ್ಲಿ ನಂತರ ಅಧ್ಯಯನದ ೪ನೇ ವರ್ಷದ ಅವಧಿಯಲ್ಲಿ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸುರಪುರದ ಶ್ರೀ ಪ್ರಭು ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಕ ವೃತ್ತಿಯಲ್ಲಿ ತೊಡಗಿ ಕೊಂಡರು. ಕ್ರಿ.ಶ ೧೯೮೨ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪ್ರಥಮವಾಗಿ ಪಿ.ಎಚ್.ಡಿ ಪದವಿಯನ್ನು ಪಡೆದರು. ಸುರಪುರದ ಶ್ರೀ ಪ್ರಭು ಕಾಲೇಜಿನಲ್ಲಿ ೧೯೭೯ ರಿಂದ ೧೯೮೩ ರವರೆಗೆ ಅಧ್ಯಾಪಕ ವೃತ್ತಿಯಲ್ಲಿ ತೊಡಗಿದ್ದಾಗ ಮುಂದೆ ಆ ಹುದ್ದೆ ಖಾಯಂ ಆಗುವ ಹೊತ್ತಿನಲ್ಲಿಯೇ ಡಾ. ಪೂಜಾರರಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಬ ಸಂಸ್ಥೆಯಲ್ಲಿ ಸುಮಾರು ೨೫ಜನರ ಪೈಪೋಟಿಯಲ್ಲಿ ಅವರಿಗೆ ಅಧ್ಯಾಪಕ ಹುದ್ದೆ ದೊರೆಯಿತು. ಕ್ರಿ.ಶ. ೧೯೮೩ ಅಗಷ್ಟ ೬ನೇ ತಾರೀಖಿನಂದು ಪೂಜಾರರು ಗುಲಬರ್ಗಾ ವಿಶ್ವವಿದ್ಯಾಲಯದ ಅಧ್ಯಾಪಕ ಹುದ್ದೆಗೆ ಖಾಯಂ ಆಗಿ ನೇಮಕಗೊಂಡರು. ಈ ಸದಾವಕಾಶ ತಮಗೆ ದೊರೆಯಲು ತಮ್ಮ ಸ್ವಪ್ರಯತ್ನ ಪ್ರತಿಭೆ ಮತ್ತು ಆತ್ಮವಿಶ್ವಾಸದ ಪ್ರತಿಫಲ ಮತ್ತು ತಮ್ಮ ಗುರುಗಳಾದ ಡಾ. ಬಿ.ಬಿ.ಹೆಂಡಿಯವರ ಆಶಿರ್ವಾದ ಎಂದು ಸ್ವತ: ಡಾ. ಪೂಜಾರರು ಹೇಳುತ್ತಾರೆ.

ಗುಲಬರ್ಗಾ ವಿಶ್ವವಿದ್ಯಾಲಯದ ಅಧ್ಯಾಪಕನಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಮುಂದೆ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರವಾಚಕರ ಹುದ್ದಗೆ ೧೯೮೩ರಲ್ಲಿ ನೇಮಕವಾದರು. ತದನಂತರದಲ್ಲಿ ೧೯೯೫ರಲ್ಲಿ ಪ್ರಾಧ್ಯಾಪಕ ಹುದ್ದೆಗೆ ಮೇರಿಟ್ ಪ್ರಮೋಷನ್ ಸ್ಕೀಮನಲ್ಲಿ ನೇಮಕಗೊಂಡರು. ಈ ರೀತಿಯಾಗಿ ಡಾ.ಪೂಜಾರರು ತಾವು ನಡೆದು ಬಂದ ದಾರಿಯನ್ನು ಹಿಂತಿರುಗಿ ನೋಡದೆಯೇ ಮುಂದೆ ಮುಂದೆ ಹೆಜ್ಜೆ ಹಾಕುತ್ತಾ ಗೆಲುವಿನ ಮೆಟ್ಟಿಲುಗಳನ್ನೇರುತ್ತಾ ಬಂದಿದ್ದಾರೆ. ಹಂತ ಹಂತವಾಗಿ ಕರ್ನಾಟಕದ ಒಳಗೂ ಹೊರಗೂ ಇರುವಂತಹ ಎಲ್ಲಾ ಕನ್ನಡ ಅಧ್ಯಯನ ಸಂಸ್ಥೆಯೊಳಗೆ ಮತ್ತು ಕೇಂದ್ರದೊಳಗೆ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಕೆಲಸ ಕಾರ್ಯಗಳಲ್ಲಿ ಸಕ್ರೀಯವಾಗಿ ಬಿ.ಇ.ಓ ಸದಸ್ಯರಾಗಿ ಡಾ. ಪೂಜಾರರು ಪಾಲ್ಗೊಳ್ಳುತ್ತ ಬಂದಿದ್ದಾರೆ.

ಇದಲ್ಲದೆ ಹೈದ್ರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯ ಮತ್ತು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಸದಸ್ಯರಾಗಿ ಮತ್ತು ಶಿವಮೊಗ್ಗ ಕುವೆಂಪು ವಿಶ್ವಿವಿದ್ಯಾಲಯ,ಹಂಪಿ ಕನ್ನಡ ವಿಶ್ವವಿದ್ಯಾಲಯ ಮತ್ತು ಮೈಸೂರು ಮಾನಸ ಗಂಗೋತ್ರಿ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಾಪಕ, ಪ್ರವಾಚಕ,ಪ್ರಾಧ್ಯಾಪಕ ಆಯ್ಕೆ ಸಮಿತಿಯ ಸದಸ್ಯರಾಗಿ ಕೆಲಸ ನಿರ್ವಹಿಸುತ್ತಾ ಬಂದಿದ್ದಾರೆ.

ಇದಲ್ಲದೆ 'ಹೋಳಿ ಹುಣ್ಣಿಮೆ' ಮತ್ತು 'ಕಾರ ಹುಣ್ಣಿಮೆ' ಎಂಬ ಚಿತ್ರಕಥೆಯನ್ನು ಮೈಸೂರಿನ 'ಭಾರತೀಯ ಭಾಷಾ ಸಂಸ್ಥಾನ' ಕೇಂದ್ರದಲ್ಲಿ, ಕೇಂದ್ರ ಸರಕಾರದ (ಸ್ಕೀಮ್) 'ಭಾಷಾ ಮಂದಾಕಿನಿ' ಎಂಬ ಯೋಜನೆಯಲ್ಲಿ ಬರೆದು ಕೊಟ್ಟಿದುದಲ್ಲದೆ, ಅವುಗಳನ್ನು ಧಾರವಾಡ ಮತ್ತು ಗದಗ ಜಿಲ್ಲೆಗಳ ಕೆಲವು ಕಡೆ ಅದರ ಚಿತ್ರೀಕರಣ ವನ್ನು ಕೇಂದ್ರವು ನೆರವೇರಿಸಿದ ಸಂದರ್ಭದಲ್ಲಿ ಡಾ.ಪೂಜಾರರು ಸ್ವತ: ಅದರಲ್ಲಿ ಪಾಲ್ಗೊಂಡುದುದಲ್ಲದೆ ತಾವು ಸಹ ಕೆಲವು ಮಾತುಗಳನ್ನು ಹೇಳಿದ್ದಾರೆ.

ಹೋಳಿ ಹುಣ್ಣಿಮೆಯ ವೈಶಿಷ್ಟ್ಯತೆಗಳೇನು? ಅದನ್ನು ಏಕೆ ಆಚರಿಸುತ್ತಾರೆ? ಹೋಳಿ ಹುಣ್ಣಿಮೆಯಲ್ಲಿ ಕಾಮ ದಹನವನ್ನು ಏಕೆ ಮಾಡುತ್ತಾರೆ? ಅದರ ಮೂಲ ಆಶಯವೇನು? ಎಂದಾಗ ಮನುಷ್ಯನಲ್ಲಿರುವ ಕಾಮ ರೂಪಿ ವಿಕೃತ ಭಾವನೆಗಳನ್ನೆಲ್ಲ ಸುಟ್ಟು ಹಾಕಿದಾಗ ಮನುಷ್ಯನಲ್ಲಿ ಸಾತ್ವಿಕ ಭಾವನೆಗಳು ಜನ್ಮವೆತ್ತುತ್ತವೆ. ಮುನುಷ್ಯನಲ್ಲಿರುವ ಕಾಮ ಎನ್ನುವ ಒಂದು ಇಚ್ಛೆ ಈ ಜಗತ್ತನ್ನನೇ ನಡೆಸುವಂತಹದು ಮತ್ತು ಅದು ಸರಿಯಾದ ಮಾರ್ಗದಲ್ಲಿದ್ದಾಗ ಮಾತ್ರ ಜಗತ್ತಿನ ಮುನ್ನಡೆ ಸಾಧ್ಯ. ಆದರೆ ಅದು ವಿಕೃತವಾಗಿದ್ದರೆ, ಅದರಿಂದ ಜಗತ್ತಿನ ವಿನಾಶವಾಗುವುದರಿಂದಾಗಿ ಅದನ್ನು ಸುಟ್ಟುಹಾಕುವುದೇ ಒಳಿತು ಎಂಬುದನ್ನು ಕಾಮದಹನ ಎಂಬ ಒಂದು ಸಾಂಸ್ಕೃತಿಕ ಆಚರಣೆಯಾಗಿ ನಡೆದು ಬಂದುದರ ಕುರಿತು ಈ ಲೇಖನದಲ್ಲಿದೆ. ಅದೇ ರೀತಿ 'ಕಾರ ಹುಣ್ಣಿಮೆ' ಲೇಖನದಲ್ಲಿಯೂ ಸಹಿತ ಕಾರಹುಣ್ಣಿಮೆಯ ವೈಶಿಷ್ಟ್ಯಗಳೇನು? ಅದನ್ನು ಆಚರಿಸಲು ಕಾರಣವೇನು? ಕಾರ ಹುಣ್ಣಿಮೆಯಲ್ಲಿ ಎಲ್ಲಾ ಎತ್ತುಗಳನ್ನು ಅಲಂಕರಿಸಿ ಮೆರೆಸುವುದು ಮತ್ತು ಅವುಗಳಲ್ಲಿ ಪಂದ್ಯಗಳನ್ನು ಕಟ್ಟುವುದು, ಗೆದ್ದ ಎತ್ತುಗಳಿಗೆ ಸತ್ಕರಿಸುವುದು ಈ ಎಲ್ಲಾ ವಿವರಣೆಗಳನ್ನು ಈ ಲೇಖನ ಒಳಗೊಂಡಿದೆ. ಈ ಡಾಕ್ಯುಮೆಂಟ್ರಿ ಚಿತ್ರಗಳು ಈಗ ಭಾರತದ ಮೂಲೆ ಮೇಲೆಯಲ್ಲಿಯೂ ಪ್ರಸಾರವಾಗಿದೆ.

---

೧) ಡಾ.ವ್ಹಿ.ಜಿ.ಪೂಜಾರ ಅವರೊಂದಿಗೆ ಸಂದರ್ಶನದ ದಿನಾಂಕ:೦೪-೦೩-೨೦೧೧

೨) ಡಾ.ವ್ಹಿ.ಜಿ.ಪೂಜಾರ ಅವರೊಂದಿಗೆ ಸಂದರ್ಶನದ ದಿನಾಂಕ: ೧೭-೦೩-೨೦೧೧

ಡಾ. ಪೂಜಾರರ ಮಾರ್ಗದರ್ಶನಲ್ಲಿ ಸುಮಾರು ಹದಿನೈದು ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು ಮತ್ತು ಸುಮಾರು ಹನ್ನೊಂದು ಜನ ವಿದ್ಯಾರ್ಥಿಗಳು ಪಿ.ಎಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ ಈಗ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿ ಮತ್ತು ಕಲಾನಿಕಾಯದ ಡೀನ್ ಆಗಿ ಡಾ.ಪೂಜಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಇದಲ್ಲದೆ ೨೦೦೫ವಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ಕಲಾನಿ ಕಾಯದ ಡೀನರಾಗಿ ಹೀಗೆ ವಿವಿಧ ಹುದ್ದೆಗಳನ್ನು ಅಲಂಕರಿಸಿ ಸಮರ್ಥವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿದರು.

ಡಾ. ವ್ಹಿ.ಜಿ.ಪೂಜಾರ ಅವರು ಪ್ರಾಧ್ಯಾಪಕರಾಗಿ, ಆಡಳಿತಗಾರರಾಗಿ, ಶಿಕ್ಷಣ ತಜ್ಞರಾಗಿ ಹಲವು ಜವಾಬ್ದಾರಿಗಳನ್ನು ತುಂಬ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದಾರೆ. ಮೂಲತ: ಅವರು ಬರಹಗಾರು, ಸಂಶೋಧಕರು, ವಿಮರ್ಶಕರೆಂದು ಖ್ಯಾತಿ ಪಡೆದಿರುವರು. ವಚನ ಸಾಹಿತ್ಯ ಹಾಗೂ ಭಾಷಾವಿಜ್ಞಾನ ಕ್ಷೇತ್ರಗಳ್ಲಲಿ ಅವರು ವಿಶೇಷವಾದ ಅಧ್ಯಯನ ನಡೆಸಿ ಮಹತ್ವದ ಕೃತಿಗಳನ್ನು ಹೊರ ತಂದಿದ್ದಾರೆ.

ಅವರು ಕಾಲೇಜಿನಲ್ಲಿ ಉಪನ್ಯಾಸಕರಾಗಿರುವಾಗಲೇ ಡಾ.ವ್ಹಿ.ಜಿ.ಪೂಜಾರ ಅವರು ನಾಟಕ, ಕವನಗಳನ್ನು ಬರೆಯುವ ಹವ್ಯಾಸ ಹೊಂದಿದ್ದರು. ಇವರು ಮುಂದೆ ಬರವಣಿಗೆಯ ಮಾರ್ಗವನ್ನೆ ಬದಲಿಸಿಕೊಂಡರು. "ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು' ಎಂಬ ಸಂಶೋಧನಾ ಕ್ಷೇತ್ರಕ್ಕೆ ಧುಮುಕಿದರು. ಕೇವಲ ಇವರು ಸಾಹಿತ್ಯದ ಒಂದೇ ಪ್ರಕಾರಕ್ಕೆ ಅಂಟಿಕೊಳ್ಳದೇ ಸಂಶೋಧನೆ, ಸಮೀಕ್ಷೆ, ನಾಟಕ ಚರಿತ್ರೆ, ವಿಮರ್ಶೆ ಹೀಗೆ ಅವರ ಬರವಣಿಗೆಯ ಕ್ಷೇತ್ರ ವಿಶಾಲವಾಯಿತು.

ಕನ್ನಡದಲ್ಲಿ ಇಂದು ಕಥೆ ಕಾದಂಬರಿ ಬರೆದವರ ಸಂಖ್ಯೆಯೇ ಹೆಚ್ಚಾಗಿದೆ. ಸಂಶೋಧನೆ ಹಾಗೂ ವಿಮರ್ಶಾ ಕ್ಷೇತ್ರದಲ್ಲಿ ಕೃಷಿ ಮಾಡಿದವರು ವಿರಳ. ಅಂತಹ ವಿರಳರಲ್ಲಿ ಡಾ.ವ್ಹಿ.ಜಿ.ಪೂಜಾರ ಅವರು ಎದ್ದು ಕಾಣುವಂಥವರು, ವಚನ ಸಾಹಿತ್ಯ, ವೀರಶೈವ ಸಾಹಿತ್ಯ ಹಾಗೂ ಭಾಷಾ ವಿಜ್ಞಾನ ಕ್ಷೇತರಗಳಲ್ಲಿ ಇವರು ವಿಶೇಷ ಪ್ರಾವಿಣ್ಯತೆ ಸಾಧಿಸಿದ್ದಾರೆ. ನಿರಂತರವಾಗಿ ಕೃತಿಗಳನ್ನು ಪ್ರಕಟಿಸುತ್ತಾ ಬಂದ ಇವರು ಸೃಜನಶೀಲ ಬರಹಗಾರರೂ ಹೌದು, ವಚನ ಸಾಹಿತ್ಯದ ಬಗೆಗಂತೂ ಇವರದು ಅಪಾರವಾದ ಆಸಕ್ತಿ "ವಚನ ಸಾಹಿತ್ಯ ಪರಂಪರೆ", "ಆಧುನಿಕ ವಚನ ಸಾಹಿತ್ಯ", "ಶರಣ ಸಾಹಿತ್ಯ ಮಾರ್ಗ', "ನುಲಿಯ ಚಂದಯ್ಯ", ಜೇಡರ ದಾಸಿಮಯ್ಯ" ಮುಂತಾದವು ಇವರ ಮಹತ್ವದ ವಚನ ಸಾಹಿತ್ಯ ಕ್ಷೇತ್ರದ ಕೃತಿಗಳು. ವಿಮರ್ಶೆ ಮತ್ತು ಸಂಶೋಧನಾ ಲೇಖನಗಳಿಂದ ಕೂಡಿದ ಇವರ 'ಸಾಹಿತ್ಯ ಸಮಾವೇಶ', 'ಕನ್ನಡ ಸಾಹಿತ್ಯ ಸಂಬಂಧ' ,

'ಕನ್ನಡ ಸಾಹಿತ್ಯ ಸಂಸ್ಕೃತಿ', 'ಸಾಹಿತ್ಯಾನ್ವೇಷಣೆ' ಮುಂತಾದ ಕೃತಿಗಳು ವಿದ್ಯಾರ್ಥಿಗಳು ಮತ್ತು ಸಾಹಿತ್ಯಾಸಕ್ತರಿಗೆ ತುಂಬ ಪ್ರಯೋಜನಕಾರಿ ಯಾಗಿವೆ. ಇವರ ಎಲ್ಲಾ ಕೃತಿಗಳು ಸಾಹಿತ್ಯಾದ ಸೊಬಗಿನೊಂದಿಗೆ ವಿಷಯದ ಪ್ರೌಢಿಮೆಯನ್ನು ಹೊಂದಿರುವುದು ವಿಶೇಷವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು, ಹುಬ್ಬಳ್ಳಿ ಮೂರು ಸಾವಿರ ಮಠ ಮುರಗಿ ೋಡ ಮಹಾಂತ ಶಿವಯೋಗಿಗಳ ಮಠ, ಮೈಸೂರಿನ ಸುತ್ತೂರು ಮಠ, ಬೆಂಗಳೂರಿನ ಬಸವ ಸಮಿತಿ, ಗುಲಬರ್ಗಾ ಪುಸ್ತಕ ಅಕಾಡೆಮಿ ಮುಂತಾದ ಪ್ರಕಟಣ ಸಂಸ್ಥೆಗಳು ಇವರ ಗ್ರಂಥಗಳನ್ನು ಪ್ರಕಟಿಸಿವೆ.

ಇವರು ಸಂಪಾದಿಸಿ ಪ್ರಕಟಿಸಿದ "ಶಬ್ದ ಮಣಿದರ್ಪಣ ಸಂಗ್ರಹ" ರಾಮಪುರ ಬಕ್ಕಪ್ಪಯ್ಯನ ಸ್ವರವಚನ, ತ್ರಿವಿಧಿ, ಕಾವ್ಯ ಮುಂತಾದ ಹಾಗೂ ಆಯ್ದ ಸ್ವರವಚನಗಳು ಈ ಕೃತಿಗಳು ಗುಲಬರ್ಗಾ ವಿಶ್ವವಿದ್ಯಾಲಯದ ಬಿ.ಎ ಹಾಗೂ ಎಂ.ಎ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳಾಗಿವೆ. ವಿದ್ವತ್‌ಪೂರ್ಣವಾದ ಹಾಗೂ ಮೌಲಿಕವಾದ ಒಂದು ನೂರಕ್ಕಿಂತಲೂ ಹೆಚ್ಚು ಇವರ ಸಂಶೋಧನಾ ಲೇಖನಗಳು ನಾಡಿನ ಪ್ರಮುಖ ಪತ್ರಿಕೆ-ಗಳಲ್ಲಿ, ವಿಶ್ವವಿದ್ಯಾಲಯಗಳ ಸಂಶೋಧನಾ ಜರ್ನಲ್‌ಗಳಲ್ಲಿ ಅಚ್ಚಾಗಿವೆ. ಕನಕಪುರ ಹಾಗೂ ಬೆಳಗಾವಿಗಳಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಅಹ್ವಾನಿತರಾಗಿ ಶ್ರೀಯುತರು ತಮ್ಮ ವಿದ್ವತ್ ಪೂರ್ಣವಾದ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಡಾ.ವ್ಹಿ.ಜಿ.ಪೂಜಾರ ಅವರು ಕನ್ನಡದ ಗಣ್ಯ ಪ್ರಾಧ್ಯಾಪಕರು, ವಿದ್ವಾಂಸರು ಹಾಗೂ ಸಂಶೋಧಕರು ಯಾವುದೇ ಹಮ್ಮು ಬಿಮ್ಮು ಇಲ್ಲದೆ ಎಲ್ಲರೊಡನೆ ಬೆರೆಯುವ ಸ್ವಭಾವದವರು.

ಇದಲ್ಲದೆ ಒಂದು ವರ್ಷ ಪ್ರಸಾರಾಂಗದ ನಿರ್ದೇಶಕರಾಗಿ, ಒಂದು ವರ್ಷ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಬಸವಾದಿ ಶರಣ ಸಾಹಿತ್ಯ ಕೇಂದ್ರದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಈ ರೀತಿ ಬಹುಮುಖಿ ಪ್ರತಿಭೆಯನ್ನು ಹೊಂದಿರುವ ಡಾ.ಪೂಜಾರರು ಕೈಯಾಡಿಸದ ಸಾಹಿತ್ಯ ಕ್ಷೇತ್ರವೇ ಇಲ್ಲ. ಸಂಶೋಧನಾ ಕ್ಷೇತ್ರ, ವಿಮರ್ಶಾ ಕ್ಷೇತ್ರ, ಸಂಪಾದನಾ ಕ್ಷೇತ್ರ, ಚರಿತ್ರಾತ್ಮಕ ಪುಸ್ತಕಗಳು ಪಠ್ಯ ಪುಸ್ತಕಗಳು, ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳು, ಭಾಷಾ ಸಾಹಿತ್ಯ ವಚನ ಸಾಹಿತ್ಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬರವಣಿಗೆಯನ್ನು ರೂಢಿಸಿಕೊಂಡು ಬಂದಿದ್ದಾರೆ.

ಇವರ ಪಿ.ಎಚ್.ಡಿ ಪದವಿ ಪಡೆದ ಮಹಾ ಪ್ರಬಂಧ ವಿಷಯವೆಂದರೆ "ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು" ೧೯೮೩ರಲ್ಲಿ ಪಡೆದುಕೊಂಡಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ಕಲಾ ಗಂಗಾ ಸಂಶೋಧನಾ ಪತ್ರಿಕೆಯ ಸಹ ಸಂಪಾದಕ ೧೯೯೬-೯೮ ವೀರಶೈವ ಸಾಹಿತ್ಯ ವಚನ ಸಾಹಿತ್ಯ ಹಾಗೂ ಭಾಷಾ

ವಿಜ್ಞಾನದಲ್ಲಿ ವಿಶೇಷ ಪ್ರಾವಿಣ್ಯತೆಯನ್ನು ಹೊಂದಿದ್ದಾರೆ. ಇದೇ ರೀತಿ ಮುಂದೆಯೂ ಸಾಹಿತ್ಯ ಕ್ಷೇತ್ರಕ್ಕೆ ಅವರ ಅಮೂಲ್ಯವಾದ ಕೊಡುಗೆ ನಿರಂತರವಾಗಿ ದೊರೆಯಲಿ ಎಂದು ಆಶಿಸೋಣ.

ಬೋಧನಾನುಭವ:

ಉಪನ್ಯಾಸಕರು: ಶ್ರೀ ಪ್ರಭು ಮಹಾವಿದ್ಯಾಲಯ ಸುರಪುರ ೧೯೭೯-೮೩
ಉಪನ್ಯಾಸಕರು: ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ೧೯೮೩-೧೯೮೭
ಪ್ರವಾಚಕರು: ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ೧೯೮೭-೧೯೯೫
ಪ್ರಾಧ್ಯಾಪಕರು: ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ೧೯೯೫.

ಆಡಳಿತಾನುಭವ:-

ನಿರ್ದೇಶಕರು: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ೨೦೦೦-೦೧
ನಿರ್ದೇಶಕರು: ಬಸವಾದಿ ಶರಣ ಸಾಹಿತ್ಯ ಕೇಂದ್ರ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ- ೨೦೦೨-೨೦೦೫
ನಿರ್ದೇಶಕರು: ಕಾಲೇಜು ಅಭಿವೃದ್ಧಿ ಮಂಡಳಿ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ- ೨೦೦೩-೨೦೦೪
ಅಧ್ಯಕ್ಷರು: ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಡೀನರು ಕಲಾ ನಿಕಾಯ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ೨೦೦೫-೨೦೦೭
ನಿರ್ದೇಶಕರು: ಹಡಪದ ಅಪ್ಪಣ್ಣ ಅಧ್ಯಯನ ಪೀಠ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ೨೦೦೮

ಸಾಹಿತ್ಯಿಕ ಹಿನ್ನೆಲೆ ಹಾಗೂ ಪರಿಸರ:

ಡಾ. ಪೂಜಾರರಿಗೆ ಮೊದಲಿನಿಂದಲೂ ವಚನ ಸಾಹಿತ್ಯದ ಕಡೆಗೆ ಒಲವು ಹೆಚ್ಚು ಅವರೇ ಹೇಳುವಂತೆ ಅವರ ಸಾಹಿತ್ಯಕ್ಕೆ ಬರವಣಿಗೆಗೆ ಪ್ರೇರಣೆ ಎಂದರೆ ಹನ್ನೆರಡನೆ ಶತಮಾನದ ಶಿವಶರಣರು. ಶಿವಶರಣರ ನಡೆ-ನುಡಿ ಅವರ ಧ್ಯೇಯ ಧೋರಣೆಗಳು ಅವರ ಮೇಲೆ ಗಾಢವಾದ ಪರಿಣಾಮ ಉಂಟು ಮಾಡಿರುವಂತೆ ತೋರುತ್ತದೆ.

ನುಡಿದಂತೆ ನಡೆ ಇದೇ ಜನ್ಮ ಕಡೆ ಎಂದು ಸಾರಿದ ಶಿವಶರಣರ ಮಾತಿನಂತೆ ನುಡಿದಂತೆ ನಡೆಯುವುದು ಅವರ ಉದ್ದೇಶವಾಗಿದೆ. ಮತ್ತು ನಾವು ಬದುಕಿರವವರೆಗೆ ಒಳ್ಳೆಯದನ್ನೇ ಮಾಡಬೇಕು. ಏಕೆಂದರೆ ಇದೇ ಜನ್ಮ ಕೊನೆಯದು, ಪುನ: ಜನ್ಮ

ಎನ್ನುವುದು ಇಲ್ಲ. ಆದ್ದರಿಂದ ಇರುವ ತನಕ ಒಳ್ಳೆಯ ಕಾಯಕವನ್ನು ಮಾಡಿಕೊಂಡು ಪರೋಪಕಾರಿಯಾಗಿ ಬಾಳುವುದು ಲೇಸು ಎಂಬ ಭಾವನೆ ಡಾ. ಪೂಜಾರರು ಹೋಂದಿದ್ದಾರೆ. ಡಾ. ಪೂಜಾರರು ಹೆಚ್ಚಾಗಿ ವಚನ ಸಾಹಿತ್ಯ ಮತ್ತು ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದ್ದು, ಅವರಿಗೆ ಇಷ್ಟವಾದಂತಹ ಸಾಹಿತ್ಯ ಕ್ಷೇತ್ರವೆಂದರೆ 'ವಚನ ಸಾಹಿತ್ಯ' ಅವರ ಹಲವಾರು ಪ್ರಕಟಿತ ಕೃತಿಗಳು ವಚನ ಸಾಹಿತ್ಯಕ್ಕೆ ಸಂಬಂಧಿಸಿದವುಗಳಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ. ಪವಾಡ ಕಥೆಗಳು ಮತ್ತು ಇತರ ಲೇಖನಗಳು, ಇದು ಅವರ ಪ್ರಥಮ ಸಂಶೋಧನಾ ಕೃತಿಯಾಗಿದೆ. ಸ್ವರವಚನಗಳಲ್ಲಿ ವಿಡಂಬನೆ, ಇದು ವಿಮರ್ಶಾ ಕೃತಿಯಾಗಿದೆ. ವೀರಶೈವ ಸಾಹಿತ್ಯದಲ್ಲಿ ಪುರಾಣ ಕಥೆಗಳು 'ಶರಣ ಸಾಹಿತ್ಯ ಮಾರ್ಗ' ಶರಣರ ಎರಡು ನಾಟಕಗಳು ಕನ್ನಡ ಸಾಹಿತ್ಯ ಸಂಬಂಧ ಇದು ವಿಮರ್ಶೆ ಮತ್ತು ಸಂಶೋಧನಾ ಲೇಖನಗಳನ್ನೊಳಗೊಂಡ ಕೃತಿಯಾಗಿದೆ. ವಚನ ಸಾಹಿತ್ಯ, ಪರಂಪರೆ ಆಧುನಿಕ ವಚನ ಸಾಹಿತ್ಯ, ತೊಂಟದ ಸಿದ್ಧಲಿಂಗ ಶಿವಯೋಗಿ , ಷಡಕ್ಷರದೇವ, ನುಲಿಯ ಚಂದಯ್ಯ, ಜೇಡರ ದಾಸಿಮಯ್ಯ, ಹಡಪದ ಅಪ್ಪಣ್ಣ ಮುಂತಾದವುಗಳು.

ಡಾ. ಪೂಜಾರ ಪ್ರಕಟಿತ ೪೩ ಕೃತಿಗಳಲ್ಲಿ ಅವರಿಗೆ ಬಹಳ ಇಷ್ಟವಾದ ಕೃತಿ "ಕನ್ನಡ ಸಾಹಿತ್ಯ ಸಂಬಂಧ" ಅವರೇ ಹೇಳುವಂತೆ ಈ ಕೃತಿಯಲ್ಲಿ ಮಿಮರ್ಶಾ ಲೇಖನಗಳು, ಚರಿತ್ರಾತ್ಮಕ ಲೇಖನಗಳು, ಸಂಶೋಧನಾ ಲೇಖನಗಳು, ಜಾನಪದ ಲೇಖನಗಳು ಇದ್ದು ಈ ಎಲ್ಲಾ ಲೇಖನಗಳು ಒಂದು ಪಿ.ಎಚ್.ಡಿ ಮಹಾ ಪ್ರಬಂಧ ವ್ಯಾಪ್ತಿಯನ್ನು ಒಳಗೊಂಡಿದೆ. ಇದು ಅವರ ಪ್ರತಿಭೆ ಮತ್ತು ಪರಿಶ್ರಮಬಂದಾಗಿ ಹೊರಬಂದ ವಿಮರ್ಶೆ ಮತ್ತು ಸಂಶೋಧನಾ ಕೃತಿಯಾಗಿದೆ.

ಡಾ.ಪೂಜಾರರಿಗೆ ತೃಪ್ತಿನೀಡಿದ ಕೃತಿ (ಪ್ರಕಟಿತ ೪೩ ಕೃತಿಗಳಲ್ಲಿ ಯಾವುದೆಂದರೆ) "ರಾಮಪೂರ ಬಕ್ಕಪ್ಪಯ್ಯನ ಸ್ವರ ವಚನ ಮತ್ತು ತ್ರಿವಿಧಿಗಳು" ಏಕೆಂದರೆ ಹೈದ್ರಾಬಾದ ಕರ್ನಾಟಕ ಭಾಗದ ಪ್ರಸಿದ್ಧಕವಿಯಾದ ರಾಮಪೂರ ಬಕ್ಕಪ್ಪಯ್ಯನ ಸ್ವರವಚನಗಳನ್ನು ಸಂಗ್ರಹಿಸಿದ್ದು ಮತ್ತು ಪ್ರಥಮ ಬಾರಿಗೆ ಪ್ರಕಟಣೆಯ ಕಾರ್ಯ ಕೈಗೊಂಡಿರುವುದು ಅವರಿಗೆ ಪೂರ್ಣ ತೃಪ್ತಿ ನೀಡಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಡಾ.ಪೂಜಾರರು ನಿರಂತರವಾದ ಅಧ್ಯಯನ ನಡೆಸಿಕೊಂಡು ಬಂದಿದ್ದು, ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸಿದ್ದೇನೆ ಎನ್ನುವಲ್ಲಿ ಅವರ ವಿನ ಗಾಂಭೀರ್ಯತೆ ಎದ್ದು ಕಾಣುತ್ತದೆ.

---

೩) ಸಂದರ್ಶನ:ಡಾ.ವ್ಹಿ.ಜಿ.ಪೂಜಾರ, ಗುಲಬರ್ಗಾ ದಿನಾಂಕ: ೦೨-೦೪-೨೦೧೧

೪) ಸಂದರ್ಶನ:ಡಾ.ವ್ಹಿ.ಜಿ.ಪೂಜಾರ, ಗುಲಬರ್ಗಾ ದಿನಾಂಕ: ೦೮-೦೪-೨೦೧೧

ಡಾ. ಪೂಜಾರ ಸಾಧನೆಯನ್ನು ಕಂಡು ಅನೇಕ ಪ್ರಶಸ್ತಿ ಗೌರವಗಳು ಅವರನ್ನು ಹುಡುಕಿಕೊಂಡು ಬಂದಿವೆ. ಅವುಗಳಲ್ಲಿ 'ಸಾಹಿತ್ಯ ಸಮಾವೇಶ' ಗ್ರಂಥಕ್ಕೆ 'ಕಾವ್ಯಾನಂದ ಪ್ರಶಸ್ತಿ' ಮತ್ತು ಇದೇ ಗ್ರಂಥಕ್ಕೆ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪುರಸ್ಕಾರವು ದೊರೆತಿದೆ. ಕನ್ನಡ ಸಾಹಿತ್ಯ ಸಂಬಂಧ ಕೃತಿಗೆ ಹುಬ್ಬಳ್ಳಿ ಮೂರು ಸಾವಿರ ಮಠದ ಸಾಹಿತ್ಯ ಪ್ರಶಸ್ತಿ ದೊರೆತಿದೆ. ಕನ್ನಡ ಸಾಹಿತ್ಯ ಸಂಸ್ಕೃತಿ ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಮತ್ತು ಸಾಹಿತ್ಯಾನ್ವೇಷಣೆ ಕೃತಿಗೆ ಗೋರೂರು ಸಾಹಿತ್ಯ ಪ್ರತಿಷ್ಠಾನದ ಪ್ರಶಸ್ತಿ ಮತ್ತು ಆರ್.ಎಸ್.ಹುಲಗಬಾಳಿ ಪಾರಲೌಕಿಕ ಸಾಹಿತ್ಯ ಪ್ರಶಸ್ತಿ ದೊರೆತಿದೆ. ಕನ್ನಡ ಭಾಷಾ ಸಮೀಕ್ಷೆ ಕೃತಿಗೆ ಕನ್ನಡ ಮತ್ತು ಸಂಸ್ಕೃತಿಇಲಾಖೆಯ ಪುರಸ್ಕಾರ ದೊರೆತಿದೆ.

ಇಷ್ಟೆಲ್ಲಾ ೧೦ ಪ್ರಶಸ್ತಿಗಳಲ್ಲಿ ಅವರಿಗೆ ಹೆಚ್ಚಿನ ಸಂತೋಷ ನೀಡಿರುವ ಪ್ರಶಸ್ತಿಗ ಳೆಂದರೆ 'ಸಾಹಿತ್ಯನ್ವೇಷಣೆ' ಕೃತಿಗೆ ದೊರೆತ ಆರ್.ಎಸ್.ಹುಲಗಬಾಳಿ ಪಾರಲೌಕಿಕ ಸಾಹಿತ್ಯ ಪ್ರಶಸ್ತಿ ಮತ್ತು 'ಕನ್ನಡ ಸಾಹಿತ್ಯ ಸಂಸ್ಕೃತಿ' ಕೃತಿಗೆ ದೊರೆತ ಗುಲಬರ್ಗಾ ವಿಶ್ವ ವಿದ್ಯಾಲಯದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು.

ಡಾ. ಪೂಜಾರರು ತಮ್ಮ ಮುಂದಿನ ಹೊರಬರಲಿರುವ ಕೃತಿಯೂ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಒಂದು ಮಹತ್ವವಾದ ಕೃತಿ ಬರೆಯುವ ಯೋಜನೆ ಇದೆ ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಆಗಿ ಹೋದಂತಹ 'ಸಂಗವಿಭು' ಎಂಬ ಕವಿಯು 'ಕುಮಾರ ವಿಜಯ' ಎಂಬ ಕಾವ್ಯವನ್ನು ಚಂಪೂ ರೂಪದಲ್ಲಿ ಬರೆದಿರುವನು ಸಧ್ಯದ ಆ ಕೃತಿಯ ಸಂಪಾದನೆಯಲ್ಲಿ ತೊಡಗಿದ್ದಾರೆ. ಶೀಘ್ರದಲ್ಲಿಯೇ ಆ ಕೃತಿ ಹೊರ ತರುವ ಯೋಜನೆ ಹಾಕಿಕೊಂಡಿದ್ದೇನೆ ಎಂದು ಹೇಳುತ್ತಾರೆ.

ಡಾ. ಪೂಜಾರರ ದೃಷ್ಟಿಯಲ್ಲಿ ಬದುಕು ಬರಹ:

ಅವರು ಹೇಳುವಂತೆ ತಮ್ಮ ಜೀವನದಲ್ಲಿ ಬದುಕು ಹೇಗಿದೆಯೋ ಹಾಗೇಯೇ ಬರವಣಿಗೆ ಕೂಡಾ ಇರಬೇಕು. ಬದುಕಿಗೆ ಒಂದು ರೀತಿ ಬರವಣಿಗೆಗೆ ಒಂದು ನೀತಿ ಇರುವುದು ಸರಿಯಲ್ಲ. ಇದು ನಾಟಕೀಯವಾಗಿ ತೋರುತ್ತದೆ. ಇಂತಹ ಬದುಕು ಮತ್ತು ಬರಹವನ್ನು ಪೂಜಾರರು ಒಪ್ಪಿಕೊಂಡಿಲ್ಲ. ಹನ್ನೆರಡನೇ ಶತಮಾನದ ಶಿವಶರಣರು ಹೇಳಿದಂತೆ 'ನುಡಿದಂತೆ ನಡೆ' ಎಂಬ ಮಾತು ಡಾ. ಪೂಜಾರಮೇಲೆ ಗ ಾಢವಾದ ಪರಿಣಾಮವನ್ನುಂಟು ಮಾಡಿದೆ. ಆದರಿಂದಲೇ ಪ್ರೇರಿತರಾಗಿ ಅವರು ಬಾಯಲ್ಲಿ ಹೇಳಿದುದನ್ನು ಬರವಣೆಗೆಯ ರೂಪದಲ್ಲಿ ಇಳಿಸುವುದನ್ನೆ ಇಷ್ಟ ಪಡುತ್ತಾರೆ.

ಡಾ. ಪೂಜಾರರ ಜೀವನದ ಮುಂದಿನ ಮಹತ್ತರವಾದ ಯೋಜನೆಯ ಕುರಿತು ಹೇಳುವಾಗ, ನಾನು ಭ್ರಮೆಗಳನ್ನು ಇಟ್ಟುಕೊಂಡಿಲ್ಲ. ನನ್ನ ಶಕ್ತಿ ಮತ್ತು ಪ್ರತಿಭೆಯಿಂದ ವ್ಯವಸ್ಥಿತವಾದ ಬರವಣಿಗೆಯನ್ನು ಮುಂದು ವರಿಸಿಕೊಂಡು ಹೋಗುವ ಇಚ್ಛೆಯನ್ನು ಹೊಂದಿದ್ದೇನೆ ಎಂದು ಹೇಳುತ್ತಾರೆ.

ಡಾ.ಪೂಜಾರರು ಪೂರ್ಣಗೊಳಿಸಿದ ಸಂಶೋಧನಾ ಯೋಜನೆಗಳು:

೧) ಗುಲಬರ್ಗಾ ತಾಲೂಕಿನ ಸ್ಥಳ ನಾಮಗಳು:
ಭಾಷಿಕ ಸಂಸ್ಕೃತಿಕ ಅಧ್ಯಯನ - ೧೯೯೦
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾದಿಂದ ಧನಸಹಾಯ

೨) ಉತ್ತರ ಕರ್ನಾಟಕ ಎರಡು ಜಿಲ್ಲೆಗಳ ಭಾಷಾ ಪರಿವೀಕ್ಷಣೆ ಮತ್ತು ಅಧ್ಯಯನ - ೧೯೯೨-೧೯೯೪

ಇತರರೊಂದಿಗೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ ನವ ದೆಹಲಿಯಿಂದ ಧನ ಸಹಾಯ.

ಪ್ರಕಟಿತ ಸಂಶೋಧನ ಲೇಖನಗಳು-೧೦೦

ವಿಚಾರ ಸಂಕಿರಣ ಸಭೆ- ಸಮ್ಮೇಳನಗಳ್ಲಲಿ ಮಂಡಿಸಿದ ಸಂಶೋಧನ ಪ್ರಬಂಧಗಳು - ೫೦

ಡಾ. ಪೂಜಾರರ ಪ್ರಪ್ರಥಮ ಪ್ರಕಟಿತ ಲೇಖನ ಪವಾಡಗಳು ಮತ್ತು ಮಾಂತ್ರಿಕ ವಿದ್ಯೆಗಳು ಕರ್ನಾಟಕ ವಿಶ್ವವಿದ್ಯಾಲಯದ 'ಮಾನವಿಕ ಭಾರತಿ' ಎಂಬ ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟವಾಯಿತು. ಇದರಿಂದಲೇ ಡಾ.ಪೂಜಾರರು ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು.

---

೫) ಸಂದರ್ಶನ : ಡಾ. ವ್ಹಿ.ಜಿ. ಪೂಜಾರ ಗುಲಬರ್ಗಾ ದಿನಾಂಕ: ೧೧-೦೪-೨೦೧೧

ನೇಮಕಾತಿ ಆಯ್ಕೆ ಸಮಿತಿ ತಜ್ಞ:

- ಕುವೆಂಪು ವಿಶ್ವವಿದ್ಯಾಲಯದ ಅಧ್ಯಾಪಕ ಪ್ರವಾಚಕ ಹಾಗೂ ಪ್ರಾಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯ ಸದಸ್ಯ ಶಿವಮೊಗ್ಗ – ೧೯೯೮-೯೯
- ಮೈಸೂರು ವಿಶ್ವವಿದ್ಯಾಲಯದ ಪ್ರವಾಚಕ ಹಾಗೂ ಪ್ರಾಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯ ಸದಸ್ಯ ಮೈಸೂರು – ೨೦೦೨-೨೦೦೯
- ಗುಲಬರ್ಗಾ ವಿಶ್ವವಿದ್ಯಾಲಯದ ಆಯ್ಕೆ ಶ್ರೇಣಿ ಅಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯ ಸದಸ್ಯ ಗುಲಬರ್ಗಾ – ೨೦೦೩-೨೦೦೪
- ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯ ಸದಸ್ಯ – ೨೦೦೪-೨೦೦೫
- ಬಿಜಾಪುರ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಅಧ್ಯಾಪಕ ಹುದ್ದೆಯ ಆಯ್ಕೆ ಸಮಿತಿ ಸದಸ್ಯ – ೨೦೦೫-೨೦೦೭
- ತುಮಕೂರು ವಿಶ್ವವಿದ್ಯಾಲಯದ ಪ್ರವಾಚಕ ಹಾಗೂ ಪ್ರಾಧ್ಯಾಪಕ ಹುದ್ದೆಯ ಆಯ್ಕೆ ಸಮಿತಿ ಸದಸ್ಯ – ೨೦೦೮

ಡಾ.ವ್ಹಿ.ಜಿ.ಪೂಜಾರರ ವ್ಯಕ್ತಿತ್ವ:

ಡಾ.ಪೂಜಾರರು ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟೆಲ್ಲಾ ಸಾಧನೆ ಗೈದಿದ್ದರೂ ಕಿಂಚಿತ್ ಅಹಂಭಾವ ಕೂಡ ಅವರಿಗಿಲ್ಲ ಬಹಳ ಸರಳವಾದ ವ್ಯಕ್ತಿತ್ವವನ್ನು ಹೊಂದಿದ್ದಾರೆ. ನುಡಿದಂತೆ ನಡೆಯುವ ಎಲ್ಲರನ್ನೂ ಸವಭಾವದಿಂದ ಗೌರವಿಸುವ ಗುಣಗಳು ಅವರಲ್ಲಿ ಕಂಡು ಬರುತ್ತವೆ. ಸಾಧಿಸಿದ ಸಾಧನೆಯನ್ನು ಎತ್ತಿ ತೋರಿಸುವ ಭಾವನೆ ಇಲ್ಲ. ನನ್ನ ಕೈಲಾದ ಸೇವೆಯನ್ನು ಸಾಹಿತ್ಯ ಕ್ಷೇತ್ರಕ್ಕೆ ಮಾಡಿದ್ದೇನೆ ಎಂದು ಹೇಳುವಲ್ಲಿ ಅವರ ವಿನಯ ಎಂತಹವರೂ ತಲೆ ಬಾಗುವಂತಹ ಪ್ರತಿಭೆ ವ್ಯಕ್ತಿತ್ವ ಕಾಣುತ್ತದೆ.

ಡಾ.ಪೂಜಾರರು ಸುಖ ದುಃಖಗಳೆರಡನ್ನು ಸಮನಾಗಿ ಸ್ವೀಕರಿಸವರು. ಸುಖ ಬಂದಾಗ ಹಿಗ್ಗದೇ ದುಃಖ ಬಂದಾಗ ಕುಗ್ಗದೇ ಎರಡನ್ನೂ ಜೀವನದ ಎರಡು ಮುಖಗಳು ಎಂದು ಪರಿಭಾವಿಸುತ್ತಾರೆ. ಮನುಷ್ಯನ ಜೀವನದಲ್ಲಿ ದುಃಖಗಳು ಇದ್ದೇ ಇರುತ್ತವೆ. ಅವು ವೈಯಕ್ತಿಕವಾಗಿರಬಹುದು, ಕೌಟುಂಬಿಕವಾಗಿರಬಹುದು, ದುಃಖವನ್ನು ಮರೆತು ಮುಂದೆ ಸಾಗಿದಾಗ ಸಂತೋಷವೂ ಇರುವುದು ಎನ್ನುತ್ತಾರೆ. ಡಾ. ಪೂಜಾರರು ಹೇಳುವಂತೆ ಅವರು ಕಷ್ಟ ಪಟ್ಟು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ನಂತರ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದಾಗ ಬಹಳ ಸಂತೋಷವಾಗಿದ್ದುಂಟು. ಇದಲ್ಲದೇ ೧೯೮೨ರಲ್ಲಿ ತಮ್ಮ ಪ್ರಥಮ ಕೃತಿ ಕುಸುಮ, ಪವಾಡ ಕತೆಗಳು ಮತ್ತು ಇತರ ಲೇಖನಗಳು ಬಿಡುಗಡೆಯಾದಾಗ ಅದನ್ನು ಹಲವು ಬಾರಿ ಮುಟ್ಟಿ ಮುಟ್ಟಿ ನೋಡಿ

ಸಂತೋಷಪಟ್ಟಿದ್ದುಂಟು ಎಂದು ಹೇಳುತ್ತಾರೆ.

ಇದಲ್ಲದೇ ತಾವು ಮಾಡಿದ ಸಾಧನೆಯನ್ನು ಕುರಿತು ಯಾರಾದರೂ ಹೊಗಳಿದಾಗ ಸಂತೋಷ ಉಂಟಾಗುತ್ತದೆ. ಹೊಸದನ್ನು ಸಾಧಿಸುವ ಹುಮ್ಮಸ್ಸು ಮೂಡುತ್ತದೆ. ತಾವು ಪ್ರಸಾರಾಂಗದ ನಿರ್ದೇಶಕರಾಗಿದ್ದಾಗ, ಅಂದಿನ ಗವರ್ನರ್ ಕರ್ನಾಟಕ ರಾಜ್ಯಪಾಲ ಸಿ.ರಂಗರಾಜನ್ ಅವರನ್ನು ಕರೆಸಿ ದತ್ತಿ ಉಪನ್ಯಾಸವನ್ನು ಏರ್ಪಡಿಸಿ ಎಲ್ಲರ ಮೆಚ್ಚುಗೆ ಗಳಿಸಿದಾಗ ಅದು ತಮಗೆ ಬಹಳ ಖುಷಿ ತಂದುಕೊಟ್ಟಿತು ಎಂದು ಹೇಳುತ್ತಾರೆ. ಈ ರೀತಿ ಸರಳವಾದ ಭಾಷೆ, ಸರಳವಾದ ವ್ಯಕ್ತಿತ್ವ ಹೊಂದಿರುವ ಡಾ.ಪೂಜಾರರು ಕನ್ನಡ ಸಾಹಿತ್ಯ ಲೋಕದ ಕಣ್ಮಣಿಯಾಗಿದ್ದಾರೆ.

ಕೌಟುಂಬಿಕ ಜೀವನ:

ಡಾ.ಪೂಜಾರರು ಹೇಳುವಂತೆ ಅವರದು ಬಾಲ್ಯವಿವಾಹ ಅವರನ್ನು ಶಾಲೆ ಕಲಿಯುವ ವೇಳೆಯಲ್ಲಿಯೇ ಅವರಿಗೆ ಮದುವೆಯಾಗಿತ್ತು. ಮುಂದೆ ಅವರು ಕೆಲಸಕ್ಕೆ ಸೇರಿದ ನಂತರ ಅವರ ಪತ್ನಿಯೊಂದಿಗೆ ಸಹ ಬಾಳ್ವೆಯನ್ನು ನಡೆಸಿದರು. ಅವರೇ ಹೇಳುವಂತೆ ಪತ್ನಿ ಮಾಲಾ ಅವರು ತಮಗೆ ಎಲ್ಲಾ ರೀತಿಯಿಂದಲೂ ಸಹಕಾರವನ್ನು ನೀಡುತ್ತ ತಮ್ಮ ಸಾಧನೆಗೆ ಊರುಗೋಲಾಗಿದ್ದಾರೆ ಎನ್ನುತ್ತಾರೆ ಇದರಿಂದಾಗಿ

ಅಧ್ಯಾಯ–೩

ಡಾ. ವ್ಹಿ.ಜಿ. ಪೂಜಾರರ ಕೃತಿಗಳ ಸಮೀಕ್ಷೆ

೩.೧ ಸಂಶೋಧನಾ ಮತ್ತು ವಿಮರ್ಶಾತ್ಮಕ ಕೃತಿಗಳು

೩.೨ ಸಂಪಾದನಾ ಮತ್ತು ಚರಿತ್ರೆಗೆ ಸಂಬಂಧಿಸಿದ ಕೃತಿಗಳು

೩.೩ ಸೃಜನಶೀಲ ಮತ್ತು ಸಮೀಕ್ಷಾ ಕೃತಿಗಳು

೩.೪ ಪಠ್ಯ ಪುಸ್ತಕಗಳು

ಅಧ್ಯಾಯ-೩
ಡಾ.ವ್ಹಿ.ಜಿ.ಪೂಜಾರರ ಕೃತಿಗಳ ಸಮೀಕ್ಷೆ

ಡಾ.ವ್ಹಿ.ಜಿ ಪೂಜಾರರ ಕೃತಿಗಳ ಸಮೀಕ್ಷೆಗೆ ತೊಡಗಿದಾಗ ನಮಗೆ ಅವರ ಒಲವು ಹೆಚ್ಚಾಗಿ ವಚನ ಸಾಹಿತ್ಯ ಶರಣರ ಚರಿತ್ರೆಯ ಕಡೆಗೆ ಹರಿದುದು ಕಂಡುಬರುತ್ತದೆ. ಅವರ ಕೃತಿಗಳಲ್ಲಿ ಹೆಚ್ಚಾಗಿ ವಚನ ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳೇ ಹೆಚ್ಚಾಗಿರುವುದು ತಿಳಿಯುತ್ತದೆ. ವಚನ ಸಾಹಿತ್ಯದ ಮೆರಗು, ಅದರ ವೈಭವ ಗರಿಮೆ ಹೆಚ್ಚಿಸುವಲ್ಲಿ ಡಾ.ಪೂಜಾರರ ಶ್ರಮ ಹೆಚ್ಚಿನದಿದೆ ಮತ್ತು ಪರಿಶ್ರಮ ನಿರಂತರವಾಗಿ ಸಾಗುತ್ತಲಿದೆ.

ಪ್ರಸ್ತುತ ಇಲ್ಲಿ ಈ ಅಧ್ಯಾಯದಲ್ಲಿ ಡಾ.ಪೂಜಾರರ ಸಂಶೋಧನಾ ಮತ್ತು ವಿಮರ್ಶಾತ್ಮಕ ಕೃತಿಗಳು, ಸಂಪಾದನಾ ಮತ್ತು ಚಾರಿತ್ರಿಕ ಕೃತಿಗಳು, ಸೃಜನಶೀಲ ಮತ್ತು ಸಮೀಕ್ಷಾ ಕೃತಿಗಳು ಮತ್ತು ಪಠ್ಯ ಪುಸ್ತಕಗಳು ಎಂದು ನಾಲ್ಕು ಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಅವುಗಳ ಕುರಿತು ವಿಸ್ತಾರ ರೂಪದ ವಿವರಣೆ ಕೆಳಗಿನಂತಿದೆ.

ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಕೃತಿಗಳು:

- ಪವಾಡ ಕಥೆಗಳು ಮತ್ತು ಇತರ ಲೇಖನಗಳು
- ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು
- ನುಲಿಯ ಚಂದಯ್ಯ
- ಸಾಹಿತ್ಯನ್ವೇಷಣೆ
- ಹೂಗಾರ ಸಮಾಜ ಒಂದು ಸಾಂಸ್ಕೃತಿಕ ಅಧ್ಯಯನ
- ಸ್ವರ ವಚನಗಳಲ್ಲಿ ವಿಡಂಬನೆ
- ಸಾಹಿತ್ಯ ಸಮಾವೇಶ
- ಶರಣ ಸಾಹಿತ್ಯ ಮಾರ್ಗ
- ಕನ್ನಡ ಸಾಹಿತ್ಯ ಸಂಬಂಧ (ವಿಮರ್ಶೆ ಮತ್ತು ಸಂಶೋಧನೆ)
- ಕನ್ನಡ ಸಾಹಿತ್ಯ ಸಂಸ್ಕೃತಿ

ಡಾ.ಪೂಜಾರರ ಒಟ್ಟು ೫ ಸಂಶೋಧನಾ ಕೃತಿಗಳಿದ್ದು ಅವುಗಳು ಪವಾಡ ಕಥೆಗಳು ಮತ್ತು ಇತರ ಲೇಖನಗಳು, ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ನುಲಿಯ ಚಂದಯ್ಯ ಸಾಹಿತ್ಯನ್ವೇಷಣೆ, ಹೂಗಾರ ಸಮಾಜ ಒಂದು ಸಾಂಸ್ಕೃತಿಕ ಅಧ್ಯಯನ ಎಂಬವುಗಳು ಪ್ರಸ್ತುತ ಕನ್ನಡ ಸಾಹಿತ್ಯ ಸಂಬಂಧ ಕೃತಿಯು ಡಾ.ವ್ಹಿ.ಜಿ.ಪೂಜಾರರ ಸಂಶೋಧನಾಮತ್ತು ವಿಮರ್ಶಾತ್ಮಕ ಲೇಖನಗಳನ್ನೊಳಗೊಂಡ ಕೃತಿಯಾಗಿದೆ.

ಹೊಸಗನ್ನಡ ಸಾಹಿತ್ಯ, ಸಂಸ್ಕೃತಿ, ಭಾಷೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಒಟ್ಟು ೨೨ ಲೇಖನಗಳನ್ನು ಇಲ್ಲಿ ಕಾಣಬಹುದಾಗಿದೆ.

೧) ಪ್ರೇರಣೆ-ಧೋರಣೆಗಳ ಹಿನ್ನಲೆಯಲ್ಲಿ ಹಳೆಗನ್ನಡ, ನಡುಗನ್ನಡ ಸಾಹಿತ್ಯ
೨) ವೀರಶೈವ ಪುರಾಣಗಳ ಲಕ್ಷಣಗಳು- ಒಂದು ಟಿಪ್ಪಣೆ
೩) ನುಲಿಯ ಚಂದಯ್ಯನ ಇತಿವೃತ್ತ ಮರುನೋಟ
೪) ಕನ್ನಡ ತತ್ವ ಪದಗಳು ಮತ್ತು ಅನುಭಾವ
೫) ಕಲಬುರ್ಗಿ ಜಿಲ್ಲೆಯ ಅನುಭಾವಿ ಕವಿಗಳು
೬) ತಿಂಥಣಿ ಮೋನಪ್ಪಯ್ಯ ಹಾಗೂ ಕೊಡೇಕಲ್ ಬಸವಣ್ಣನ ಕಾಲಜ್ಞಾನ ಸಾಹಿತ್ಯ
೭) ಹೊಸಗನ್ನಡ ಸಾಹಿತ್ಯ ಒಂದು ಅವಲೋಕನ
೮) ವಿ.ಸೀತಾರಾಮಯ್ಯ ಅವರ ಲಲಿತ ಪ್ರಬಂಧಗಳು
೯) ವಿನಾಯಕರ ನವ್ಯ ಕಾವ್ಯ ಪ್ರಯೋಗಗಳು
೧೦) ಸಂಜೆ ಐದರ ಮಳೆ- ಒಂದು ವಿಶ್ಲೇಷಣೆ
೧೧) ಗ್ರಾಮೀಣ ಬದುಕಿನ ಎರಡು ಕಾದಂಬರಿಗಳು
೧೨) ಸಾಹಿತ್ಯ ಸಂಶೋಧನೆಯ ಸ್ವರೂಪ – ಒಂದು ವಿವೇಚನೆ
೧೩) ಧರ್ಮದ ಅರ್ಥ ವ್ಯಾಪ್ತಿ – ಒಂದು ಚಿಂತನೆ
೧೪) ಬಸವಣ್ಣನ ಪವಾಡಗಳ ಅಂತರಾರ್ಥ – ಒಂದು ವೈಚಾರಿಕ ನೋಟ
೧೫) ಸಿದ್ಧರಾಮನ ಪವಾಡಗಳ ಸಾಂಕೇತಿಕತೆ
೧೬) ಸಗರ ನಾಡಿನ ಸಂಸ್ಕೃತಿ ಸಂವರ್ಧನೆಗೆ ಕಾರಣರಾದ ನಿಷ್ಠಿ ಕಡಲಪ್ಪನವರು ವೀರಪ್ಪನವರು
೧೭) ಪ್ರಾಚೀನ ಕರ್ನಾಟಕದ ಬೌದ್ಧ ಕೇಂದ್ರ ಸನ್ನತಿ
೧೮) ಗುಲಬರ್ಗಾ ತಾಲ್ಲೂಕಿನ ಸ್ಥಳ ನಾಮಗಳು: ಭಾಷಿಕ ಸಂಸ್ಕೃತಿಕ ಅಧ್ಯಯನ
೧೯) ಕನ್ನಡದಲ್ಲಿ ಅನುವಾದಿತ ನಾಟಕಗಳು: ಭಾಷಿಕ ಅಧ್ಯಯನ
೨೦) ಹಂತಿ, ಹಂತಿಯ ಹಾಡುಗಳು ಒಂದು ಅಧ್ಯಯನ
೨೧) ಸಣ್ಣಾಟಗಳ ಹುಟ್ಟು, ಸ್ವರೂಪ ಮತ್ತು ಹೈದ್ರಾಬಾದ ಕರ್ನಾಟಕದ ಸಣ್ಣಾಟಗಳು
೨೨) ವೃತ್ತಿ ರಂಗಭೂಮಿ: ಜನಪರ ಮೌಲ್ಯಗಳು

ಸಾವಿರ ವರ್ಷದ ಇತಿಹಾಸವನ್ನು ಹೊಂದಿದ ಕನ್ನಡ ಸಾಹಿತ್ಯ ಸಮೃದ್ಧಿ ಹಾಗೂ ತತ್ವದ ದೃಷ್ಟಿಯಿಂದ ತುಂಬ ಗಮನಾರ್ಹವಾದುದು ಇಡೀ ಭಾರತೀಯ ಸಾಹಿತ್ಯದಲ್ಲಿಯೇ ಕನ್ನಡ ಸಾಹಿತ್ಯ ಎದ್ದು ಕಾಣುವಂತಹದು. ಹತ್ತನೆ ಶತಮಾನದಿಂದ ಇದು ನಿರಂತರವಾಗಿ ಬೆಳೆಯುತ್ತ ಬಂದಿದೆ.

ಹಳೆಗನ್ನಡ ಸಾಹಿತ್ಯ ಪ್ರಮುಖ ಪ್ರೇರಣೆಗಳೆಂದರೆ ಧರ್ಮ, ರಾಜಾಶ್ರಯ, ಸಂಸ್ಕೃತ ಪ್ರಾಕೃತದಂತಹ ಅನ್ಯಭಾಷೆಗಳು ಧರ್ಮವಂತು ಅತ್ಯಂತ ಪ್ರಬಲವಾದ ಪ್ರೇರಣೆಯನ್ನೊದಗಿಸಿದೆ. ಸಾಮಾನ್ಯವಾಗಿ ಎಲ್ಲಾ ಜೈನ ಕವಿಗಳೂ ತೀರ್ಥಂಕರರ

ಚರಿತ್ರೆಯ್ನನು ಪುರಾಣ ರೂಪದಲ್ಲಿ ಬರೆದಿದ್ದಾರೆ. ಇವುಗಳ ಧ್ಯೇಯ ಧರ್ಮ ಸಾಹಿತ್ಯ ಬೇರೆ ಬೇರೆ ಅಲ್ಲ ಎರಡೂ ಒಂದೆ ಎಂಬ ಭಾವನೆ ಆಗಿನ ಕವಿಗಳಲ್ಲಿತ್ತು. ಮೋಕ್ಷ ಸಂಪಾದನೆ ಕಾವ್ಯರಚನೆ ಹಾಗೂ ಕಾವ್ಯ ಸ್ವಾದದಿಂದ ಸಾಧ್ಯವೆಂದು ನಂಬಿದ್ದರು. ಏನೇ ನಡೆದರೂ ಧರ್ಮದ ಚೌಕಟ್ಟಿನಲ್ಲಯೇ ನಡೆಯುತ್ತಿದ್ದವು. ರಾಜಾಶ್ರಯದಲ್ಲಿದ್ದುಕೊಂಡು ಸಾಹಿತ್ಯ ರಚಿಸಿದ ಮೇಲೆ ಆತನನ್ನು ಸ್ತುತಿಸುವುದು, ಕಥಾನಾಯಕನೊಡನೆ ಒಂದು ಮಾಡಿ ವರ್ಣಿಸುವುದು ಸಾಮಾನ್ಯ. ಹೀಗೆ ಮಾಡಿದುದರಿಂದ ಕವಿಗಳಿಗೆ ಜನಸಾಮಾನ್ಯರ ನೋವಿಗೆ ಸ್ಪಂಧಿಸುವುದಾಗಲಿಲ್ಲ. ಇದು ಇಂದು ನಾವು ಬಯಸುವುದೂ ಒಂದು ದೃಷ್ಟಿಯಿಂದ ತಪ್ಪಾಗುತ್ತದೆ. ಏಕೆಂದರೆ ಆಯಾ ಕಾಲದ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಾಹಿತ್ಯ ರಚನೆಗೊಂಡಿರುತ್ತವೆ.

ರಾಮಾಯಣ, ಮಹಾಭಾರತ ಹಾಗೂ ಜೈನ ತೀರ್ಥಂಕರರ ಚರಿತ್ರೆಗಳೇ ಹಳೆಗನ್ನಡ ಕವಿಗಳ ಕಾವ್ಯದ ವಸ್ತುವಾಗಿವೆ. ಲೌಕಿಕ ಮತ್ತು ಆಗಮಿಕ ಎರಡು ಪರಂಪರೆಗಳನ್ನು ಅವರ ಕಾವ್ಯಗಳಲ್ಲಿ ಗುರುತಿಸುವೆವು. ಲೌಕಿಕವೆಂದರೆ- ಲೋಕಜೀವನ, ಸಂಸಾರಿಕ ಜೀವನ, ಆಗಮಿಕವೆಂದರೆ-ಧಾರ್ಮಿಕ ಮಹಾಪುರುಷರ ಚರಿತ್ರೆ, ತತ್ತ್ವ, ಅಧ್ಯಾತ್ಮ ಮುಂತಾದ ವಿಷಯಗಳನ್ನೊಳಗೊಂಡಂಥದು ಈ ಎರಡೂ ಪರಂಪರೆಯಲ್ಲಿ ಹುಟ್ಟಿಕೊಂಡ ಕಾವ್ಯಗಳು ಪಂಡಿತರಿಗೆ ಪ್ರೀಯವಾಗಿವೆ ಕವಿಯು ತನ್ನ ಪಾಂಡಿತ್ಯವನ್ನು ಪ್ರದರ್ಶಿಸುವ ಗೀಳು ಇವುಗಳಲ್ಲಿ ಹೆಚ್ಚಾಗಿ ಬರುವುದು ಕವಿ ಸಮಯ ಕೃತಕ ವರ್ಣನೆಗಳು ನಿಜಜೀವನದ ಸಮಸ್ಯೆಗಳಿಂದ ದೂರಾದ ವಿವರಗಳು, ಹದಿನೆಂಟು ವರ್ಣನೆಗಳು ಮುಂತಾದವುಗಳು ಬರುತ್ತವೆ. ಈ ವರ್ಣನೆಗಳನ್ನು ತಂದರೆ ಮಾತ್ರ ಅಂದು ಆ ಕಾವ್ಯ ಮಹಾಕಾವ್ಯವೆಂದು ಶ್ರೇಷ್ಠ ಕಾವ್ಯವೆಂದು ಗಣಿಸಲ್ಪಡುತ್ತಿತ್ತು. ಸಂದರ್ಭ ಇರಲಿ, ಬಿಡಲಿ ಅನೇಕ ಕವಿಗಳು ಇಂಥ ವರ್ಣನೆ ತಂದುದ್ದುಂಟು.

ಜೈನ ಕವಿಗಳಿಂದಲೇ ನಮ್ಮ ಕನ್ನಡ ಸಾಹಿತ್ಯ ಮೊದಲಾಗುವುದು ಏಕೆಂದರೆ ಕವಿರಾಜ ಮಾರ್ಗ ಕನ್ನಡದ ಉಪಲಬ್ದಗ್ರಂಥ ಆದರೆ ಇದು ಸ್ವತಂತ್ರ ಸೃಜನಶೀಲ ಕೃತಿಯಲ್ಲ. ಸಂಸ್ಕೃತದ ದಂಡಿಯ ಕಾವ್ಯಾದರ್ಶದ ಅನವಾದ ಇದಾಗಿದೆ. ಇದರ ಕತೃ ಶ್ರೀವಿಜಯ ಹೆಸರೇ ಸೂಚಿಸುವಂತೆ ಇದು ಕಾವ್ಯದ ಗುಣ-ದೋಷಗಳನ್ನು ತಿಳಿಸುವ ಲಕ್ಷಣ ಗ್ರಂಥವಾಗಿದೆ. ಶ್ರೀವಿಜಯನು ಕನ್ನಡಿಗರೂ ಪರಧರ್ಮ ಸಹಿಷ್ಣುಗಳೂ ಆಗಿದ್ದರೆಂಬುದನ್ನು ತಿಳಿಸುತ್ತ "ಕಸವರವೆಂಬುದು ಸಿರೆ ಸೈರಿಸಲಾರ್ಪೊಡೆ ಪರ ವಿಚಾರಮಂ ಪರಧರ್ಮಮುಮಂ" ಎಂಬ ಒಳ್ಳೆಯ ಮಾತನಾಡಿದ್ದಾನೆ. ಒಟ್ಟಿನಲ್ಲಿ ಇದು ಕನ್ನಡಿಗರ ಜೀವನ ಸಾರವನ್ನು ತುಂಬಿಕೊಂಡ ಕೈಪಿಡಿಯೂ ಮುಂಬರುವ ಕವಿಗಳಿಗೆ ರಾಜ ಬೀದಿಯನ್ನು ನಿರ್ಮಿಸಿದ ಕೃತಿಯೂ ಆಗಿದೆ. ಎಂಬ ಈ ಮಾತು ಸತ್ಯಕ್ಕೆ ಸಮೀಪವಾದುದಾಗಿದೆ.

ಹಳೆಗನ್ನಡ ಕೃತಿಗಳನ್ನು ನೋಡಿದಾಗ ಆ ಕೃತಿಗಳು ಜನ ಸಾಮಾನ್ಯರಿಗೆ ಸಂಬಂಧವೇ ಇಲ್ಲದಂತೆ ತೋರುತ್ತವೆ. ಏಕೆಂದರೆ ಯಾವ ಸಾಹಿತ್ಯ ಅಂದಂದಿನ ಸಾಮಾನ್ಯ ಜನರ ದೈನಂದಿನ ಸಮಸ್ಯೆಗಳಿಗೆ ಸ್ಪಂದಿಸಿ ಅವರ ನೋವುನಲಿವಿನಲ್ಲಿ ಪಾಲ್ಗೊಳ್ಳುವುದಿಲ್ಲವೋ ಅಂಥ ಸಾಹಿತ್ಯ ಕೇವಲ ಧರ್ಮದ ತತ್ತ್ವಗಳು ಮತ್ತು

ಭಾಷೆಯ ವೈಶಿಷ್ಟ್ಯಗಳನ್ನು ಎತ್ತಿ ತೋರಿಸುತ್ತದೆ. ಹಳೆಗನ್ನಡ ಸಾಹಿತ್ಯವೂ ಇದನ್ನೇ ಬಿಂಬಿಸುತ್ತದೆ.

ಹಳೆಗನ್ನಡ ಸಾಹಿತ್ಯದಲ್ಲಿ ಆಗದ ಬದಲಾವಣೆಯಿಂದಾಗಿ ನಮ್ಮ ಸಾಹಿತ್ಯವು ಇಲ್ಲಿಯವರೆಗೆ ಅನೇಕ ರೂಪಗಳನ್ನು ಕಳಚಿ ಹೊಸ ರೂಪಗಳನ್ನು ತೊಡುತ್ತ ಬಂದುದು ನಾವು ಕಾಣುತ್ತೇವೆ. ಕಾಲದಿಂದ ಕಾಲಕ್ಕೆ ಸಾಮಾನ್ಯ ಜನರ ಮನೋಭಾವನೆಗಳನ್ನು ಸಾಹಿತ್ಯದ ವಸ್ತು, ಧೋರಣೆ, ಭಾಷೆ, ಛಂದಸ್ಸುಗಳಲ್ಲಿ ಅಮೂಲಾಗ್ರ ಬದಲಾವಣೆಯನ್ನು ಕಾಲವೇ ಮಾಡುತ್ತದೆ.

ನಡುಗನ್ನಡ ಸಾಹಿತ್ಯ ಭಾಷೆಯ ದೃಷ್ಟಿಯಿಂದ ಜನರಾಡುವ ಮಾತಾಗಿ, ವಸ್ತುವಿನ ದ್ರುಷ್ಟಿಯಿಂದ ಅಂದಿನ ಜನರ ಸಮಸ್ಯೆಗಳೇ ಆಗಿ, ವಚನ ಕೀರ್ತನೆ ಹಾಗೂ ಸ್ವರ ವಚನಗಳಾಗಿ ಹೊರಹೊಮ್ಮಿತು. ವಚನಕಾರರೇ ಈ ಸಾಹಿತ್ಯ ಹರಿಕಾರರೆನ್ನಿಸಿಕೊಂಡರು ಇವರು ರಾಜರ ಕಥೆಯನ್ನು ಬರೆಯದೇ ಪೌರಾಣಿಕ, ಐತಿಹಾಸಿಕ ವ್ಯಕ್ತಿಗಳನ್ನು ಇಂದ್ರ-ಚಂದ್ರರೆಂದು ಬಣ್ಣಿಸದೇ, ತಾವು ನಿತ್ಯದಲ್ಲಿ ಅನುಭವಿಸುವಂತಹ ಅನುಭವಗಳನ್ನೆ ನೇರವಾದ ಮಾತಿನಲ್ಲಿ ಹೇಳಲು ಅವುಗಳೇ ವಚನಗಳಾದವು. ಇವರ ವಚನಗಳ ಮೂಲದ್ರವ್ಯ ಆಕಾರವೆಂದರೆ ಸಮಕಾಲೀನ ಸಮಾಜ ಇದರಿಂದಾಗಿ ಜನ ಸಮ್ಮುಖ ಧೋರಣೆಯು ಇವರ ಪ್ರಮುಖ ಕಾಳಜಿಯಾಗಿತ್ತು. ಜೇಡರದಾಸಿಮಯ್ಯ, ಬಸವಣ್ಣ, ಅಲ್ಲಮ ಪ್ರಭು, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದವರ ವಚನಗಳಲ್ಲಿ ಇಂತಹ ಧೋರಣೆಗಳನ್ನು ಕಾಬಹುದಾಗಿದೆ. ಹಳಗನ್ನಡ ಸಾಹಿತ್ಯ ಮತ್ತು ನಡುಗನ್ನಡ ಸಾಹಿತ್ಯ ಪ್ರೇರಣೆ ಧೋರಣೆಗಳ ಅವಲೋಕನೆಯಲ್ಲಿ ತೊಡಗಿದಾಗ ಅವರ ಹಿಂದಿರುವ ಅನೇಕ ಅಂಶಗಳು ಬೆಳಕಿಗೆ ಬಂದಿರುತ್ತವೆ. ಹಳಗನ್ನಡ ಸಾಹಿತ್ಯದ ಪ್ರೇರಣೆಗಳು ಅಂದಿನ ಕಾಲಕ್ಕೆ ತಕ್ಕಂತೆ ಬೆಳೆದು ಬಂದವು. ಮತ್ತು ನಡುಗನ್ನಡ ಸಾಹಿತ್ಯದ ಧೋರಣೆಗಳು ತಮ್ಮದೆ ಆದ ವಿಶಿಷ್ಟತೆಯೊಂದಿಗೆ ಪ್ರಜ್ವಲಿಸಿ ಇಂದಿಗೂ ಸಹ ಆಲೋಚನೆಗೆ ಎಡೆಮಾಡುವಂತೆ ಪ್ರೇರಣೆಯನ್ನೊದಗಿಸುತ್ತವೆ. ಹಳಗನ್ನಡ ಮತ್ತು ನಡುಗನ್ನಡ ಪುಸ್ತಕದಲ್ಲಿಯೂ ಮಾದರಿಯಾದ ಸಾಹಿತ್ಯವಾಗಿದೆ. ಪವಾಡ ಕಥೆಗಳು ಮತ್ತು ಇತರ ಲೇಖನಗಳು ಈ ಕೃತಿ ಡಾ.ಪೂಜಾರರ ಪ್ರಥಮ ಕೃತಿ ಪುಷ್ಪವಾಗಿದೆ. ಅವರು ೧೯೮೨ ರಲ್ಲಿ ಪಿ.ಎಚ್.ಡಿ ಪದವಿಯನ್ನು ಪಡೆದುಕೊಂಡು ನಂತರದಲ್ಲಿ ಪ್ರಕಟವಾದ ಈ ಪುಸ್ತಕ ಪವಾಡ ಕಥೆಗಳು ಮತ್ತು ಇತರ ಲೇಖನಗಳು ಸ್ವತಃ ಪೂಜಾರರೇ ಹೇಳಿಕೊಂಡಂತೆ ಅವರು ಸಂಶೋಧನಾಧ್ಯಯನದಲ್ಲಿ ತೊಡಗಿದ ವೇಳೆಯಲ್ಲಿ ವೀರಶೈವ ಸಾಹಿತ್ಯಕ್ಕೆ ಸಂಬಂಧಪಟ್ಟ ಬರೆದ ಕೆಲವು ಲೇಖನಗಳನ್ನು ಒಟ್ಟುಗೂಡಿಸಿ ಈ ಚೊಚ್ಚಲ ಕೃತಿಯನ್ನು ಪ್ರಕಟಿಸಲಾಗಿದೆ.

೧೨ನೇ ಶತಮಾನಕ್ಕಿಂತ ಪೂರ್ವದಲ್ಲಿ ಕನ್ನಡ ಸಾಹಿತಿಕವಾಗಿ ಪ್ರೌಢವೆನಿಸಿದರೂ ಸಂಸ್ಕೃತ ಭೂಯಿಷ್ಠವಾದುದಾಗಿತ್ತು. ಅದನ್ನು ಕವಿಗಳು ರಾಜನ ಆಶ್ರಯದಲ್ಲಿದ್ದುಕೊಂಡು ಅವರ ವೈಭವಮಯವಾದ ಜೀವನವನ್ನೇ ಕಾವ್ಯದ ವಸ್ತುವಾಗಿಟ್ಟುಕೊಂಡು ಅವರಿಗಾಗಿಯೇ ಬರೆದುದಾಗಿತ್ತು. ಏಕೆಂದರೆ ಅಂದಿನ ಪರಿಸರದಲ್ಲಿ ಸಾಹಿತ್ಯವು ಸಾರ್ವಜನಿಕರಿಗೆ ತಲುಪುವಂತಿರಲಿಲ್ಲ. ಪಂಡಿತ ವರ್ಗಕ್ಕೆ ಮತ್ತು ಆ ಸ್ಥಾನಕ್ಕೆ ಮಾತ್ರ ಸೀಮಿತವಾಗಿತ್ತು. ಕಾವ್ಯ ಕ್ಲಿಷ್ಟವಾದಷ್ಟು ಶ್ರೇಷ್ಟ ಎಂಬ ಭಾವನೆ ಅಂದಿನ ಕವಿಗಳಲ್ಲಿ ತುಂಬಿಬಿಟ್ಟಿತ್ತು.

ಈ ಸಮಯದಲ್ಲಿ ವಚನಕಾರರ ಬರವು ಸಾಹಿತ್ಯದ ಸಿರಿದೇವಿಯನ್ನು ರತ್ನದ ಶೃಂಬಲೆಗಳಿಂದ ಬಂಧಿತಳಾಗಿದ್ದ, ಅವಳನ್ನು ಬಿಡುಗಡೆಗೊಳಿಸಲು ಅವಶ್ಯಕವಾಗಿತ್ತು.

ಅದರಂತೆಯೇ ವಚನಕಾರರು ನಸ್ತ್ರೀ ಸ್ವಾತಂತ್ರ್ಯ ಮರ್ಹತಿ: ಎಂದು ಹೇಳಿದ ಮನುವಿನ ನುಡಿಯನ್ನು ಅಲ್ಲಗಳೆದು ಅಂದಿನ ಪುರುಷ ಸಮಾಜದಲ್ಲಿ ಹೆಣ್ಣನ್ನು ತನ್ನ ದಾಸಿಯನ್ನಾಗಿ ಮಾಡಿಕೊಂಡು ಅವಳ ವಿಚಾರ ಶಕ್ತಿಯನ್ನು ಕಸಿದುಕೊಂಡು ತಮ್ಮ ವಿಲಾಸ ವಸ್ತುವಾಗಿ ಮಾಡಿಕೊಂಡಿದ್ದ ಎಂದು ಹೇಳಿದರು.

ಗಂಡೂ ಅಲ್ಲ ಹೆಣ್ಣು ಅಲ್ಲ ಕಾಣಾ ರಾಮನಾಥ ಎಂದು ಹೇಳಿ ಶರೀರಕ್ಕೆ ಗಂಡು-ಹೆಣ್ಣಿಗೆ ಬೇರೆ-ಬೇರೆ ಲಕ್ಷಣಗಳಿರಬಹುದು. ಆದರೆ ಆತ್ಮಕ್ಕೆ ಯಾವ ಭೇದ-ಭಾವವು ಇಲ್ಲದಿಲ್ಲ. ಎಲ್ಲಾ ಆತ್ಮಗಳು ಒಂದೇ ಅವು ಸರಿಸಮಾನವಾಗಿರುತ್ತವೆ.

"ಮಡಕೆ ದೈವ, ಮೊರೆದೈವ, ಬಿದಿರುಕಲ್ಲು ದೈವ
ಹಣಗಿದ್ಧೈವ, ಬಿಲ್ಲಿನಾರಿದೈವ, ಕಾಣಿರೊ
ಕೊಳಗೆ ದೈವ, ಗಿಣ್ಣಿಲುದೈವ ಕಾಣಿರೊ
ದೈವ ದೈವವೆಂದು ಕಾಲಿಡಲಿಂಬಿಲ್ಲ
ದೇವನೊಬ್ಬನೇ ಕೂಡಲಸಂಗಮದೇವಾ."

ಎಂದು ಹೇಳಿ ಇದರಿಂದ ಅಂದಿನ ಜನರು ಎಷ್ಟು ಅಂಥ ಶ್ರದ್ಧೆಉಳ್ಳವರಾಗಿದ್ದರು ಎಂಬುದನ್ನು ತಿಳಿಸಿದ್ದಾರೆ. ಆದ್ದರಿಂದ ಬಸವಣ್ಣನವರು ದೇವನೊಬ್ಬ ನಾಮ ಹಲವು ಎಂದು ಏಕದೈವೊಪಾಸನೆಯನ್ನು ಜನತೆಗೆ ತಿಳಿಸಿ ಮೂರ್ತಿ ಪೂಜೆ ಬಿಟ್ಟು ಲಿಂಗಪೂಜೆ ಮಾಡುವುದನ್ನು ತಿಳಿಸಿದರು. ವಚನಕಾರರು ಗಾಢ ನಿದ್ರೆಯಲ್ಲಿದ್ದ ಸಮಾಜವನ್ನು ತಮ್ಮ ಜ್ಞಾನಜ್ಯೋತಿಯ ಪ್ರಖರತೆಯಿಂದ ಕಣ್ತೆರಿಸಿ, ಪ್ರತಿಯೊಬ್ಬರ ಕಿವಿಯಲ್ಲಿ ಕ್ರಿಯಾಶೀಲ ಸ್ವತಂತ್ರ ವಿಚಾರದ ಮಂತ್ರವನ್ನು ಸುರಿ ಜನತೆಯ ಬಾಳನ್ನು ಹಸನಾಗಿ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದರು.

ಪ್ರಸ್ತುತ ಎರಡನೆಯ ಅಧ್ಯಾಯ ಹರಿಹರನ ಕಾವ್ಯ ಸೃಷ್ಟಿಯ ಹಿನ್ನಲೆ ಹಾಗೂ ಉದ್ದೇಶ ಈ ಅಧ್ಯಾಯದಲ್ಲಿ ಹರಿಹರನು ಕಾವ್ಯ ಸೃಷ್ಟಿ ಕೈಗೊಳ್ಳಲು ಉದ್ದೇಶವೆನಿತ್ತು ಹಾಗೂ ಅದರ ಹಿನ್ನಲೆ ಏನೆಂಬುದನ್ನು ತಿಳಿಯಬಹುದಾಗಿದೆ.

೧೨ ನೇ ಶತಮಾನದ ಶಿವಶರಣರ ಕ್ರಾಂತಿ ಸಮಗ್ರ ಭಾರತದಲ್ಲಿಯೇ ಅದ್ವಿತೀಯವಾದುದಾಗಿದೆ. ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಆರ್ಥಿಕ ಮುಂತಾದ ಕ್ರಾಂತಿಕಾರಿ ವಿಚಾರಗಳಿಂದ ಪ್ರೇರಿತವಾದ ಆಂದೋಲನ ಒಮ್ಮಲೇ ರಭಸವಾಗಿ ಬಂದು ಬೇಗನೆ ಇಳಿದು ಬಿಟ್ಟಿದರಿಂದ ಅದರ ಉದ್ದೇಶ ಸಾಧನೆ ಅರ್ಧಕ್ಕೆ ನಿಂತಿತೆಂದು ಕಂಡುಬರುತ್ತದೆ.

ವಚನಕಾರರು ನಂತರದಲ್ಲಿ ನಮಗೆ ಸಿಗುವ ಪ್ರಮುಖ ವೀರಶೈವ ಕವಿ ಹರಿಹರ, ಹರಿಹರ ಶರಣರ ನಂತರದಲ್ಲಿ ೪೦-೫೦ ವರ್ಷಗಳಲ್ಲಿಯೇ ಬಂದವನಾದ್ದರಿಂದ ಈತ ಅಂದಿನ ಸಮಾಜದಲ್ಲಿದ್ದ ಕೆಲ ವಯಸ್ಕರಿಂದ ಶರಣರ

ಜೀವನ ಸಾಹಿತ್ಯ ಅವರ ಕ್ರಾಂತಿ ಉದ್ದೇಶ ಇವೆಲ್ಲವುಗಳನ್ನು ಕೇಳಿ ತಿಳಿದುಕೊಂಡು, ಶರಣರ ಲಭ್ಯವಿದ್ದ ವಚನಗಳನ್ನು ಓದಿ ಅವುಗಳಿಂದ ಪ್ರಭಾವಿತನಾಗಿರಬಹುದು, ಮತ್ತು ಕಾವ್ಯ ರಚನೆಗೆ ತೊಡಗಿರಬಹುದು, ಅದರಂತೆಯೇ ಶಿವಶರಣರ ಪುಣ್ಯ ಚರಿತ್ರೆ ಅವರ ಸಾಹಿತ್ಯ ಅಳಿಸಿ ಹೋಗದಿರಲಿ ಅವುಗಳು ಎಲ್ಲರಿಗೂ ಸರಳವಾಗಿ ಅರ್ಥವಾಗಲಿ ಎಂದು ಕಾವ್ಯವನ್ನು ರಚಿಸಿದನು ಎಂದು ಹೇಳುತ್ತಾರೆ. ತನಗೆ ಸರಳವಾಗಿ ಕಾವ್ಯ ರಚಿಸಲು ಒಂದು ಹೊಸ ಛಂದಸ್ಸಿನ ಅವಶ್ಯಕತೆ ಇದೆ ಎಂದು ತೋರಿದಾಗ ರಗಳೆ ಎಂಬ ಛಂದಸ್ಸನ್ನು ತಾನೇ ಸೃಷ್ಟಿಸಿ ಅದರ ಮುಖಾಂತರ ಕಾವ್ಯ ರಚಿಸಿದ.

ಇನ್ನೂ ಎರಡನೆಯ ಅಧ್ಯಾಯ ವೀರಶೈವ ಕವಿಗಳ ಸತ್‌ಸಂಪ್ರದಾಯ ಹಾಗೂ ಕಾವ್ಯೋದ್ದೇಶ ಇದು ಸಮೀಕ್ಷಾ ಲೇಖನವಾಗಿದೆ.

ಇಲ್ಲಿ ವೀರಶೈವ ಕವಿಗಳು ಕೃತಿ ರಚನೆಗೆ ತೊಡಗಿದಾಗ ತಾವು ಹಾಕಿಕೊಂಡ ಸಂಪ್ರದಾಯಗಳೇನು ಮತ್ತು ಅದರ ಕಾವ್ಯದ ಉದ್ದೇಶವೇನಾಗಿತ್ತು ಎಂಬುದನ್ನುದ ಬಿತ್ತರಿಸಲಾಗಿದೆ. ಸಂಪ್ರದಾಯವೆಂದಾಗ ಇದು ಎಲ್ಲಾ ಕಾಲಮಾನದಲ್ಲಿಯೂ ಒಂದೇ ತೆರನಾಗಿ ಇರುವುದಿಲ್ಲ ಕಾಲದಿಂದ ಕಾಲಕ್ಕೆ ನಮ್ಮ ಸಂಪ್ರದಾಯ ಆಚರಣೆ ಸಂಸ್ಕೃತಿಯ ವಿಧಿ ವಿಧಾನಗಳು ಬದಲಾಗುತ್ತಲೇ ಬಂದಿವೆ. ಜನರ ಅನುಕರಣೆಯಿಂದಾಗಿ ಸ್ವಲ್ಪ ಮಟ್ಟಿಗೆ ಉಳಿಯಬಹುದು.

ಈ ಉಳಿದುದನ್ನು ಜನತೆಗೆ ರೂಢಿಗೆ ತರುವುದೇ ಸಂಪ್ರದಾಯವೆನಿಸಿಕೊಳ್ಳುತ್ತೇವೆ. ಹರಿಹರನೇ ವೀರಶೈವ ಕವಿಗಳ ಮುಂಚೂಣಿಯಲ್ಲಿ ಇರುವುದರಿಂದ ಈತನ ಕಾವ್ಯದರ್ಶವನ್ನು ಅನುಸರಿಸಿಯೇ ಅನೇಕ ವೀರಶೈವ ಕವಿಗಳ ಕಾವ್ಯ ರಚಿಸಿದ್ದಾರೆ. ವೀರಶೈವ ಕವಿಗಳ ಸ್ವತಃ ತಾವೇ ಹೇಳಿಕೊಂಡಂತೆ ತಮ್ಮ ಬುದ್ಧಿ ಮತ್ತು ನಾಲಗೆಯನ್ನು ಹಾಗೂ ತಮ್ಮ ಜೀವನವನ್ನು ಶಿವ ಮತ್ತು ಶಿವಶರಣ ಸ್ತುತಿ ಸಂಕೀರ್ತನೆ ಮತ್ತು ಕಾವ್ಯ ರಚನೆಗೆ ಮುಡಿಪಾಗಿರಿಸಿದ್ದಾರೆ. ಇದಕ್ಕೆ ಅವರ ಕೃತಿಗಳೇ ಸಾಕ್ಷಿಯಾಗಿವೆ.

ವೀರಶೈವ ಕವಿಗಳು ಸ್ವರ್ಗಕ್ಕಿಂತ ಮರ್ತ್ಯವೇ ಶ್ರೇಷ್ಠವೆಂದು ಹೇಳಿ ಯಾವುದೇ ವ್ಯಕ್ತಿ ಕುರಿತು, ದೇವರ ಕುರಿತು ಕಾವ್ಯ ರಚಿಸಲಿಲ್ಲ. ಇದಕ್ಕೆ ಕಾರಣ ವಚನಕಾರರ ಪ್ರಭಾವ ದಟ್ಟವಾಗಿ ಇವರ ಮೇಲೆ ಆಗಿದ್ದಿರಬಹುದು ಎನಿಸುತ್ತದೆ. ಏಕೆಂದರೆ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೇಳಿದಂತೆ

"ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
ಕೂಡಲ ಸಂಗಮದೇವಾ."

ಇದರಂತೆಯೇ ವೀರಶೈವ ಕವಿಗಳೂ ಕೂಡ ಸ್ವರ್ಗ ನರಕ ಎಲ್ಲವೂ ಇಲ್ಲಿಯೇ ಇದೆ ಎಂದು ಈ ಲೋಕಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಹರಿಹರ ಕವಿಯ ಸತ್ ಸಂಪ್ರದಾಯ ಮತ್ತು ಕಾವ್ಯದರ್ಶವೇ ವೀರಶೈವ ಕವಿಗಳಿಗೆ ಕಾವ್ಯರಚನಗೆ ಕಾರಣ ಮತ್ತು ಪ್ರೇರಣೆಯಾಗಿ ಪರಿಣಮಿಸಿದವು. ಕನ್ನಡ ನಾಡಿನ ಶಿವಶರಣರ ಮೇಲೆ ಪ್ರಭಾವ ಬೀರಿದಂತಹ ಮತ್ತು ಅವರಿಗೆ ಪೂಜ್ಯರೆನಿಸಿದಂತಹ ತಮಿಳು ಪುರಾತನ ಶಿವಭಕ್ತರ ಚರಿತ್ರೆಯನ್ನು ಹರಿಹರ ಕವಿರಚನೆ ಮಾಡಿದುದನ್ನು ಕಂಡು ಮುಂದೆ ಬಂದ ಅನೇಕ ವೀರಶೈವ ಕವಿಗಳು ತಮ್ಮ ತಮ್ಮ ಕೃತಿಗಳಲ್ಲಿ ವಿವರವಾಗಿ ಇಲ್ಲವೆ ಸಂಕ್ಷೇಪ್ತವಾಗಿ ತಾವೂ ಅವರ ಚರಿತ್ರೆಯನ್ನು ಚಿತ್ರಿಸಿದ್ದಾರೆ. ಇದರಿಂದಾಗಿ ವೀರಶೈವ ಸಾಹಿತ್ಯದಲ್ಲಿ ಕಲಾತ್ಮಕತೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ ಎಂದು ಹೇಳಬಹುದು.

ಪ್ರಸ್ತುತ ಕೃತಿ ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು ಇಲ್ಲಿ ಪವಾಡ ಕಥೆಗಳೇ ಹೆಚ್ಚಿನ ಮಟ್ಟದಲ್ಲಿ ವರ್ಣಿತಗೊಂಡುದನ್ನು ಕಾಣಬಹುದಾಗಿದೆ. ಇವು ೧೨ನೇ ಶತಮಾನದ ಶಿವಶರಣರ ಜೀವನ ಚರಿತ್ರೆಯನ್ನೇ ಅವಲಂಬಿಸಿವೆ. ಬಸವಾದಿ ಶಿವಶರಣರ ಕುರಿತು ಪವಾಡ ಕಥೆಗಳಲ್ಲಿ ಬಸವಣ್ಣನವರ ಪವಾಡ ಕಥೆಗಳು ಹೆಚ್ಚಾಗಿ ಕಂಡುಬರುತ್ತವೆ. ಏಕೆಂದರೆ ಅಂದಿನ ಸಮಾಜದಲ್ಲಿ ಜನರ ಮಾನಸಿಕ ಸ್ಥಿತಿ ಹೇಗಿತ್ತೆಂದರೆ ಅವರು ಒಬ್ಬ ಶ್ರೇಷ್ಠವಾದ ವ್ಯಕ್ತಿಯನ್ನು ಗುರುತಿಸುವಲ್ಲಿ ವಿಫಲರಾಗಿದ್ದು ಆಗ ಈ ಪವಾಡ ಕಥೆಗಳಲ್ಲಿ ಆತನ ಪವಾಡಗಳು ಅತಿಮಾನುಷ ಶಕ್ತಿಗಳು ಇವುಗಳನ್ನು ಕಂಡು ಅವುಗಳಿಂದ ಭಯ ಭಕ್ತಿ ಜನರ ಮನಸ್ಸಿನಲ್ಲಿ ಮೂಡಿ ಆ ವ್ಯಕ್ತಿಯನ್ನು ಒಬ್ಬ ಪವಾಡ ಪುರುಷ ಪೂಜ್ಯನಾದವರು ಎಂದು ನಂಬುತ್ತಿದ್ದರು. ಇದೇ ಕಾರಣದಿಂದಾಗಿಯೇ ಹನ್ನೆರಡನೆ ಶತಮಾನದ ವೀರಶೈವ ಕವಿಗಳು ಶರಣರ ಚರಿತ್ರೆಗಳಲ್ಲಿ ಪವಾಡ ಕಥೆಗಳನ್ನು ಸೃಷ್ಟಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಬೇರೆ-ಬೇರೆ ಕವಿಗಳು ತಮ್ಮ ಮನಸ್ಸು ಇಚ್ಛೆಗನುಗುಣವಾಗಿ ಪವಾಡಗಳನ್ನು ಜೋಡಿಸಿ ಬರೆದರು. ಹೀಗೆ ಪವಾಡ ಕಥೆಗಳು ಒಂದರ ಹಿಂದೆ ಒಂದು ಬೆಳೆಯುತ್ತ ಬಂದವು.

ಉದಾ:- ಬಸವಣ್ಣನವರ ಒಂದು ಪವಾಡ ಅದು ಬದನೆಕಾಯಿ ಲಿಂಗವಾಗಿ ಪರವರ್ತನೆಯಾದುದು.

ಒಮ್ಮೆ ಕಳ್ಳರಿಬ್ಬರು ಬಸವಣ್ಣನವರ ಮನೆಯಲ್ಲಿ ಜಂಗಮರ ಊಟದ ಸಮಯದಲ್ಲಿ ತಾವೂ ಬಂದು ಕುಳಿತ್ತಿದ್ದರು. ಆಗ ಅವರು ತಮ್ಮ ಕೊರಳಿನಲ್ಲಿ ಲಿಂಗವಿಲ್ಲದುದರಿಂದ ಬದನೆಕಾಯಿಗಳನ್ನು ಕಟ್ಟಿಕೊಂಡು ಬಂದಿದ್ದರು. ಇದನ್ನರಿತ ಬಸವಣ್ಣನವರು ಅವರಲ್ಲಿಗೆ ಬಂದು ಪೂಜೆಗೆ ಲಿಂಗವನ್ನು ಹೊರತೆಗೆಯಲು ಹೇಳಿದಾಗ ಕಳ್ಳರು ಹೆದರಿಕೊಂಡು ಆದುದ್ದಾಗಲಿ ಎಂದು ಬಿಚ್ಚುನೋಡಿದರೆ ಅಲ್ಲಿ ಬದನೆಕಾಯಿ ಬದಲಿಗೆ ಲಿಂಗಗಳಿದ್ದವು. ಇದರಿಂದಾಗಿ ಕಳ್ಳರು ತಪ್ಪು ಒಪ್ಪಿಕೊಂಡು ಮುಂದೆ ಒಳ್ಳೆಯ ಸಜ್ಜನರಾದರು.

---

೬) ಡಾ.ವ್ಹಿ.ಜಿ. ಪೂಜಾರರ - ಪವಾಡ ಕಥೆಗಳು ಮತ್ತು ಇತರ ಲೇಖನಗಳು (ಸಂಶೋಧನೆ) ಪುಟ-೨

ಹೀಗೆ ಇನ್ನೂ ಅನೇಕ ಪವಾಡ ಕಥೆಗಳು ಸಿಗುತ್ತವೆ. ಬಸವಣ್ಣನವರು ಗೊಲ್ಲತಿಯ ಬೀಳುತಲಿದ್ದ ಮೊಸರುಗಡಿಗೆಯನ್ನು ನಿಲ್ಲಿಸಿದ್ದು, ಮಣ್ಣಿನ ಹೋರಿಗೆ ಜೀವ ಬರಿಸಿ ಆಕಾಶದೆತ್ತರಕ್ಕೆ ನೆಗೆಸಿದ್ದು, ಮುಂತಾದವುಗಳು ಇಂತಹ ಪವಾಡ ಕಥೆಗಳನ್ನು ಆಯಾ ಕವಿಗಳು ತಮ್ಮ ಕಾವ್ಯಕ್ಕೆ ತಕ್ಕಂತೆ ಬದಲಿಸಿಕೊಂಡು ವರ್ಣಿಸಿದ್ದಾರೆ. ಈ ಸಂಪ್ರದಾಯವು ವೀರಶ್ಯವ ಕವಿಗಳಲ್ಲೀ ಬಹುಮಟ್ಟಿಗೆ ಕಾಣಸಿಗುತ್ತದೆ. ಇದಕ್ಕೆ ಕಾರಣ ವೀರಶೈವ ಕವಿಗಳು ಶಿವಶರಣರ ಮೇಲಿಟ್ಟ ಭಕ್ತಿಯೇ ಎನ್ನಬಹುದು.

ಇನ್ನು ಧಾರ್ಮಿಕ ಮಹಾಪುರುಷರು ಜನಿಸಿದ್ದು ಮತ್ತು ಅವರು ತಾಳಿದ ಅವತಾರಗಳ ಕುರಿತು ನೋಡುವುದಾದರೆ ಜಗತ್ತಿನಲ್ಲಿರುವಂತಹ ಎಲ್ಲಾ ಪ್ರಮುಖ ಧರ್ಮಗಳು ಯೋಗಿಗಳು ಜ್ಞಾನಿಗಳು ಪ್ರಯತ್ನದ ಫಲವೆಂಬುದು ತಿಳಿದಿರುವ ಸಂಗತಿ. ಈ ಎಲ್ಲಾ ಧರ್ಮಗಳ ಪುನರುದ್ದಾರಕರಾದ ಮಹಾ ಪುರುಷರು ಸಹ ಸಾಮಾನ್ಯ ಮಾನವರಂತೆಯೇ ಜನಿಸಿ ಉತ್ತಮಾದಿ ಬಾಳು ಬಾಳಿದ ಶ್ರೇಷ್ಠ ವ್ಯಕ್ತಿಗಳು ತಮ್ಮಂತೆಯೇ ಸನ್ಮಾರ್ಗದಲ್ಲಿ ನಡೆಯಲು ಸಾಮಾನ್ಯ ಜನರಿಗೆ ನೀತಿಯನ್ನು ಬೋಧಿಸಿ ಅವರ ಬಾಳನ್ನು ಹಸನುಗೊಳಿಸಿದವರು.

ಅಲೌಕಿತ ಜನನವೆಂದಾಗ ಅದು ಸಾಮಾನ್ಯವಾಗಿ ಭೌತಿಕ ಜಗತ್ತಿನ ನಿಸರ್ಗದ ನಿಬಂಧನೆಗೊಳಪಟ್ಟು ನಡೆಯದೇ ವಿಲಕ್ಷಣವಾಗಿ ನಡೆಯುವಂತಹದು.

ಉದಾ:-

- ಬುದ್ಧನು ಭೂಲೋಕದ ಉದ್ದಾರಕ್ಕಾಗಿ ಜನಿಸುವಾಗ ತನ್ನ ತಾಯಿಯ ಕನಸಿನಲ್ಲಿ ದೊಡ್ಡದಾದ ಬಿಳಿ ಆನೆ ಬಂದು ಆಕೆಯ ಗರ್ಭ ಪ್ರವೇಶಿಸಿದಂತಾಯಿತಂತೆ.
- ಯೇಸು ಕ್ರಿಸ್ತ ಮೇರಿ ಇನ್ನೂ ಕನ್ನೆಯಗಿರುವಾಗಲೇ ಆಕೆಯ ಉದರದಲ್ಲಿ ಜನಿಸಿದುದು.
- ಮಹಾಭಾರತದಲ್ಲಿ ಕುಂತಿಯು ದುರ್ವಾಸಮುನಿಗಳಿಂದ ವರ ಪಡೆದು ಸೂರ್ಯನಿಂದ ಕರ್ಣನನ್ನು, ಯಮನಿಂದ ಧರ್ಮನನ್ನು ಇಂದ್ರನಿಂದ ಅರ್ಜುನನ್ನು ವಾಯುನಿಂದ ಭೀಮಸೇನರಂತಹ ಕಲಿಗಳಿಗೆ ಜನ್ಮ ನೀಡಿದುದು.
- ಚೆನ್ನ ಮಲ್ಲಿಕಾರ್ಜುನ ಜನನವು ಅಕ್ಕನಾಗಮ್ಮ ಜಂಗಮ ಪ್ರಸಾದ ಸೇವಿಸಿದುದರ ಕಾರಣ ಸಂಭವಿಸಿತೆಂದು ಹೇಳಲಾಗಿದೆ. ಹೀಗೆ ಮಹಾನುಭಾವರೆನಿಸಿದವರೆಲ್ಲರೂ ಈ ರೀತಿಯ ಅಲೌಕಿತ, ಅವಾಸ್ತವಿಕ, ಕಾಲ್ಪನಿಕ ರೀತಿಯಿಂದ ಜನಿಸಿದರೆಂದು ಅಯಾ ಧಾರ್ಮಿಕ ಗ್ರಂಥಗಳು ವರ್ಣೀಸುತ್ತವೆ.

ಸಾಮಾನ್ಯ ಜನರು ನಂಬಿಕೊಂಡಿರುವ ಒಂದು ಅಂಶವೇನೆಂದರೆ ಸಹಜವಾಗಿ ಲೌಕಿಕರಂತೆ ರಕ್ತ-ಮಾಂಸಗಳಿಂದ ಜನಿಸಿದವರೆಲ್ಲ ಸಮಾನ್ಯರು ಆದರೆ ಅಲೌಕಿಕವಾಗಿ ಜನಿಸಿರುವವರೆಲ್ಲ ಶ್ರೇಷ್ಠರು.

ಧಾರ್ಮಿಕ ಗ್ರಂಥಗಳು ಅವರನ್ನು ದೇವರ ಅಂಶ, ಪವಾಡ ಪುರುಷ, ಪೂಜ್ಯನೀಯರು ಎಂಬುದಾಗಿ ವರ್ಣಿಸಿದುದು, ಜನರಲ್ಲಿ ಆ ಮಹಾತ್ಮರ ಬಗ್ಗೆ ಭಕ್ತಿ–ಶ್ರದ್ಧೆಗಳು ಮೂಡಲಿ ಎಂಬುದೇ ಕಾರಣವಾಗಿದೆ. ಇನ್ನು ಪ್ರಭುಲಿಂಗ ಲೀಲೆಯಲ್ಲಿ ಪ್ರಭುವಿನ ಯಾತ್ರೆಯು ಪರಿಪರಿಯಾದ ಅರ್ಥದಲ್ಲಿ ಯೋಗಿಗಳ ಕಣ್ಣು ತೆರೆಸುವುದು. ಅವರಿಗೆ ದಾರಿ ದೀಪವಾಗುವುದೇ ಆಗಿದೆ. ಪ್ರಭು ಸೋಲ್ಲಾಪೂರದ ಸಿದ್ಧರಾಮನಿಗೆ ಆತ ಯೋಗ ಸಾಧನೆಯಿಂದ ಪ್ರಾಣಲಿಂಗ ಜ್ಞಾನಯುಕ್ತನಾಗಿದ್ದರೂ ಆತನಿಗೆ ಕರ್ಮದಿಂದ ಬಿಡುಗಡೆ ನೀಡುವನು. ಆಗ ಆತ ಪರಿಪೂರ್ಣ ಯೋಗಿಯಾಗುವನು. ಬಸವಣ್ಣನಿಗೆ ಇಷ್ಟಲಿಂಗ ಪೂಜೆಯು ಮಾತ್ರ ಶ್ರೇಷ್ಠವಲ್ಲ ಜಂಗಮ ಪೂಜೆಯೂ ಅಷ್ಟೇ ಶ್ರೇಷ್ಠವಾದುದು ಎಂದು ತಿಳಿಸಿಕೊಡುತ್ತಾನೆ. ನಂತರ ಕೆಲಕಾಲ ಕಲ್ಯಾಣದಲ್ಲಿದ್ದು, ಅನುಭವ ಮಂಟಪದಲ್ಲಿ ಅಧ್ಯಾತ್ಮ ವಿಷಯ ಕುರಿತು ಅನೇಕ ಶಿವಶರಣರ ಮಧ್ಯೆ ಚರ್ಚೆಗೈದು ಮತ್ತೆ ಲೋಕ ಸಂಚಾರಕ್ಕೆ ಹೊರಡುತ್ತಾನೆ.

ನಂತರ ಪ್ರಭುವು ರೋಗಿಯಲ್ಲಿಗೆ ಅಮೃತವೆ ಮೈಯಾಗಿ ನಡೆತಂದತೆ ಗೋರಕ್ಷಕನ ಬಳಿಗೆ ಬಂದು ಅವನಿಗೆ ಶರೀರವಜ್ರವಾದರೆ ಮೋಕ್ಷವಿಲ್ಲ. ತನ್ನಂತೆ ನಿರ್ದೇಹಿಯಾಗಬೇಕು. ಈ ಕಾಯದ ಮಾಯೆಯ ಛಾಯೆಯ ಆಸೆಯನ್ನು ತ್ಯಜಿಸಬೇಕೆಂದು ಆತನಿಗೆ ಹೇಳಿ ಪರಮಯೋಗದಿ ರಹಸ್ಯವನ್ನು ತಿಳಿಸಿ ವೀರಶೈವ ತತ್ವೋಪದೇಶ ಮಾಡಿ ಮುಂದೆ ಸಾಗುವನು.

ಹೀಗೆ ಪ್ರಭುವು ಸಂಚರಿಸುತ್ತ ಕೊನೆಗೆ ಕಲ್ಯಾಣಕ್ಕೆ ಮರಳಿ ಬಂದು ಬಸವಣ್ಣ ರಚಿಸಿದ ಅನುಭವ ಮಂಟಪದ ಸಿಂಹಾಸನವನ್ನೇರಿ ಗುಹೇಶ್ವರ ಲಿಂಗಮಾರ್ಗ ಬೋಧನೆ ಮಾಡುತ್ತ ಭಕ್ತರಿಗೆ ವೀರಶೈವ ಉಪದೇಶ ಮಾಡಿದನು.

ಪವಾಡ ಕಥೆಗಳು ವಚನಗಳಿಂದ ಹುಟ್ಟುಕೊಂಡವಾಗಿರಬಹುದು. ಅಥವಾ ವ್ಯಕ್ತಿಯ ಕುರಿತಾದ ಪವಾಡ ಕಥೆಗಳಾಗಿರಬಹುದು. ಅವುಗಳೆಲ್ಲ ಒಂದೇ ತರನಾಗಿ ಬೆಳೆದುಕೊಂಡು ಬರದೇ, ಅಲ್ಲಲ್ಲಿ ನಡುವೆ ಕವಿಗಳ ಭಕ್ತಿರಸಕ್ಕೆ ಒಳಪಟ್ಟು ತಮ್ಮ ನೈಜರೂಪದಲ್ಲೀ ಬದಲಾವಣೆಗಳಾಗಿವೆ. ವೀರಶೈವ ಕವಿಗಳ ಶೈಲಿಗೆ ಅನುಗುಣವಾಗಿ ಪವಾಡ ಕಥೆಗಳು ವರ್ಣಿತಗೊಂಡಿವೆ.

೧) ಲೇಖಕರು: ಡಾ.ವ್ಹಿ.ಜಿ.ಪೂಜಾರ – ಪವಾಡ ಕಥೆಗಳು ಮತ್ತು ಇತರ ಲೇಖನಗಳು ಪುಟ–೩೭

೨) ಲೇಖಕರು: ಡಾ.ವ್ಹಿ.ಜಿ.ಪೂಜಾರ - ಪವಾಡ ಕಥೆಗಳು ಮತ್ತು ಇತರ ಲೇಖನಗಳು.

ಉದಾ:- ಬಸವಣ್ಣನವರು ಜಂಗಮ ಪ್ರಾಣಿ ಎಂಬ ಬಗ್ಗೆ ಒಂದು ಪವಾಡ ಕಥೆ ಇದೆ.

'ಒಂದು ದಿನ ಬಸವಣ್ಣನವರು ಶಿವಯೋಗ ನಿದ್ರಾ ಮುದ್ರೆಯಲ್ಲಿರುವಾಗ ಅವರನ್ನು ಕಾಣಲು ಕೆಲ ಜಂಗಮರು ಬರುವರು. ದ್ವಾರ ಪಾಲಕನು ಅವರು ಮಲಗಿದ ವಿಷಯ ತಿಳಿಸುವನು. ಆಗ ಅವರು ಹಾಗಯೇ ಹಿಂತಿರುಗಿ ಹೋಗುವರು. ಕೂಡಲೇ ಅವರ ಹಿಂದೆ ಬಸವಣ್ಣನ ಪ್ರಾಣವು ಹೋಗುವುದು. ಆಮೇಲೆ ಚೆನ್ನಬಸವಣ್ಣನು ಬಂದು ಬಸವಣ್ಣನವರ ದೇಹದಲ್ಲಿ ಪ್ರಾಣವಿಲ್ಲದುದನ್ನರಿತು, ದ್ವಾರಪಾಲಕನನ್ನು ಕೇಳುವರು ಆತ ನಡೆದ ವಿಷಯ ತಿಳಿಸುವನು. ಆಗ ಚೆನ್ನಬಸವಣ್ಣನವರು ಆ ಜಂಗಮರನ್ನು ಕರೆಸಲು ಬಸವಣ್ಣನವರ ಹೋದ ಪ್ರಾಣ ಮರಳಿ ಬಂದಿತೆಂದು ಬಣ್ಣಿಸಲಾಗಿದೆ.

"ವಚನಗಳಿಂದ ಹುಟ್ಟಿದ ಪವಾಡ ಕಥೆಗಳಲ್ಲಿ, ಬಸವಣ್ಣ ವಚನ
ಬಡನಿರ್ದ ಸತಿಯೆಂದು ನೆಚ್ಚಿರ್ದೆನಯ್ಯ
ಅಯ್ಯೋ ನಮ್ಮಯ್ಯಾನ ಕೈನೊಂದಿತು
ತೆಗೆದು ಕೊಡಾ ಎಲೆ ಚಾಂಡಾಲ ಗಿತ್ತಿ
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲ ಸಂಗಮನಲ್ಲಿದೆ ಮತ್ತಾರೂ ಇಲ್ಲಾ"

ಎನ್ನುವಲ್ಲಿ ಕಳ್ಳನೊಬ್ಬ ಅವರ ಪತ್ನಿಯ ಕಿವಿಯೋಲೆಯನ್ನು ಕಳುವು ಮಾಡಲು ಬಂದುದು ಪಶ್ಚಾತ್ತಾಪದಿಂದ ಆತ ನಿಜ ಜಂಗಮನಾದುದು ಈ ಪವಾಡ ಕಥೆಯ ಕುಟ್ಟಿಗೆ ಪ್ರೇರಣೆಯನ್ನಿಂತತಿವೆ. ಈ ರೀತಿಯಲ್ಲಿ ಅನೇಕ ಪವಾಡ ಕಥೆಗಳು ವಚನಗಳಿಗೆ ತಕ್ಕಂತೆ ಬೆಳೆದು ಬಂದವುಗಳಾಗಿವೆ. ಪವಾಡ ಕಥೆಗಳು ಕುರಿತಾದ ಈ ಎಲ್ಲ ಲೇಖನಗಳು ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದವು. ಇಲ್ಲಿ ಪವಾಡ ಕಥೆಗಳು ಎಂದಾಕ್ಷಣ ಅಂಧ ಸಂಪ್ರದಾಯ ಮೂಢ ನಂಬಿಕೆ ಎಂದು ತಿಳಿಸುವ ಉದ್ದೇಶವಿಲ್ಲ. ಯಾವುದೇ ಭಾಷೆಯಾಗಲಿ ಆ ಭಾಷೆಯ ಧಾರ್ಮಿಕ ಸಾಹಿತ್ಯವನ್ನು ತಿರುವಿದಾಗ ಇಂತಹ ಅದೆಷ್ಟೋ ಪವಾಡ ಕಥೆಗಳು ನಮಗೆ ಕಂಡು ಬರುತ್ತವೆ. ಅದು ವೀರಶೈವ ಸಾಹಿತ್ಯದಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಾಗಿಯೇ ಬೆಳೆಯುತ್ತ ಮಾರ್ಪಾಟಾಗುತ್ತ ಬಂದುದನ್ನು ಕಾಣಬಹುದು.

ಪ್ರಸ್ತುತ ಡಾ.ಪೂಜಾರ ಇನ್ನೊಂದು ಸಂಶೋಧನಾ ಕೃತಿ ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಈ ಕೃತಿ ಡಾ.ಪೂಜಾರರ ಪಿ.ಎಚ್.ಡಿ ಸಂಶೋಧನಾ ಮಹಾ ಪ್ರಬಂಧದ ಸಂಕ್ಷಿಪ್ತ ರೂಪವಾಗಿದೆ. ಈ ಕೃತಿಯಲ್ಲಿ ಪವಾಡಗಳ ಪ್ರಾಚೀನತೆ, ಅದರ ಹುಟ್ಟು ಬೆಳೆವಣಿಗೆ ಪವಾಡ ಕಥೆಗಳು, ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು ಹುಟ್ಟಿಬರಲು ಪ್ರೇರಣೆ ಆಧಾರ ಮತ್ತು ಅವುಗಳ ಭಾಗಗಳು, ಪವಾಡ ಕಥೆಗಳಿಂದ ಪುರಾಣದ ಬೆಳವಣಿಗೆ, ಇವುಗಳ ಕೊರತೆ,

ಕೊಡುಗೆ ಎಂಬ ಮುಂತಾದ ವಿಷಯಗಳ ಮೇಲೆ ದೀರ್ಘವಾದ ಅಧ್ಯಯನವನ್ನು ಡಾ.ಪೂಜಾರರು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಪವಾಡಗಳ ಸತ್ಯಾ ಸತ್ಯತೆಯ ಬಗೆಗೆ ಸಂಶೋಧನೆ ನಡೆಸಿ ನಿರ್ಣಯಿಸುವುದು ಮತ್ತು ಅವುಗಳನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ಅರ್ಥೈಸುವುದು ಪ್ರಸ್ತುತ ಪ್ರಬಂಧದ ಉದ್ದೇಶಕ್ಕೆ ಹೊರತಾದುದು ಎಂದು ಲೇಖಕರು ಹೇಳುತ್ತಾರೆ. ಏಕೆಂದರೆ ಆ ಕಾರ್ಯವನ್ನು ತತ್ವಜ್ಞಾನಿಗಳು ಅತೀಂದ್ರಿಯ ಜ್ಞಾನಿಗಳು ಹಾಗೂ ಯೋಗ ಸಾಧಕರು ಸಾಧಿಸಿ ತೋರಿಸಬೇಕಾಗುತ್ತದೆ.

೧೨ನೇಯ ಶತಮಾನದಲ್ಲಿ ಒಂದು ಬಹುದೊಡ್ಡ ಪ್ರವಾಹ ಶಕ್ತಿ ತುಂಬಿ ಬಂದು ವೀರಶೈವ ಧರ್ಮವನ್ನು ಬಲಿಷ್ಠಗೊಳಿಸಿತು. ವೀರಶೈವ ಧರ್ಮಕ್ಕೆ ಸ್ವತಂತ್ರ ವ್ಯಕ್ತಿತ್ವ ಗೌರವ ಸ್ಥಾನ ದೊರೆತದು ಈ ಶತಮಾನದಲ್ಲಿಯೇ ವಿಶ್ವಮಾನ್ಯ ಎನ್ನಿಸಿದ ಶರಣರ ಸಂದೇಶ ತತ್ವಗಳನ್ನು ನೀಡಿ ಕೃತ ಕೃತ್ಯವೆನ್ನಿಸಿಕೊಂಡಿತು. ಇದರ ಬೆಳಕನ್ನೇ ವೀರಶೈವ ಸಾಹಿತ್ಯದ ತುಂಬೆಲ್ಲಾ ಚೆಲ್ಲಾಡಿತು.

೧೩-೧೪ನೆಯ ಶತಮಾನದ ಕವಿಗಳಿಗೆ ವಚನ ಸಾಹಿತ್ಯ ನೇರವಾಗಿ ಲಭ್ಯವಾಗಲಿಲ್ಲ ಅವು ಕಿವಿಯಿಂದ ಕಿವಿಗೆ ಹರಿದು ಬಂದ ಆಧಾರಗಳೇ ಇವರು ಕೃತಿ ನಿರ್ಮಾಣ ಮಾಡಲು ಪ್ರೇರಣೆಯಾದವು ಕಾಲಾವಧಿಯ ದೃಷ್ಟಿಯಿಂದ ನೋಡಿದಾಗ ಹರಿಹರನ ಶಿವಗಣದ ರಗಳೆಗಳು, ಪಾಲ್ಕುರಿಕೆ ಸೋಮನಾಥನ ಬಸವಪುರಾಣವು ಇವು ಸಮೀಪ ಇದ್ದದರಿಂದ ಶರಣರ ಚರಿತ್ರೆಯ ಅನ್ವೇಷಣೆ ಸುಲಭವಾಯಿತು. ಇವರಿಂದ ಮೊದಲುಗೊಂಡ ಪುರಾಣ ಪರಂಪರೆಯು ಚೆನ್ನಪ್ಪ ಕವಿಯ ಶರಣ ಲೀಲಾಮೃತದವರೆಗೆ ಮುಂದುವರಿದಿದೆ. ಇವುಗಳಲ್ಲಿನ ಪವಾಡ ಕಥೆಗಳು ಇಡಿ ಕಿರಿದು ತುಂಬಿಕೊಂಡಿದನ್ನು ಕಾಣಬಹುದು. ಪವಾಡಗಳು ನಮ್ಮ ಪುರಾತನ ಪರಂಪರೆಯ ನಂಬಿಕೆಗೆ ಆಧಾರವಾಗಿವೆ. ಜಗತ್ತಿನ ಎಲ್ಲಾ ಪ್ರಮುಖ ಧರ್ಮದ ಕೃತಿಗಳಲ್ಲಿ ನಾವು ಪವಾಡ ಕಥೆಗಳು ವರ್ಣಿತವಾದುದನ್ನು ಕಾಣುತ್ತೇವೆ. ಇವು ಧಾರ್ಮಿಕ ಸಾಹಿತ್ಯದ ಅವಿಭಾಜ್ಯ ಅಂಗಗಳಾಗಿ ಇಂದಿನ ತನಕ ಉಳಿದು ಬಂದಿರುವುದನ್ನು ಕಾಣಬಹುದಗಿದೆ.

ಧಾರ್ಮಿಕ ಮಹಾಪುರುಷರ, ಪ್ರವಾದಿಗಲ ಸಾಧು-ಸತ್ಪುರುಷರ ಜೀವನ ಚರಿತ್ರೆಯಲ್ಲಿ ಬೆರೆತುಕೊಂಡಿವೆ. ಇದಕ್ಕೆ ಶಿವಶರಣರ ಚರಿತ್ರೆಯೂ ಸಹ ಹೊರತಾಗಿಲ್ಲ. ಅಂದಿನ ಯುಗ ಧರ್ಮಕ್ಕೆ ಅನುಗುಣವಾಗಿ ನೋಡಿದರೆ ಕವಿಗಳಿಗೆ ಪುರಾಣಕಾರರಿಗೆ ಶ್ರೀ ಸಾಮಾನ್ಯರಲ್ಲಿ ಶರಣರ ಬಗ್ಗೆ ಭಕ್ತಿ ಶ್ರದ್ಧೆಗಳನ್ನು ಮಾಡಿಸಲು ಪವಾಡ ಕಥೆಗಳ ಅವಶ್ಯಕತೆ ಇದ್ದಂತೆ ತೋರುತ್ತದೆ. ಅವರ ಘನತೆಯನ್ನು ಹೆಚ್ಚಿಸಬೇಕಾದರೆ, ಪುರಾಣಕಾರರಿಗೆ ಆಗಿನ ಕಾಲದಲ್ಲಿ ಪವಾಡ ಕಥೆಗಳು ಅನಿವಾರ್ಯವೆಂದು ಅನಿಸಿರಬೇಕು.

೩) ಲೇಖಕರು: ಡಾ.ವ್ಹಿ.ಜಿ.ಪೂಜಾರ – ಪವಾಡ ಕಥೆಗಳು ಮತ್ತು ಇತರ ಲೇಖನಗಳು. ಪುಟ-೫

ಆ ಪುರಾಣ ಕೃತಿಗಳಲ್ಲಿರುವ ಪವಾಡ ಕಥೆಗಳೇ ಇಂದಿನ ತನಕ ಧಾರ್ಮಿಕ ಮಹಾಪುರುಷರು ಶರಣರು, ಇವರ ಬಗ್ಗೆ ಜನರಿಗಿದ್ದ ಶ್ರದ್ಧೆಯು ಉಳಿದು-ಬೆಳೆದು ಬದಲು ಸಹಾಯಕವಾಗಿವೆ. ವೀರಶೈವ ಸಾಹಿತ್ಯದ ಒಂದು ಶಾಖೆ ಪುರಾಣ ಪರಂಪರೆಯಾದರೆ ಮತ್ತೊಂದು ವಚನ, ಈ ಎರಡೂ ಶಾಖೆಗಳ ಪ್ರಯತ್ನದಿಂದಾಗಿಯೇ ವೀರಶೈವ ಸಂಪ್ರದಾಯಕ್ಕೆ ಒಂದು ಮೂರ್ತರೂಪ ಬಂದಿತು.

ವೀರಶೈವ ಧರ್ಮವು ವೈದಿಕ ಧರ್ಮದಲ್ಲಿನ ಕರ್ಮಠತನ, ವರ್ಣಾಶ್ರಮ ಪದ್ಧತಿ ಯಜ್ಞಯಾಗಾದಿಗಳಲ್ಲಿ ನಡೆಯುವ ಪ್ರಾಣಿ ಹಿಂಸೆ, ಅರ್ಥಹೀನ ಸಂಪ್ರದಾಯಗಳ ಮುಂದುವರಿಕೆ ಮುಂತಾದುವನ್ನು ಪ್ರಬಲವಾಗಿ ವಿರೋಧಿಸಿತು. ಹೀಗೆ ವಿರೋಧಿಸುವುದಕ್ಕಾಗಿಯೇ ಇದು ಹುಟ್ಟಿಕೊಂಡಿದೆ, ಎಂಬಂತೆ ಮೊದಮೊದಲು ಕಾಣಿಸಿಕೊಂಡ ವೈದಿಕ ಧರ್ಮವು ಇದರ ಪ್ರಸಾಕ್ಕೆ ಹಲವಾರು ತೊಂದರೆಗಳನ್ನು ತಂದೊಡ್ಡಿತು. ಈ ಕಾರಣದಿಂದಲೋ ಏನೋ ವೀರಶೈವ ಕವಿಗಳು ಆ ಧರ್ಮದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಲವು ಮಾರ್ಗಗಳನ್ನು ಅನುಸರಿಸಿದರು. ಅವುಗಳಲ್ಲಿ ಧಾರ್ಮಿಕ ಮಹಾಪುರುಷರ ವ್ಯಕ್ತಿ ಮಹಿಮೆಯನ್ನು ಅದ್ಭುತ ಶಕ್ತಿಯನ್ನು ಹಾಗೂ ಧಾರ್ಮಿಕ ತತ್ವಗಳ ಘನತೆಯನ್ನು ಆಚಾರದ ಮಹತ್ವವನ್ನು ಶ್ರೀ ಸಾಮಾನ್ಯರಿಗೆ ತಿಳಿಸಲು ವಿಶೇಷವಾಗಿ ತಮ್ಮ ಕೃತಿಗಳಲ್ಲಿ ಪವಾಡ ಕಥೆಗಳನ್ನು ಅಳವಡಿಸಿಕೊಂಡು ವರ್ಣಿಸಿದ್ದಾರೆ.

"ನೀನೊಲಿದಡೆ ಕೊರಡು ಕೊನರುವುದಯ್ಯಾ
ನೀನೊಲಿದಡೆ ಬರಡು ಹಯನಹುದಯ್ಯಾ
ಊರ ಮುಂದೆ ಹಾಲಹಳ್ಳ ಹರಿವುತ್ತಿರಲು
ಬರೆಯಾವಿನ ಬೆನ್ನಲ ಹರಿಯಲದೇಕಯ್ಯಾ
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲ ಸಂಗಮ ದೇವರುಳನ್ನಕ್ಕ ಬಿಜ್ಜಳನ
ಭಂಡಾರವೆನಗೇಕಯ್ಯಾ"

ಬಸವಣ್ಣನವರ ಇಂಥ ಕೆಲವು ವಚನಗಳು ಅವರನ್ನು ಕುರಿತು ವರ್ಣಿಸಲಾದ ಪವಾಡ ಕಥೆಗಳ ಹುಟ್ಟಿಗೆ ಆಧಾರವದುದನ್ನು ಗುರುತಿಸಬಹುದಾಗಿದೆ.

ಬಿಜ್ಜಳನ ಆಸ್ಥಾನದಲ್ಲಿ ಕೆಲ ಕುಹಕಿಗಳು ಬಸವಣ್ಣನ ಅರ್ಥಮಂತ್ರಿಯಾಗಿದ್ದರಿಂದ ಭಂಡಾರವೆಲ್ಲಾ ದಾನಮಾಡಿ, ಬರಿದಾಗಿಸಿದ್ದನೆಂದು ರಾಜನಿಗೆ ದೂರಲು ಬಸವಣ್ಣನವರು ಬಿಜ್ಜಳನೊಂದಿಗೆ ಭಂಡಾವಿರುವಲ್ಲಿಗೆ ಹೋಗಿ ನೋಡಿದಾಗೆ ಮೊದಲು ಅಲ್ಲೀರುವದಕ್ಕಿಂತ ನೂರು ಪಟ್ಟು ಹೆಚ್ಚಾಗಿರುವುದನ್ನು ಬಿಜ್ಜಳ ಕಂಡನು ಇದರಂತೆಯೇ ಇನ್ನೂಳಿದ ಕೆಲವು ಶರಣರ ಕುರಿತಾದ ಪವಾಡ ಕಥೆಗಳ ಹುಟ್ಟಿಗೂ ಅವರ ವಚನಗಳೇ ಪ್ರೇರಣೆಯಾದವು. ಎಂದು ತಿಳಿದು ಬರುವುದು. ವೀರಶೈವ ಸಾಹಿತ್ಯದಲ್ಲಿ ವರ್ಣಿಸಲಾದ ಬಹುಸಂಖ್ಯೆಯೇ ಪವಾಡ

ಕಥೆಗಳ ಹುಟ್ಟಿಗೆ ವಚನಗಳು ಪ್ರೇರಣೆಯಾಗಿವೆ. ಕೆಲವಡೆ ವಚನಗಳಲ್ಲಿ ಪವಾಡ ಕಥೆಗಳು ನೇರವಾಗಿ ಕಥೆವಾದದ್ದು ಉಂಟು. ಅಷ್ಟಾವರಣ ಕುರಿತಾದ ಪವಾಡ ಕಥೆಗಳಲ್ಲಿ ಗುರುಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ ಇವುಗಳಿಗೆ ಸಂಬಂಧಿಸಿದ ಪವಾಡ ಕಥೆಗಳನ್ನು ಕಾಣಬಹುದು.

ಗುರು-ಶಿಷ್ಯರ ಸಂಬಂಧ ಹೇಗಿರಬೇಕು, ಶಿಷ್ಯನು ಸಾಧನೆಯಲ್ಲಿ ತೊಡಗಿದಾಗ ಭಕ್ತಿ, ಆಚಾರದಲ್ಲಿ ಕುಂದುಂಟಾಗುವುದು ಸಹಜ, ಅಂತಹ ವೇಳೆಯಲಿ ಕರುಣಾಮಯನಾದ ಗುರುವು ಆತನನ್ನು ಕಾಣುವ ರೀತಿ ಮುಂತಾದವುಗಳನ್ನು ಕುರಿತು ಸಿದ್ಧರಾಮನು ಒಂದೆಡೆ ಹೀಗೆ ಹೇಳಿದ್ದಾನೆ.

"ಗುರು ಪಾದುಕೆಯ ಮೆಟ್ಟು
ಅಮರ ಗುಂಡದ ಮಲ್ಲಿಕಾರ್ಜುನ ಭೃತ್ಯಭಂಗ ಬಿಟ್ಟು
(ಕೊನೆಗೆ) ಗುರು ಕರುಣವ ಪಡೆಯಲಿಲ್ಲವೆ?
ಇದು ಕಾರಣ ಗುರುಪಾದುಕೆ ಶ್ರೀಗುರು ಕಪಿಲ ಸಿದ್ಧ ಮಲ್ಲಿಕಾರ್ಜುನನ
ಪೂಜೆಯ ಚಿಮ್ಮಾವುಗೆಯೆಂದು ನಂಬಿದೆ
ಹುಸಿಯಾದಡೆ ಪ್ರಥಮ ಸಂಕುಲದಲ್ಲಿ ಗುರು ಕೊಟ್ಟ
ಗುರು ಮೂರ್ತಿ ಇಲ್ಲದಂತೆ ಮಾಡು ಪ್ರಭುವೆ ಎಂದು ನುಡಿದಿದ್ದಾನೆ"

ಪ್ರಸ್ತುತ ವಚನದ ಆಧಾರದಿಂದ ಜನತೆ ಹಾಗೂ ಕವಿಗಳು ಈ ಕೆಳಗೆ ವಿವರಿಸಿದ ಪವಾಡ ಕಥೆಯನ್ನು ಕಟ್ಟಿ ವರ್ಣಿಸಿದಂತಿದೆ. ಗುರು ಭಕ್ತನು ಒಂದು ದಿನ ಹೂವು ತರಲು ಹೊರಟಾಗ ಕಾಣದೆ ಗುರುವಿನ ಪಾದುಕೆಯನ್ನು ತುಳಿಯುವನು. ಆಗ ಆತನು 'ಹರಹರ ಗುರು ದ್ರೋಹಿಯಾದೆ' ಎನ್ನುತ್ತ ತನ್ನ ಕಾಲನ್ನು ಕಡಿದು ಬಿಸಾಕುವನು. ಇದನ್ನು ತಿಳಿದು ಜನರು ಆತನ ಗುರು ಚೆನ್ನಮಲ್ಲಿಕಾರ್ಜುನನಿಗೆ ತಿಳಿಸುವರು ಆತ ಅಲ್ಲಿಗೆ ಧಾವಿಸಿ ಶಿಷ್ಯನನ್ನು ಕೃಪಾ ದೃಷ್ಟಿಯಿಂದ ನೋಡುವನು. ಆ ಕೂಡಲೇ ಗುರು ಭಕ್ತನ ಕಾಲು ಮೊದಲಿನಂತಾಗುವುದು.

ಇದೇ ರೀತಿ ಲಿಂಗದ ಮಹಿಮೆ, ಜಂಗಮದ ಮಹತ್ವ ಪದೋದಕದ ಶ್ರೇಷ್ಠತೆ ಪ್ರಸಾದದ ಪವಿತ್ರತೆ, ವಿಭೂತಿಯ ಶ್ರೇಷ್ಠತೆಯ ಕುರಿತು ಪವಾಡ ಕಥೆಗಳನ್ನು ನೋಡಬಹುದು.

ಇನ್ನು ಪಂಚಾಚಾರ್ಯ ಕುರಿತು ಪವಾಡ ಕಥೆಗಳಲ್ಲಿ ಶಿವಾಚಾರ, ಸದಾಚಾರ, ಗಣಾಚಾರ, ಭೃತ್ಯಾಚಾರ, ಲಿಂಗಾಚಾರ ಎಂಬ ಪಂಚ ಆಚಾರಗಳು ಕುರಿತು ಅನೇಕ ಪವಾಡ ಕಥೆಗಳು ಹೆಣೆದುಕೊಂಡಿವೆ.

---

೪) ಡಾ.ವ್ಹಿ.ಜಿ.ಪೂಜಾರ -ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು ಪುಟ-೮೫

ವೀರಶೈವರು ಎಲ್ಲೆಲ್ಲಿಯೂ ಶಿವ ಸ್ವರೂಪವನ್ನೇ ಕಂಡು ಶಿವಾನುಭವ ಸುಖವನ್ನು ಅನುಭವಿಸುವರು. ಇವರಿಗೆ ಪ್ರಕೃತಿಯ ಸಚರಾಚರ ವಸ್ತುಗಳೆಲ್ಲವೂ ಶಿವನ ಪ್ರತಿರೂಪಗಳಾಗಿಯೇ ಕಾಣುವವೆಂಬ ನಂಬುಗೆ ಶಿವಾಚಾರಿಗಳಾದ ಪ್ರಭುಲಿಂಗ ಲೀಲೆಯಲ್ಲಿ ಪ್ರಭುವಿನ ಯಾತ್ರೆಯು ಪರಿ-ಪರಿಯಾದ ಅರ್ಥದಲ್ಲಿ ಯೋಗಿಗಳ ಕಣ್ಣು ತೆರೆಸುವುದು ಅವರಿಗೆ ದಾರಿ ದೀಪವಾಗುವುದೇ ಆಗಿದೆ.

ಸದಾಚಾರದಲ್ಲಿ ಭಕ್ತನಾದವನು ಸಾತ್ವಿಕನಾಗಿ ಗುರು-ಲಿಂಗ-ಜಂಗಮಾರಾಧನೆಯನ್ನು ನಿಷ್ಠೆಯಿಂದ ಆಚರಿಸುವುದೇ ಸದಾಚಾರ

ಸದಾಚಾರಿಗಳಾದ ಬಸವಣ್ಣನವರು ಸಂಗಮನಾಥನಲ್ಲಿ ಅಚಲ ಭಕ್ತಿಯುಳ್ಳವರು, ಆತನ ಒಲುಮೆಯೊಂದಿದ್ದರೆ ಎಂಥ ಅಸಾಧ್ಯ ಕಾರ್ಯಗಳು ಕೂಡಾ ಸಾಧ್ಯವಾಗುತ್ತವೆ ಎಂಬ ಸಂಕಲ್ಪ ಶಕ್ತಿಯನ್ನು ಹೊಂದಿದವರು ಸದಾಚಾರದಲ್ಲಿ ನಡೆಯದ ಆಚಾರ ಹೀನರಿಗೆ ಸಂಶಯಗ್ರಸ್ಥರಿಗೆ ಸಹ-ಪರದಲ್ಲಿ ಸ್ಥಾನವಿಲ್ಲವೆಂದು ಅವರು ಒಂದೆಡೆ ನುಡಿದಿದ್ದಾರೆ. ಅದು ಹೀಗಿದೆ

"ಸದಾಚಾರ ಕಂಡು, ಲಾಂಛನವನಾಡದವರಿಗೆ
ಇಹದೊಳು ಪರದೊಳು ಗತಿಯಿಲ್ಲ ಕಾಣಿರೊ,
ಮಣ್ಣೆತ್ತಾದಡೇನು ತನ್ನೆತ್ತು ಗೆಲಬೇಕೆಂಬುದಕ್ಕೊಲಿವ
ನಮ್ಮ ಕೂಡಲ ಸಂಗಯ್ಯ"

ಪ್ರಸ್ತುತ ವಚನವನ್ನು ಲೇಖಕರು ಬಸವಣ್ಣನವರ ಹೆಚ್ಚಿನ ವಚನಗಳು ಎಂಬ ಸಂಗ್ರಹದಿಂದ ತೆಗೆದುಕೊಳ್ಳಲಾಗಿದೆ ಎಂದು ಸೂಚಿಸಿದ್ದಾರೆ. ಈ ವಚನದಲ್ಲಿ ಸೂಚಿತವಾದ ಸಂಗತಿಯನ್ನು ಬೆಳೆಸಿ ಪುರಾಣಕಾರರು ಬಸವಣ್ಣನವರು ಮಣ್ಣಿನ ಹೋರಿಗೆ ಜೀವಬರಿಸಿ, ಓಡಿಸಿದರೆಂದು ಪವಾಡ ಕಥೆ ಕಟ್ಟಿ ವರ್ಣಿಸಿದ್ದಾರೆ.

ಇದರಂತೆಯೇ ಗಣಾಚಾರದಲ್ಲಿ ಭಕ್ತನು ಶಿವನಲ್ಲಿ ಅತ್ಯಂತ ನಿಷ್ಠೆ ಉಳ್ಳವನಾಗಿರಬೇಕು. ಶಿವ ಹಾಗೂ ಶಿವಶರಣರ ನಿಂದೆಯನ್ನು ಆಲಿಸಬಾರದು. ಒಂದು ವೇಳೆ ಆ ನಿಂದೆ ಕಿವಿಗೆ ಬಿದ್ದರೆ ಗಣಾಚಾರಿಯಾಗಿ ನಿಂದಿಸಿದ ಆ ಭವಿಯನ್ನು ಸಂಹರಿಸಬೇಕು. ಅದು ಅಸಾಧ್ಯವಾದರೆ ತನ್ನ ಪ್ರಾಣವನ್ನೇ ಅರ್ಪಿಸಬೇಕು. ಎಂದು ಪವಾಡ ಕಥೆಗಳನ್ನು ಕಟ್ಟಿ ವರ್ಣಿಸಲಾಗಿದೆ. ಭೃತ್ಯಾಚಾರ, ಲಿಂಗಾಚಾರ ಕುರಿತು ಭಕ್ತನಾದವನು ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದು ಕಿಂಕರಭಾವದಿಂದ ಗುರು-ಲಿಂಗ-ಜಂಗಮರನ್ನು ಆರಾಧಿಸಬೇಕು. ಹಾಗೆಯೇ ಈ ದೇಹವೇ ದೇವಾಲಯ ಶಿವನು ದೇಹದಲ್ಲಿಯೇ ವಾಸವಾಗಿದ್ದಾನೆ. ಅದನ್ನು ಲಿಂಗದ ಉಪವಾಸನೆಯ ಮೂಲಕ ಸಾಧನೆಯಿಂದ ತಿಳಿಯಬೇಕು. ಎಂದಲ್ಲಿ ಪವಾಡ ಕಥೆಗಳನ್ನು ಹೆಣೆದು ವರ್ಣಿಸಲಾಗಿದೆ.

೫) ಡಾ.ವ್ಹಿ.ಜಿ.ಪೂಜಾರ – ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು ಪುಟ-೬೪

ಪವಾಡ ಕಥೆಗಳಿಂದ ಶ್ರೀಸಾಮಾನ್ಯರಿಗಾಗುವ ಪ್ರಯೋಜನವೇನು ಎಂದಾಗ ಧಾರ್ಮಿಕ ಮಹಾಪುರುಷರ ಜೀವನ ವೃತ್ತಾಂತವೇ ಆಯಾ ಧರ್ಮದ ಅನುಯಾಯಿಗಳಿಗೆ ಮತ್ತು ಸಾಮಾನ್ಯ ಜನರಿಗೆ ದಾರಿದೀಪಗಳು, ಈ ಬೆಳಕಿನಲ್ಲಿಯೇ ಅವರು ತಮ್ಮ ಬಾಳನ್ನು ಸರಿಯಾದ ರೀತಿಯಲ್ಲಿ ಸಾಗಿಸಲು ಬೆಳಗಿಸಲು ಪ್ರಯತ್ನಿಸುವರು.

ಆಯಾ ಧರ್ಮದ ಸಂಸ್ಕೃತಿಕ ಪ್ರತಿನಿಧಿಗಳು, ಧಾರ್ಮಿಕ ಮಹಾಪುರುಷರೇ ಆಗಿದ್ದಾರೆ. ಧಾರ್ಮಿಕ ತತ್ವಗಳು ಜೀವನ ಮೌಲ್ಯಗಳು ಧ್ಯೇಯದರ್ಶಗಳು ಮೂಡುವುದು. ಮೊದಲು ಆ ಮಹಾನುಭಾವರ ಹೃದಯದಲ್ಲಿ ಅನಂತರ ಅವುಗಳನ್ನು ಅವರು ಜನತೆಗೆ ಬಿಂಬಿಸಲು ಶ್ರಮಿಸುವರು.

ಶ್ರೀಸಾಮಾನ್ಯರೆಲ್ಲರೂ ಧರ್ಮದ ವಿಷಯದಲ್ಲಿ ಸಹಜವಾಗಿಯೇ ಶ್ರದ್ಧೆ ಉಳ್ಳುವರು ಧಾರ್ಮಿಕ ತತ್ವಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ಅರಿಯದಿದ್ದರೂ ದೃಷ್ಟಾಂತಗಳ ಮೂಲಕ ಅವುಗಳ ಸಾರವನ್ನು ಗ್ರಹಿಸುವರು. ಯಾವುದೇ ಧರ್ಮದಲ್ಲಿ ಸಾಧನೆ ಪ್ರಾರಂಭವಾಗುವುದು ಶ್ರದ್ಧೆಯಿಂದಲೇ ಷಟಸ್ಥಲ ಸಾಧನೆಯೂ ಶ್ರದ್ಧಾ ಭಕ್ತಿಯಿಂದಲೇ ಆರಂಭಗೊಳ್ಳುತ್ತದೆ.

ನಮ್ಮ ಯುಗದಲ್ಲೀ ಆತ್ಮ ಹೀನತೆಯ ಹೊರತು ಶಾರೀರಿಕವಾಗಿ ಯಾವ ದೋಷವೂ ಇಲ್ಲ ನಮ್ಮ ಚೇತನಕ್ಕೆ ಅನಾರೋಗ್ಯವಾಗಿದೆ. ಅವ್ಯವಸ್ಥಿತವಾಗಿ ನಮ್ಮ ಬಾಳನ್ನು ವ್ಯವಸ್ಥಿತಗೊಳಿಸಿ ಏಕತೆಯ ಗುರಿಯನ್ನು ಮೂಡಿಸಬಲ್ಲ ಜಗದ್ವ್ಯಾಪಿಯೂ ಅತೀತವೂ ಆದ ನಿತ್ಯ ತತ್ವದಲ್ಲಿ ನಮ್ಮ ಶ್ರದ್ದೆಯನ್ನು ಪುನಃ ಗಳಿಸಿಕೊಳ್ಳಬೇಕು. ಎಂದು ಪ್ಲೋಟೋ ನಿತ್ಯ ತತ್ವದಲ್ಲಿ ಶ್ರದ್ಧೆಯನ್ನಿರಸಬೇಕೆಂದು ಹೇಳಿರುವನು. ಇದರಂತೆಯೇ ಪವಾಡ ಕಥೆಗಳಲ್ಲಿಯೂ ಶ್ರದ್ದೆಯಿರಿಸಿದಾಗ ಅವುಗಳಲ್ಲಿ ಅಡಕಗೊಂಡ ಧಾರ್ಮಿಕ ಮಹಾಪುರುಷರ ಜೀವನಾದರ್ಶ ತತ್ವಗಳು ಶ್ರೀಸಾಮಾನ್ಯರಿಗೆ ತಿಳಿಯುವವು.

ಇಲ್ಲಿ ಧಾರ್ಮಿಕ ಮಹಾ ಪುರುಷರ ಮಹಿಮೆ ಹಾಗೂ ತತ್ವಗಳನ್ನು ಪ್ರದರ್ಶಿಸುವ ಪವಾಡ ಕಥೆಗಳನ್ನು ನೋಡಬಹುವಾಗಿವೆ.

ಬಸವಣ್ಣನವರು ಬಿಜ್ಜಳನ ಸಭೆಯಲ್ಲಿಯೇ ಕುಳಿತು ಕಲ್ಯಾಣ ಪಟ್ಟಣದ ಕೇರಿಯೊಂದರಲ್ಲಿ ಜಾರಿ ಬೀಳುತಲಿದ್ದ ಗೊಲ್ಲತಿಯ ಮಜ್ಜಿಗೆಯ ಹರವಿಯನ್ನು ಎತ್ತಿ ಹಿಡಿದುದು. ಬಿಜ್ಜಳನ ಭಂಡಾರದಲ್ಲಿಯ ಧನವನ್ನು ನೂರ್ಮಡಿಯಾಗಿ ವೃದ್ಧಿಗೊಳಿಸಿದುದು, ಸಾಮಾನ್ಯ ಜನತೆ ಇಂತಹ ಕಥೆಗಳನ್ನಾಲಿಸಿ ಬಸವಣ್ಣನವರು ಎಂಥ ವ್ಯಕ್ತಿ ಎಂದು ಅವರ ಮಹಿಮೆಯನ್ನು ಅರಿಯುವರು.

ತೋಂಟದ ಸಿದ್ಧಲಿಂಗರು ಋತುಮಾನಕ್ಕೆ ವಿರುದ್ಧ ಕಾಲದಲ್ಲಿ ಜಂಗಮನೊಬ್ಬನಿಗೆ ಗಿಡದಲ್ಲಿ ನೆರಳೆ ಹಣ್ಣನ್ನು ಸೃಷ್ಟಿಸಿ ಕೊಡುವರು. ಇದು ಅವರು ಜಂಗಮರ ಮೇಲಿರಿಸಿದ ಶ್ರದ್ಧೆಗೆ ಕುರುಹಾಗಿದೆಯಲ್ಲವೆ, ಅವರ ವ್ಯಕ್ತಿತ್ವದ ಮಹಿಮೆಗೆ ಹೆಗ್ಗುರುತಾಗಿದೆ.

ಜನತೆಯು ಇದನ್ನು ಕೇಳಿದಾಗ ಬಸವಣ್ಣನವರು ಮಹಿಮಶಾಲಿಗಳು ಭಕ್ತರಿಗೆ ಅಸಮಾಧಾನವಾದಾಗ ಎಂಥ ಅಸಾಧ್ಯ ಅಸಹಜವಾದ ಕೆಲಸಗಳನ್ನು ಸಹಜವಾಗಿ ನೆರವೇರಿಸಬಲ್ಲರು ಎಂದು ತಿಳಿದುಕೊಳ್ಳುವರು. ಇಂಥ ಕಥೆಗಳು ಧಾರ್ಮಿಕ ಪುರುಷರ ಕುರಿತು ಆಳವಾದ ಶ್ರದ್ಧೆಯನ್ನು ಮೂಡಿಸಿ ಮನುಷ್ಯನಲ್ಲಿ ಹುದುಗಿರುವ ದೇವತಾ ಶಕ್ತಿಯಿಂದ ಎಂತ ಅಸಾಧ್ಯವಾದುದಾದರೂ ಸಾಧ್ಯವಾಗುತ್ತದೆ ಎಂದು ಸಾರುತ್ತದೆ. ಧಾರ್ಮಿಕ ಮಹಾಪುರುಷರೆಲ್ಲರೂ ಸಾಮಾನ್ಯರಂತೆಯೇ ಜನಿಸಿದವರು. ಸಮಾಜದಲ್ಲಿ ಎಲ್ಲರೊಂದಿಗೆ ಬದುಕಿ ಉನ್ನತ ಧ್ಯೇಯದರ್ಶಗಳಿಂದೊಡಗೂಡಿದ ಬಾಳನ್ನು ಬಾಳಿದರೆಂಬುದನ್ನು ಮರೆಯಕೂಡದು. ಜಗತ್ತಿನ ಪ್ರಮುಖ ಧರ್ಮಗಳೆಲ್ಲವೂ ಇವರ ಚಿಂತನೆಯ ಫಲಗಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಇವರ ವಿಲಕ್ಷಣ ವ್ಯಕ್ತಿತ್ವಕ್ಕೆ ಒಳಗಾಗಿ ಸಾಮಾನ್ಯ ಜನತೆ ಮೊದಲಿನಿಂದಲೂ ಅವರನ್ನು ತಮ್ಮಂತೆಯೇ ಮಾನವರು ಎನ್ನುವುದಿಲ್ಲ. ಮರೆತು ಅವತಾರಿ ಪುರುಷರು, ದೈವೀ ಪುರುಷರು ಎಂದು ತಿಳಿದು ಅವರನ್ನು ಶ್ರದ್ಧೆ ಭಕ್ತಿಯಿಂದ ಆರಾಧಿಸುತ್ತಾರೆ.

ವೀರಶೈವ ಸಾಹಿತ್ಯದಲ್ಲಿ ವರ್ಣಿಸಲಾದ ಪವಾಡ ಕಥೆಗಳನ್ನು ಇತರ ಧಾರ್ಮಿಕ ಸಾಹಿತ್ಯದಲ್ಲಿ ವರ್ಣಿಸಲಾದ ಪವಾಡ ಕಥೆಗಳ ಜೊತೆಗೆ ಹೋಲಿಸಿ ನೋಡಿದಾಗ ಅನೇಕ ಅಂಶಗಳಲ್ಲಿ ಸಾಮ್ಯತೆ ಇದ್ದುದು ಉದಿತವಾಗುವುದು ಅವುಗಳಲ್ಲಿ ಈ ಅಂಶಗಳು ಪ್ರಮುಖವಾದವು. ಧಾರ್ಮಿಕ ಮಹಾಪುರುಷರ ಜನನ ಅವರು ದುಃಖಿತರನ್ನು ಅರ್ತರನ್ನು ರಕ್ಷಿಸಿ ಉದ್ಧರಿಸಿದುದು ಅವರು ಮಹಿಮಾಶಾಲಿಗಳು, ಅದ್ಭುತ ಶಕ್ತಿಶಾಲಿಗಳು ಹಾಗೂ ಅವರು ತಮ್ಮತಮ್ಮ ಮತ ಧರ್ಮಗಳ ಘನತೆಯನ್ನು ಆಚಾರಗಳ ಮಹತೆಯನ್ನು ಸಾರಲು ಅನ್ಯ ಧಾರ್ಮಿಕ ಮಹಾಪುರುಷರೊಡನೆ ವಾದ ಮಾಡಿದ್ದು, ಇವೆಲ್ಲವೂಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಈ ಅಂಶಗಳನ್ನು ಒಳಗೊಂಡು ಅನೇಕ ಪವಾಡ ಕಥೆಗಳು ಸಿಗುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ ವೀರಶೈವ ಸಾಹಿತ್ಯ ಒಟ್ಟು ಗೂಡಿಸಿ ಇದರಲ್ಲಿ ಬರುವ ಎಲ್ಲಾ ಪವಾಡ ಕಥೆಗಳು ಈ ಕೃತಿಯಲ್ಲಿ ನಮಗೆ ಸಿಗುತ್ತವೆ.

ಪವಾಡ ಕಥೆಗಳ ಮನೋಧರ್ಮ, ಅದರ ಹಿನ್ನಲೆ, ಅದಕ್ಕೆ ಕಾರಣ, ಪ್ರೇರಣೆ ಪ್ರಚೋದನೆ ಮುಂತಾದವುಗಳನ್ನು ವ್ಯಕ್ತಪಡಿಸುವಲ್ಲಿ ಲೇಖಕರು ತಮ್ಮ ಸರ್ವತೋಮುಖವಾದ ವಿಚಾರವಂತಿಕೆಯನ್ನು ಮೆರದಿದ್ದಾರೆ.

ವೀರಶೈವ ಧರ್ಮದ ತತ್ವಗಳನ್ನು ನಂಬಿಕೆಗಳನ್ನು ಸಾಮಾನ್ಯ ಜನತೆ ಹೇಗೆ ಸ್ವೀಕರಿಸಿತು ಅವುಗಳನ್ನು ಜನತೆಯ ಹತ್ತಿರ ತಲುಪಿಸಬೇಕಾದರೆ ಅದರಲ್ಲಿ ಪವಾಡ ಕಥೆಗಳ ಪಾತ್ರ ಎಷ್ಟೂ ಮುಖ್ಯವಾದುದ್ದಾಗಿತ್ತು. ಅದನ್ನು ಕವಿಗಳ ಯಾವ ಬಗೆಯಲ್ಲಿ

ವರ್ಣಿಸಿದರು ಇವೇಲ್ಲವುಗಳ ಹಿನ್ನೆಲೆಯಲ್ಲಿ ೧೨ನೇ ಶತಮಾನದ ಶಿವಶರಣರ ಕುರಿತಾದ ಅನೇಕ ಪವಾಡ ಕಥೆಗಳನ್ನು ವೈಚಾರಿಕ ದೃಷ್ಟಿಕೋನದಿಂದ ಲೇಖಕರು ತೂಗಿ ನೋಡಿದ್ದಾರೆ. ಪವಾಡ ಕಥೆಗಳನ್ನು ತಮ್ಮ ಅಧ್ಯಯನಕ್ಕಾಗಿ ಅವುಗಳಲ್ಲಿರುವ ತಾತ್ವಿಕ ದೃಷ್ಟಿಯನ್ನು ಕಂಡು ಕೊಂಡು ವೀರಶೈವ ಸಾಹಿತ್ಯಕ್ಕೆ ಇವುಗಳಿಂದ ಲಭಿಸಿದ ವ್ಯಾಪ್ತಿ ಮತ್ತು ಮಿತಿಯನ್ನು ಪರೀಶಿಲಿಸಿ. ಸಾಹಿತ್ಯಕವಾಗಿ ಅದರ ಅಧ್ಯಯನ ಕೈಕೊಂಡಿದ್ದಾರೆ. ಪವಾಡ ಕಳ ಸಮರ್ಥನೆ ಅಥವಾ ತಿರಸ್ಕಾರ ಪ್ರಸ್ತುತ ಗ್ರಂಥದ ಉದ್ದೇಶ ಲೇಶಮಾತ್ರವು ಇಲ್ಲ.

ಪ್ರಸ್ತುತ ಡಾ॥ ಪೂಜಾರರ ಇನ್ನೊಂದು ಸಂಶೋಧನಾ ಕೃತಿ ನುಲಿಯ ಚಂದಯ್ಯ ಈ ಕೃತಿಯು ೧೨ನೇ ಶತಮಾನದ ವಚನ ಸಾಹಿತ್ಯದ ಹರಿಕಾರರೆನಿಸಿದ ಶಿವಶರಣರಲ್ಲೊಬ್ಬನಾದ ಶರಣ ಚಂದಯ್ಯನ ಚರಿತ್ರೆಯಾಗಿದೆ.

೧೨ನೇ ಶತಮಾನದಲ್ಲಿ ನಡೆದ ಸಾಮಾಜಿಕ ಕ್ರಾಂತಿಯಲ್ಲಿ ನೇತೃತ್ವ ವಹಿಸಿದ್ದು ಬಸವಣ್ಣನವರು, ಆದರೆ ಈ ಪ್ರತಿಭಟನೆಗೆ ವೀಶೆಷವಾದ ಕಳೆ ಅಂದಿನ ಸಮಾಜದ ನಾನಾವರ್ಗಗಳಿಂದ ಬಂದ ಶರಣರದ್ದಾಗಿತ್ತು. ಅದರಲ್ಲಿ ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮೇದಾರ ಕೇತಯ್ಯ, ಮಡಿವಾಳ ಮಾಚಯ್ಯ, ಮಾಳಿಗೆಯ ಮಾರಯ್ಯ, ಲಕ್ಕಮ್ಮ ಮಾದರ ಚನ್ನಯ್ಯಾ, ನುಲಿಯ ಚಂದಯ್ಯ ಮುಂತಾದವರನ್ನು ಹೆಸರಿಸಬಹುದಾಗಿದೆ.

ಇವರೆಲ್ಲರೂ ತಮ್ಮ ಕಾಯಕದಿಂದಲೇ ಗುರುತಿಸಿಕೊಂಡವರು ಇವರಲ್ಲಿ ಮೇಲು ಕೀಳೆಂಬ ಭಾವನೆಯಾಗಲಿ ಶ್ರೇಷ್ಠ ಕನಿಷ್ಠವೆಂಬ ನಿಯಮಗಳಾಗಲಿ ಯಾವುವೂ ಇರಲ್ಲಿಲ್ಲ. ಇವರೆಲ್ಲ ಒಂದಾಗಿ ಬಸವಣ್ಣನವರ ಅನುಭವ ಮಂಟಪದಲ್ಲಿ ಪಾಲ್ಗೊಂಡು ತಮ್ಮ ಅನುಭವಗಳನ್ನು ವಚನ ರೂಪದಲ್ಲಿ ವ್ಯಕ್ತ ಪಡಿಸಿದರು.

ನುಲಿಯ ಚಂದಯ್ಯ ಬಸವಣ್ಣನವರ ಸಮಕಾಲಿನ ವ್ಯಕ್ತಿ. ಈತ ವಚನ ಕಾರನಾಗಿ ಖ್ಯಾತಿ ಪಡೆದುದಕ್ಕಿಂತ ಹೆಚ್ಚಾಗಿ ಜಂಗಮ ದಾಸೋಹಿ ಕಾಯಕ ಯೋಗಿ ಎಂದು ಹೆಸರು ವಾಸಿಯಾಗಿದ್ದಾನೆ.

ಚಂದಯ್ಯನ ಕುರಿತಾದ ಹೆಚ್ಚಿನ ದಾಖಲೆಗಳು ಲಭಿಸಿಲ್ಲವಾದರೂ ಅವನ ಜೀವನದಲ್ಲಿ ನಡೆದ ಲಿಂಗದೇವ ಪ್ರಸಂಗ ಮಾತ್ರ ಎಲ್ಲಾ ಪುರಾಣಗಳಲ್ಲಿ ವ್ಯಕ್ತವಾಗಿದೆ.

ಬಹಶಃ ಕವಿಗಳಿಗೆ ಈ ಪ್ರಸಂಗ ಅಷ್ಟು ಇಷ್ಟವಾಗಿರುವುದರಿಂದ ಇದನ್ನು ಎತ್ತಿ ಪ್ರಸ್ತಾಪಿಸಿದ್ದಾರೆ.

ಈ ಪ್ರಸಂಗವು ಹಲಗೆ ದೇವರ ಶೂನ್ಯ ಸಂಪಾದನೆ, ಗುಮ್ಮಳಾಪೂರದ ಸಿದ್ದಲಿಂಗದೇವರ ಶೂನ್ಯ ಸಂಪಾದನೆ ಮುಂತಾದವುಗಳಲ್ಲಿ ವಿಸ್ತಾರವಾಗಿ ಬಂದರೆ ಸಿದ್ದನಂಜೇಶನ ಗುರುರಾಜ ಚರಿತ್ರೆ, ವೀರುಪಾಕ್ಷ ಪಂಡಿತನ ಚನ್ನಬಸವ ಪುರಾಣಗಳಲ್ಲಿ ಸೂಚ್ಯವಾಗಿ ಬಂದಿದೆ. "ಅದು ಚಂದಯ್ಯ ಜಂಗಮ ದಾಸೋಹದಲ್ಲಿಯೆ ಮಗ್ನನಾಗಿ ಲಿಂಗಪೂಜೆ ಮಾಡಿಕೊಳ್ಳದೆ ಇರಲು ಲಿಂಗದೇವ ಬೇಸರಗೊಂಡು ಒಂದು ದಿನ ಚಂದಯ್ಯ ಇದನ್ನು ನೋಡಿಯೂ ಹಾಗೇಯೆ ಹೋಗತೊಡಗಲು ಲಿಂಗವು ಪುರುಷ ರೂಪ ತಾಯಿ 'ಓ! ಚಂದಯ್ಯ ನನ್ನನ್ನು ಕರೆದುಕೋ' ಎನ್ನುತ ಬೆನ್ನು ಹತ್ತಿತು. ಆಗ ಚಂದಯ್ಯ, ಮೊದಲು ಹೊದದ್ದು ಏಕೆ? ಈಗೇಕೆ ಬರುವೆ? 'ಆಗದು ಎನ್ನಲು ಲಿಂಗದೇವ ಅಲ್ಲಿಯೇ ಇರುವ ಮಡಿವಾಳ ಮಾಚಿದೇವನಿಗೆ ನಡೆದದ್ದನ್ನು ತಿಳಿಸಿ (ಆಚ) ಆತ ಚಂದಯ್ಯನಿಗೆ, ಇರಲಿ ಕರೆದುಕೋ ಎನ್ನಲು ನುಲಿಯ ಕಾಯಕವನ್ನು ಮಾಡಿಕೊಂಡಿರುತ್ತೇನೆಂದು ನಿಮ್ಮ ಹೊಣೆ ಹೊತ್ತು ಬರುವುದಾದಲ್ಲಿ ಬರಲಿ' ಎಂದ ಇದಕ್ಕೊಪ್ಪಿ ಲಿಂಗದೇವ ಚಂದಯ್ಯನ ಬಳಿಯ ಕೆಲಸಕ್ಕೆ ನಿಂತ ಆತ ಮಾರಲು ಒಯ್ದನಲಿ ಒಂದು ದಿನ ಗಂಟು ದಿನ ಗಂಟು ಗಂಟಾಗಿದ್ದರಿಂದ ಎಲ್ಲೂ ಮಾರಲಿಲ್ಲ. ಅದನ್ನೋಯ್ದು ಬಸವಣ್ಣನಿಗೆ ತೋರಿಸಲು ಆತ ಅದನ್ನಿಟ್ಟುಕೊಂಡು ಸಾವಿರ ಹೊನ್ನು ಕೊಟ್ಟು ಕಳಿಸಿದ. ಲಿಂಗದೇವ ಅ ಹೊನ್ನು ತರಲು ಚಂದಯ್ಯ ಸಿಡಿಮಿಡಿ ಗೊಂಡು ಇದು ಕಾಯಕದ ರೀತಿಯಲ್ಲ. ಇದನ್ನು ತಿರುಗಿಕೊಟ್ಟು ಬಾ ಎನ್ನಲು ಲಿಂಗದೇವ ಹಾಗೇಯೆ ಮಾಡಿದ ಆಗ ಚಂದಯ್ಯಾ ಲಿಂಗವನ್ನು ಧರಿಸಿದ ಶೂನ್ಯ ಸಂಪಾದನೆಗಳಲ್ಲಿ ಈ ಕಥನ ಮುಂದುವರಿಕೆ ಇದ್ದ ಕಾಯಕ ದಾಸೋಹ ತತ್ವಗಳ ಮಂಥನ ಕ್ರಿಯೆ ನಡೆದಿದೆ.

ಪ್ರಸಂಗ ಅನುಭವ ಮಂಟಪದಲ್ಲಿ ಎಲ್ಲರ ಶರಣರ ಎದುರಿಗೆ ಚರ್ಚೆಗೊಳಗಾಗುವುದು. ಅಲ್ಲಿ ಶರಣರೆಲ್ಲರು ಸೇರಿ ಚಂದಯ್ಯನಿಗೆ ಜಂಗಮ ದಾಸೋಹಕ್ಕೆ ಎಷ್ಟು ಮಹತ್ವವಿದೆಯೋ ಲಿಂಗ ಪೂಜೆಗೂ ಅಷ್ಟೇ ಮಹತ್ವವಿದೆ

ಎನ್ನುತ್ತ ಅಂಗವುಳ್ಳ ನ್ನಕ್ಕ ಲಿಂಗಪೂಜೆ ಬೇಕು ಎನ್ನಲು ಆತ ಪುನಃ ಲಿಂಗಧಾರಿಯಾಗುವನು ಎಂದಿದೆ.

ಚಂದಯ್ಯನ ಕಾಲದ ಬಗೆಗೆ ಹಲವು ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದುಂಟು, ಕರ್ನಾಟಕ ಕವಿ ಚರಿತೆ ಸಂಪುಟ-೧ ರಲ್ಲಿ ಆರ್ ನರಸಿಂಹಾಚಾರ್ಯ ಅವರು ಈತನ ಕಾಲ ಕ್ರಿಶ೧೧೬೦ ಎಂದು ಹೇಳಿದ್ದಾರೆ. ಇದನ್ನು ಎಲ್ಲಾ ಲೇಖಕರು ಒಪ್ಪಿಕೊಂಡಿರುತ್ತಾರೆ. ಆದರೆ ಈತನ ತಂದೆ ತಾಯಿಗಳ ಬಗ್ಗೆ ಎಲ್ಲಿಯೂ ಉಲ್ಲೇಖವಿರುವುದು ಕಂಡು ಬಂದಿಲ್ಲ.

ಈತನ ಊರು ಬಿಜಾಪೂರದಿಂದ ಪೂರ್ವಕ್ಕೆ ೧೮ ಮೈಲು ದೂರದಲ್ಲಿರುವ ಶಿವಣಿ ಎಂದು ಡಾ.ಫ.ಗು ಹಳಕಟ್ಟಿಯವರು ಹೇಳಿದ್ದಾರೆ. ಇದನ್ನು ಇಲ್ಲಿಯ ಚಂದಯ್ಯನ ಚರಿತ್ರೆಯನ್ನು ಬರೆದ ಚನ್ನಪ್ಪ ಎರೆಸೀಮೆ.ಎಂ.ಎಸ್.ಲಠ್ಠೆ ಮುಂತಾದವರು ಮಾನ್ಯತೆ ನೀಡಿದ್ದಾರೆ.

ಚಂದಯ್ಯ ಕಲ್ಯಾಣಕ್ಕೆ ಬರುವುದಕ್ಕಿಂತ ಮೊದಲು ನುಲಿಹೊಸೆದು ಹಗ್ಗ ಕಣ್ಣಿ ತಯಾರಿಸಿ ಅದನ್ನು ಮಾರಿ ಬಂದ ಹಣದಿಂದ ಉಪಜೀವನ ಸಾಗಿಸುತ್ತಿದ್ದ ಶಿವ ಶರಣಿಯಿಂದ ಪೂರ್ವಕ್ಕೆ ಎರಡು ಮೈಲು ದೂರದಲ್ಲಿದ್ದ ರಾಮತೀರ್ಥಕ್ಕೆ ದಿನಾಲು ಮೆದೆಹುಲ್ಲು ತರಲು ಹೋಗುತ್ತಿದ್ದ. ಅಲ್ಲಿಗೆ ದೇವರ ಹಿಪ್ಪರಗಿಯಿಂದ ಮಡಿವಾಳ ಮಾಚಿದೇವನು ಬಟ್ಟೆ ತೋಳೆಯಲು ಬರುತ್ತಿದ್ದ ಇಬ್ಬರು ಅಲ್ಲಿ ಒಟ್ಟಿಗೆ ಸೇರುತ್ತಿದ್ದರು. ಮುಂದೆ ಕಲ್ಯಾಣಕ್ಕೆ ಇಬ್ಬರೂ ಜೋತೆಗೂಡಿಯೇ ಹೋಗಿರಬೇಕು. ಏಕೆಂದರೆ ಚಂದಯ್ಯನ ಪ್ರಸ್ತಾಪ ಮಾಚಿದೇವನೊಂದಿಗೆ ಬರುವುದು ವಿಶೇಷವಾಗಿದೆ. ಇಬ್ಬರು ಮೊದಲೇ ಪರಸ್ಪರ ಪರಿಚಿತರಾಗಿದ್ದಾರೆಂಬುದು ಇದರಿಂದ ವಿಧಿತವಾಗುವುದು.

---

೬) ಲೇಖಕರು: ಡಾ.ವ್ಹಿ.ಜಿ.ಪೂಜಾರ -ನುಲಿಯ ಚಂದಯ್ಯ ಪುಟ-೨

ಕಲ್ಯಾಣ ಕ್ರಾಂತಿಯ ಅನಂತರದ ಚಂದಯ್ಯನ ಬದುಕು ತುಂಬಾ ಕ್ರೀಯಾ ಶೀಲವಾದ್ದುದ್ದಾಗಿ ಕಂಡು ಬರುತ್ತದೆ. ಈತ ಕಲ್ಯಾಣ ಕ್ರಾಂತಿಯಾದೊಡನೆ ಉಳಿವಿಗೆ ಹೋಗುವನು. ಅಲ್ಲಿ ಅಕ್ಕನಾಗಮ್ಮನ ರಕ್ಷಣೆಯ ಭಾರ ಹೊತ್ತು ಮಲೆನಾಡನಲ್ಲೆಲ್ಲ ಸುತ್ತುತ್ತಾ ಎಣ್ಣೆ ಹೊಳೆಗೆ ಬರುವನು. ಅಲ್ಲಿ ಸಿದ್ದ ವೀರಸ್ವಾಮಿಗಳು ಅಕ್ಕ ನಾಗಮ್ಮನಿಗೆ ಮಠ ಕಟ್ಟಿಸಿಕೊಡುವರು. ಆಕೆ ಅಲ್ಲಯೇ ಉಳಿದು ಲಿಂಗೈಕ್ಯವಾದ ಮೇಲೆ ಚಂದಯ್ಯ ಅಲ್ಲಿಂದ ಶಿವಮೊಗ್ಗ ಜಿಲ್ಲೆಯ ತರೀಕೇರೆ ತಾಲ್ಲೂಕಿನ ನಂದಿ ಗ್ರಾಮಕ್ಕೆ ಬರುವನು. ಅಲ್ಲಿ ಕೆಲಕಾಲವಿದ್ದು ತನ್ನ ಜೋಳಿಗೆ ಚೆತ್ತಗಳನ್ನು ಅಲ್ಲಿಯೇ ಬಿಟ್ಟು ಕಲ್ಲತ್ತರಗಿಗೆ ಹೋಗುವನು. ಹೀಗೆ ಚಂದಯ್ಯ ಮಲೆನಾಡಿನಲ್ಲಿ ಸುತ್ತುತ್ತ ವೀರಶೈವ ಧರ್ಮ ಪ್ರಚಾರ ಕಾರ್ಯ ಕೈಗೊಂಡನು. ಅಳಿದು ಹೋಗಬಹುದಾಗಿದ್ದ ಬಸವಾದಿ ಶರಣರ ವಚನಗಳನ್ನು ಅಲ್ಲಿನ ಜನತೆಗೆ ಪರಿಚಯ ಮಾಡಿಕೊಟ್ಟನು.

ಹೀಗೆ ಊರುರು ಸುತ್ತುತ್ತ ಕೊನೆಗೆ ಚಂದಯ್ಯ ಆರ್ ನುಲೇನೂರಿನಲ್ಲಿ ಲಿಂಗೈಕ್ಯನಾದನೆಂದು ಅಪಾರವಾದ ಭಕ್ತಿ, ತಿಳಿದು ಬರುತ್ತದೆ ಜನಪದರೂ ಚಂದಯ್ಯನ ಬಗ್ಗೆ ಗೌರವವನ್ನು ಇಟ್ಟಿಕೊಂಡಿರುವರು. ಆತನನ್ನು ದೇವರ ಸ್ವರೂಪವೇಂದು ಅರಾಧಿಸುತ್ತಿರುವುದಕ್ಕೆ ಇಂದು ಕರ್ನಾಟಕದಾದ್ಯಂತ ಚಂದಯ್ಯನ ಗುಡಿ ಹಾಗೂ ಆತನ ಹೆಸರಿನಲ್ಲಿ ನಡೆಯುವ ಜಾತ್ರೆ ಉತ್ಸವಗಳೇ ಸಾಕ್ಷಿಯಾಗಿವೆ. ಆತ ಕೈಕೊಂಡ ಕಾಯಕ ಜನಮನದಲ್ಲಿ ಇಂದಿಗೂ ಹಚ್ಚ ಹಸುರಾಗಿ ಉಳಿದಿದೆ. "ನುಲಿಯ ಚಂದಯ್ಯನ ಕಥೆ ಪದ್ಯ ಎಂಬ ಶಿರ್ಷಿಕೆಯಲ್ಲಿ ೨೫ ಪದ್ಯಗಳನ್ನೊಳಗೊಂಡ ಚೆನ್ನವೃಷಭನೆಂಬ ಕವಿಯಿಂದ ರಚನೆಗೊಂಡ ಹಸ್ತ ಪ್ರತಿಯೊಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಆರ್. ನುಲೇನೂರ ಗ್ರಾಮದವರಾದ ಬಸವರಾಜಪ್ಪ ಎಂಬ ಶಿಕ್ಷಕರಿಂದ ತಮಗೆ ದೊರೆತುದ್ದಾಗಿ ಲೇಖಕರಿಂದ ತಿಳಿದು ಬಂದಿದೆ"

೧೨ನೇ ಶತಮಾನದ ಬಸವಾದಿ ಶರಣರ ಸಮಕಾಲಿನನಾಗಿ ಬಾಳಿ ಬೆಳಗಿದ ಒಬ್ಬ ಶರಣರ ನುಲಿಯ ಚಂದಯ್ಯ ಈತ ಜಂಗಮ ದಾಸೋಹವನ್ನು ಅತ್ಯಂತ ನಿಷ್ಠಯಿಂದ ನಡೆಸಿಕೊಂಡು ಬಂದ ಕಾಯಕಯೋಗಿ ಧೀರ ಕಾಯಕದ ಕೈಗನ್ನಡಿ

ಎಂಬ ನಾಮಾಂಕಿತಗಳನ್ನು ತನ್ನ ಸಮಕಾಲಿನ ಶರಣರಿಂದ ಪಡೆದುಕೊಂಡವನಾಗಿದ್ದನು.

ಈತ ವಿಶೇಷವಾಗಿ ತನ್ನನ್ನು ಶರಣ ಗಣದ ಮಧ್ಯೆ "ಜಂಗಮ ಪ್ರೇಮಿ" ಎಂದೇ ಗುರುತಿಸಿ ಕೊಂಡಂಥವ.

"ಜಂಗಮ ದಾಸೋಹದ ಶ್ರೇಷ್ಠತೆಯನ್ನು ಕೊಂಡಾಡಿದ ಚಂದಯ್ಯನನ್ನು ಕಂಡು ಪ್ರಭು ದೇವರು" ಜಂಗಮ ದಾಸೋಹ ಎಷ್ಟೇ ಶ್ರೇಷ್ಠವಾದರೂ ಲಿಂಗ ಪೂಜೆ ಬಿಡಬಾರದು" ಎನ್ನುವನು.

"ಗುರುಸೇವೆ ಮಾಡಿದರೆ ಇಹದಲ್ಲಿ ಸುಖ

ಲಿಂಗಪೂಜೆ ಮಾಡಿದರೆ ಪರದಲ್ಲಿ ಸುಖ

ಜಂಗಮ ಸೇವೆ ಮಾಡಿದರೆ ಇಹಪರವೆಂದುವದು ನಾಸ್ತಿ"

ಜಂಗಮ ಸೇವೆ ಮಾಡಿದರೆ ಇಹಪರ ಎರಡೂ ಇಲ್ಲವೆಂದು ಹೇಳುವಲ್ಲಿ ಚಂದಯ್ಯ ಗುರುಲಿಂಗಕ್ಕಿಂತ ಜಂಗಮ ದಾಸೋಹವು ಘನವಾದದ್ದು ಎಂದು ಹೇಳಿದ್ದನ್ನು ಗಮನಿಸಬಹುದು.

ಇಂಥ ಜಂಗಮ ಪ್ರೇಮಿಯಾಗಿದ್ದ ಕಾಯಕ ಜೀವಿಯಾಗಿದ್ದ ಚಂದಯ್ಯನ ಉಲ್ಲೇಕಗಳು ಹೆಚ್ಚಾಗಿ ಸಿಗದೇ ಇರುವುದು ದುರದೃಷ್ಟಕರ.

ಇಂದಿಗೂ ಸಹಿತ ಬಸವ ಕಲ್ಯಾಣದಲ್ಲಿ ನುಲಿಯ ಚಂದಯ್ಯನ ಗವಿ ಹಾಗೂ ಆತನ ವಿಗ್ರಹಗಳು ಮತ್ತು ಚಂದಯ್ಯನ ಬಾವಿ ಇವೇಲ್ಲ ನಮಗೆ ಕಾಣಸಿಗುತ್ತವೆ. ಅಲ್ಲವೇ ತ್ರಿಪುರಾಂತ ಕೆರೆಯ ಪಕ್ಕದಲ್ಲಿ ಮೊದಲು ಒಂದು ಕೆರೆ ಇದ್ದುದ್ದು ಅದಕ್ಕೆ ಜನ ಗಂಜಿಕೆರೆ ಎನ್ನುವರು. ಅದನ್ನು ಕುರಿತು ಜನ ಹೀಗೆ ಹೇಳುತ್ತಾರೆ ಚಂದಯ್ಯ ಮೊದಲು ಈ ಜಾಗದಲ್ಲಿ ಗಂಜಿ ಮಾಡಿಕೊಳ್ಳುತ್ತಿದ್ದ ಒಂದು ದಿನ ಒಲೆ ಮೇಲೆ ಗಂಜಿ ಮಾಡಲಿಟ್ಟು ಹೊರಗೆಲ್ಲೋ ಹೋಗಿದ್ದನಂತೆ ಆತ ತಿರುಗಿ ಎಬರುವಷ್ಟರಲ್ಲಿ ಅದು ಉಕ್ಕಿ ಹೊರಚೆಲ್ಲಿ ಇಡೀ ಬಯಲು ಪ್ರದೇಶವನ್ನೆಲ್ಲ ಆವರಿಸಿ ಬಿಟ್ಟಿತಂತೆ. ಅಂದಿನಿಂದ ಆ ಪ್ರದೇಶಕ್ಕೆ ಜನ ಚಂದಯ್ಯನ ಗಂಜಿಕೆರೆ ಎನ್ನತೊಡಗಿದರು. ಈಗಲೂ ಈ ಸ್ಥಳಕ್ಕೆ "ಚಂದಯ್ಯನ ಗಂಜಿಕೆರೆ" ಎಂದು ಕರೆಯಲಾಗುತ್ತದೆ.

ಒಟ್ಟಿನಲ್ಲಿ ನುಲಿಯ ಚಂದಯ್ಯ ಎಂಬ ಪೂಜಾರರ ಸಂಶೋಧನಾ ಕೃತಿಯ ಶರಣರ ಬದುಕಿನ ಹೊಸ ಹೊಸ ತಿರುವುಗಳನ್ನು ಎತ್ತಿ ಹಾಕಲು ಸಹಾಯಕಾರಿಯಾಗಿದೆ.

ಭೂಗರ್ಭದಲ್ಲಿ ಮುಚ್ಚಿ ಹೋಗುತ್ತಲಿರುವ ಎಷ್ಟೋ ಶರಣ-ಶರಣಿಯರ ಜೀವನ, ಅವರ ಕಾಯಕ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಜನತೆಯ ಎದುರಿಗಿಡುವ ಸಂಶೋಧಿಸಿ ಸರಳೀಕರಿಸಿ ಮಾಡುವ ಕೆಲಸವನ್ನು ಎಷ್ಟೋ ಲೇಖಕರು ಮಾಡುತ್ತಲಿದ್ದಾರೆ. ಅವರಲ್ಲಿ ಡಾ. ಪೂಜಾರರು ಒಬ್ಬರೂ, ಇವರು ಇಂತಹ ಅನೇಕ ಪುರಾತನ ಚರಿತ್ರೆಗಳನ್ನು ಕೃತಿ ರೂಪದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

೨. ಸಂಪಾದನಾ ಮತ್ತು ಚರಿತ್ರಾತ್ಮಕ ಕೃತಿಗಳು:

ಡಾ.ವ್ಹಿ.ಜಿ.ಪೂಜಾರರು ಸಂಪಾದನಾ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯೂ ಅಪಾರವಾದುದಾಗಿದೆ. ಪೂಜಾರರು ಸುಮಾರು ಹನ್ನೊಂದು ಕೃತಿಗಳನ್ನು ಸಂಪಾದಿಸಿದ್ದಾರೆ. ಎಲ್ಲಾ ಕ್ಷೇತ್ರದಲ್ಲಿಯೂ ಅವರ ಸಾಹಿತ್ಯ ಸೇವೆ ಪರಿಪೂರ್ಣವಾಗಿ ಮೂಡಿ ಬಂದಿದೆ.

- ಕವಿವಾಣಿಯಲ್ಲಿ ಶ್ರೀ ಷಣ್ಮುಖ ಶಿವಯೋಗಿ
- ಶ್ರೀ ಸದ್ಗುರು ಶರಣ ಶಿವಲಿಂಗೇಶ್ವರ ಪುರಾಣ.
- ಸಂತುಷ್ಟಿ ಡಾ.ಎಂ.ಎಸ್.ಲಠ್ಠೆ ಅಭಿನಂದನಾ ಗ್ರಂಥ.
- ಶೋಧ ಸಮಿಕ್ಷೆ.
- ಕಾವ್ಯ ಮಂದಾರ ಭಾಗ-೨ ಪಠ್ಯ ಪುಸ್ತಕ
- ರಾಮಪೂರ ಬಕ್ಕಪ್ಪಯ್ಯನ ಸ್ವರವಚನ ತ್ರಿವಿಧಿ
- ಸಂಗವಿಭು.
- ಶಬ್ದಮಣಿದರ್ಪಣ ಸಂಗ್ರಹ-ಪಠ್ಯ ಪುಸ್ತಕ
- ಕಥಾ ಗಂಗಾ-೨
- ಆಯ್ದ ಸ್ವರ ವಚನಗಳು

- ಸಂಶೋಧನ ಲೇಖನಗಳು
- ನಿಷ್ಠೇಯ ಕಡಲಪ್ಪನವರು ವೀರಪ್ಪನವರು
- ತೋಂಟದ ಸಿದ್ದಲಿಂಗ ಶಿವಯೋಗಿ.
- ಷಡಕ್ಷರ ದೇವ
- ಶ್ರೀ ವೀರೇಂದ್ರ ಪಾಟೀಲ
- ಶ್ರೀ ಕಡಿದಾಳ ಮಂಜಪ್ಪ
- ಜೇಡರ ದಾಸಿಮಯ್ಯ
- ಷಣ್ಮುಖ ಶಿವಯೋಗಿ
- ಹಡಪದ ಅಪಣ್ಣ

ಪ್ರಸ್ತುತ ಇಲ್ಲಿ ಅವರ ಸಂಪಾದನಾ ಕೃತಿ ಸಂಶೋಧನ ಲೇಖನಗಳು ಈ ಕೃತಿ ಗುಲಬರ್ಗಾ ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಪ್ರಸಾರಾಂಗದ ಬೆಳ್ಳಿ ಬೆಳಕು ಮಾಲೆಯಲ್ಲಿ ಪ್ರಕಟವಾದ ಕೃತಿ ಇಲ್ಲಿ ಈ ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪ್ರಸ್ತುತ ಕೃತಿಯಲ್ಲಿ ಬೇರೆಬೇರೆ ಸಂಶೋಧಕರ ಒಟ್ಟು ೨೮ ಲೇಖನಗಳಿವೆ. ಇವುಗಳೆಲ್ಲ ಅವರವರ ಸಂಶೋಧನೆಯ ಫಲಗಳಾಗಿವೆ. ಸಂಶೋಧನೆ ಎಂದರೆ ಸತ್ಯದ ಮಾರ್ಗದಲ್ಲಿ ಯೋಚನೆಗೆ ತೊಡಗಿಸುವಂತಹುದು. ಯೋಚನೆ ಮಾಡುತ್ತಾ ಮುಂದೆ ಮುಂದೆ ಸಾಗಲು ಇದು ಪ್ರೇರಣೆಯನ್ನು ಒದಗಿಸುತ್ತದೆ ಯಾವ ಭಯವೂ ಇಲ್ಲದೆ ಸತ್ಯವನ್ನು ಹೊರಗೆ ತರುವ ಕೆಲಸ ಸಂಶೋಧನೆಯಿಂದ ಸಾಧ್ಯವಾದುದಾಗಿದು. ಸಂಶೋಧನೆ ಒಂದು ಜಾಗದಲ್ಲಿ ನಿಂತು ಬಿಡುವದಲ್ಲ. ಇದು ನಿರಂತರವಾಗಿ ವಿದ್ವಾಂಸರ ಬೌದ್ಧಿಕ ಕಾರ್ಯದಲ್ಲಿ ಮುನ್ನಡೆಯುತ್ತಿರುತ್ತದೆ.

---

೭) ಡಾ.ವ್ಹಿ.ಜಿ.ಪೂಜಾರ –ನುಲಿಯ ಚಂದಯ್ಯ ಪುಟ–೪೦

ಪ್ರಸ್ತುತ ಕೃತಿಯಲ್ಲಿ ಡಾ.ವ್ಹಿ.ಜಿ ಪೂಜಾರರು ಸುಮಾರು ೨೮ ಸಂಶೋಧನಾ ಲೇಖನಗಳನ್ನು ಸಂಪಾದಿಸಿದ್ದಾರೆ. ಪ್ರಸ್ತಾವನೆಯಲ್ಲಿ ಪೂಜಾರರು ಹೇಳಿರುವಂತೆ ಕನ್ನಡ ಸಾಹಿತ್ಯ ಸಂಶೋಧನೆಯ ಕ್ಷೇತ್ರ ಅಷ್ಟೇನೂ ವಿಶಾಲವಾದುದಾಗಿರದಿದ್ದರೂ. ಈ ವರೆಗೆ ನಡೆದ ಸಂಶೋಧನೆ ತೃಪ್ತಿಕರವಾಗಿದೆ. ಅದು ಸ್ವಾತಂತ್ರ್ಯದ ನಂತರ ತಕ್ಕ ಮಟ್ಟಿಗೆ ಈ ಕ್ಷೇತ್ರದಲ್ಲಿ ಕೆಲಸ ನಡೆದಿದೆ. ಮೈಸೂರು ಧಾರವಾಡ ಭಾಗದಲ್ಲಿ ಕನ್ನಡ ಸಾಕಷ್ಟು ಸಂಶೋಧನೆ ನಡೆದಿದೆ. ಆದರೆ ಹೈದ್ರಬಾದ ಕರ್ನಾಟಕ ಭಾಗಗಳಲ್ಲಿ ಆ ಪ್ರಮಾಣದಲ್ಲಿ ನಡೆಯದ್ದಿದ್ದರೂ ತಕ್ಕ ಮಟ್ಟಿಗೆ ನಡೆದುದು ಸಮಾಧಾನದ ಸಂಗತಿಯಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಸಾಹಿತ್ಯ ಸಂಶೋಧನೆ ತ್ರೀವ್ರತರವಾಗಿ ನಡೆದಿದೆ. ಅದಕ್ಕಿಂತ ಮೊದಲು ಇಲ್ಲಿ ಸಿದ್ದಯ್ಯ ಪುರಾಣಿಕ ಶಾಂತರಸ ಪಾಂಡುರಂಗರಾವ ದೇಸಾಯಿ ಡಿ.ಕೆ ಭೀಮಸೇನರಾವ್ ಸೀತಾ ರಾಮ ಜಾಗೀರದಾರ ಮುಂತಾದ ವಿದ್ಯಾಂಸರು ಕನ್ನಡ ಸಾಹಿತ್ಯ ಸಂಸ್ಕೃತಿ ಕುರಿತಾಗಿ ಸಂಶೋಧನಾ ಲೇಖನಗಳನ್ನು ಗ್ರಂಥಗಳನ್ನು ಪ್ರಕಟಿಸಿದ್ದುಂಟು. ಆದರೆ ಜೈನ ಕಾವ್ಯದ ಶರಣರ ವಚನದ ದಾಸರ ಹಾಡಿನ ಬೀಡಾದ ಈ ನಾಡು ಸಂಶೋಧನೆಗೆ ಇನ್ನೂ ಕನ್ನೆ ನೆಲವಾಗಿಯೇ ಉಳಿದಿದೆ.

ಕನ್ನಡ ಸಾಹಿತ್ಯದ ಪ್ರಥಮ ಉಪಲಬ್ಧ ಕೃತಿ ಕವಿರಾಜ ಮಾರ್ಗ ಕೃತಿ ರೂಪಗೊಂಡದು ಇಲ್ಲಿಯೇ. ಬಸವಕಲ್ಯಾಣದಲ್ಲಿ ಶಿವಶರಣರು ನೆಲೆನಿಂತು ವಚನಗಳನ್ನು ರಚಿಸಿದ್ದು ವಿಶ್ವವಿಖ್ಯಾತವಾಗಿದೆ. ಅದರಂತೆಯೇ ರಾಯಚೂರು ಜಿಲ್ಲೆ ಹರಿದಾಸರ ನೆಲೆವೀಡಾಗಿದೆ. ಇಂಥ ಸಂಪದ್ಭರಿತವಾದ ಇತಿಹಾಸವನ್ನು ಹೊಂದಿದ ಈ ನಾಡಿನಲ್ಲಿ ಕೆಲಕಾಲ ಮುಸ್ಲಿಂರ ಆಡಳಿತದಿಂದಾಗಿ ಕನ್ನಡದ ಕೆಲಸ ಅಷ್ಟಾಗಿ ನಡೆಯಲಿಲ್ಲ. ನಿಜಾಂನ ಆಡಳಿತಾವಧಿಯಲ್ಲಿ ಇಲ್ಲಿ ಉರ್ದು ಆಡಳಿತ ಭಾಷೆಯಾಗಿತ್ತು. ಸ್ವಾಂತಂತ್ರ್ಯದ ನಂತರ ಇಲ್ಲಿ ಕ್ರಮೇಣ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಕುರಿತಾದ ಸಂಶೋಧನಾಧ್ಯಯನ ಪ್ರಾರಂಭಗೊಂಡಿತು.

ಈ ಪ್ರದೇಶದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಸಾಹಿತ್ಯ ಸಂಶೋಧನೆ ನಿರಂತರವಾಗಿ ಸಾಗಿ ಬಂದಿದೆ ಕನ್ನಡ ಸಾಹಿತ್ಯ ಭಾಷೆ ಜಾನಪದ ಶಾಸನ ಇತಿಹಾಸ ಕುರಿತಾಗಿ ಅನೇಕ ವಿದ್ವಂಸರು ಸಂಶೋಧಕರು ಸಂಶೋಧನ ಲೇಖನಗಳನ್ನು

ಪ್ರಕಟಿಸುತ್ತ ಬಂದುದುಂಟು. ಅದೇ ಸಾಲಿನಲ್ಲಿಯೇ ಪ್ರಸ್ತುತ ಕೃತಿಯಲ್ಲಿ ಕೆಲಮಹತ್ವದ ಮತ್ತು ಪ್ರತಿನಿಧಿಕರೆನ್ನಿಸಿದ ೨೮ ಸಂಶೋಧಕರ ಲೇಖನಗಳನ್ನೆಲ್ಲ ಡಾ.ಪೂಜಾರರು ಸಂಗ್ರಹಿಸಿ ಸಂಕಲಿಸಿದ್ದಾರೆ. ಅವುಗಳಲ್ಲಿ ಸೀತಾರಾಮ ಜಾಗೀರದಾರ ಅವರ ಸಂಶೋಧನ ಲೇಖನವು ಪ್ರಮುಖವಾದದ್ದಾಗಿದೆ.

ಕಲ್ಯಾಣ ಚಾಲುಕ್ಯರ ಚರಿತ್ರೆಯ ಮೇಲೆ ಹೊಸ ಬೆಳಕು:

ಈ ಸಂಶೋಧನ ಲೇಖನದಲ್ಲಿ ಕರ್ನಾಟಕ ಇತಿಹಾಸದಲ್ಲಿ ಕ್ರಿ.ಶ ೧೦೩೫-೧೧೨೫/೨೬ರ ವರೆಗೆ ಸಾಮ್ರಾಟನಾಗಿ ಮೆರೆದ ೬ನೇಯ ವಿಕ್ರಮಾದಿತ್ಯನ ಕಾಲ ಪ್ರಪಂಚದಲ್ಲಿ ಭೂತ್, ಭವಿಷ್ಯತ್ ಹಾಗೂ ವರ್ತಮಾನ ಕಾಲದಲ್ಲಿ ಇಂದಿಗೂ ಮತ್ತೆ ಎಂದೆಂದಿಗೂ ಪುನರಾವರ್ತನೆಗೊಳ್ಳಲು ಸಾಧ್ಯವಿಲ್ಲ. ವಿಜ್ಞಾನೇಶ್ವರನ ಮಾತಿನಲ್ಲಿ ಹೇಳುವುದಾದರೆ ನಾಸೀದ್ ಆಸ್ತಿ ಭವಿಷ್ಯತ್ ಕ್ಷಿತಿತಲೇ, ಉತ್ತರದಲ್ಲಿ ನೇಪಾಲ ದಕ್ಷಿಣದಲ್ಲಿ ಆ ಶ್ರೀಲಂಕಾದ ಭೂಪಾಲದವರೆಗೆ ೬ನೇಯ ವಿಕ್ರಮಾದಿತ್ಯನ ವಾದಗಳಿಗೆ ರಾಜರಂಕರೆಲ್ಲರೂ ನೇಮಿಸಿದರು. ನತಮಸ್ತಕರಾದರು. ಅವರ ಕಿರೀಟಗಳ್ಳಲ್ಲಿನ ಹರಳುಗಳು ೬ನೇಯ ವಿಕ್ರಮಾದಿತ್ಯನ ಚರಣಗಳ ಮೇಲೆ ಬೆಳಕನ್ನು ಚೆಲ್ಲಿದವು. ಆತನ ಸಾಮ್ರಾಜ್ಯದಲ್ಲಿ ಲಕ್ಷದ್ವೀಪವೂ ಇದ್ದಿತು. ಲಕ್ಕದಿವ ಪ್ರಸ್ತಾಪ ಅನೇಕ ಶಾಸನಗಳಲ್ಲಿ ಬಂದಿದೆ. ಆ ಲಕ್ಕದಿವಿ ಮೇಲೆ ಅಧಿಕಾರ ಸ್ಥಾಪಿಸಿದವರು ಯಾರು ಎಂಬುದಾಗಲಿ ಲಕ್ಕದಿವಿಗಳನ್ನಾಗಲಿ ನಮ್ಮ ಇತಿಹಾಸಕಾರರಾಗಲಿ, ಪಿ.ಎಚ್.ಡಿ ಪ್ರಬಂಧಕರರಾಗಲಿ ಗುರುತಿಸಿಯೇ ಇಲ್ಲ.

"ಕಲ್ಬುರ್ಗಿ ಜಿಲ್ಲೆಯಲ್ಲಿನ ಜೇವರ್ಗಿ ತಾಲ್ಲೂಕಿನಲ್ಲಿರುವ ಎರಡು ಊರುಗಳು ಅಂದೇಲಿ ಹಾಗೂ ಇಜೇರಿ ಈ ದಿಶೆಯಲ್ಲಿ ಮಹತ್ವದ್ದಾಗಿವೆ. ಇಲ್ಲಿ ದೊರೆತ ಶಿಲಾ ಶಾಸನಗಳು ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಇವು ವಿಕ್ರಮಾದಿತ್ಯನಿಗೆ ಸಾಹಿತ್ಯ ವಿಶಾರದನಾದ ಮಗನೊಬ್ಬನು ಇದ್ದನೆಂದು ತಿಳಿಸುತ್ತವೆ. ಈ ಸತ್ಯಸಂಗತಿ ಎಂದರೆ ಚಾಲುಕ್ಯರ ಈ ಚರಿತ್ರೆಯು ಇಂತಿದೆ.

---

೮) ಡಾ.ವ್ಹಿ.ಜಿ.ಪೂಜಾರ ಸಂಶೋಧನಾ ಲೇಖನಗಳು ಪುಟ-೬

೧) ಅಹವಮಲ್ಲ ನಿ.ಪ.(೦) ನಿಜ

ಬಾಹಾ ಬಳ ವಿಕ್ರಮಂ ಪ್ರಜಾಪತಿ ರಿಶಿಶಂ

ದೋಹಚರಿತ್ರಂ ನೂತ್ನ

ಶ್ರೀ ಹರ್ಷಲ ನಿಲ್ಕೆ ಲಕ್ಕೆ ದೀವಳಿಗೆವರಂ ॥

ಈ ಶಾಸನವು ಜೆವರ್ಗಿ ತಾಲೂಕಿನ ಆಂದೇಲಿ । ಆಂದೋಲಾ ಗ್ರಾಮದಲ್ಲಿ ದೊರಕಿದೆ. ಇದನ್ನು ಚಾ.ವಿ ವರ್ಷ ೪೦ ಮನ್ಮಥ, ಬಾದ್ರಪದ , ಬ ೧೧ ಗುರುವಾರ (ಕ್ರಿ.ಶ ೧೧೧೫ ಸೆಪ್ಟೆಂಬರ್ ೧೯) ದಂದು ಬರೆಯಲಾಗಿದೆ. "ಧರ್ಮಾತ್ಮಜಂ" ಎಂದು ಕರೆಯಿಸಿಕೊಂಡ ಆತನ ಅನೆದಲೆ (ಆಂದೇಲಿ) (ಭೀಮಾನದಿ ತೀರದಲ್ಲಿ ಆನೆ ಮುಳುಗುವಂತಹ ಮಡು) ಗ್ರಾಮದಲ್ಲಿ ಮಲ್ಲಿನಾಥ ದಂಡನಾಥನ ಕೋರಿಕೆಯಂತೆ ಚೆನ್ನಿ ಮಾಧವನ ದೇವಾಲಯವನ್ನು ಕಟ್ಟಿಸಿ ಅದರಲ್ಲಿ ದೇವತಾ ಕಾರ್ಯಗಳು ನಡೆಯುಉದಕ್ಕೆಂದು ದಾನದತ್ತಿಗಳನ್ನಿತ್ತನು. ಈ ಅಹಮಮಲ್ಲಿ ನರಿಯಂಬೋಳೆ ಊರು ಈಗಿನ ನರಬೋಳಿ ARIE-೧೯೯೦-೯೧,B ೪೩.

೨) ಈ ಅಹವಮಲ್ಲ ಇಜೇರಿ ಗ್ರಾಮ (ವಿಜಯ ಭೇರಿ ಗ್ರಾಮ) ದಲ್ಲಿ ಶಂಕರನಾರಾಯಣ ದೇವಾಲಯಕ್ಕೆ ಚಾ.ವಿ.ವರ್ಷ.ಬಿ.ಪ್ರಭವ, ವೈಶಾಖ ಶು.೩.ಗುರುವಾರ(ಕ್ರಿ.ಶ. ೧೦೮೭ ಎಪ್ರೀಲ್ ೮) ತಿಥಿ ನಕ್ಷತ್ರಗಳಲ್ಲಿ (ಅಕ್ಷಯ ತೃತೀಯ) ಮಲ್ಲಿಕಾರ್ಜುನ ಪಂಡಿತರ ಪಾದವನ್ನು ತೊಳೆದು ಧಾರಾಪೂರ್ವಕವಾಗಿ ದತ್ತಿ ಬಿಟ್ಟನು.

೩) ARIE-೧೯೯೧-೯೨,B ೧, ಅಹಮಮಲ್ಲಿ ಪಾರ್ಮನಡಿಯು ದಾನದತ್ತಿಯನ್ನಿತ್ತುದನ್ನು ದಾಖಲಿಸಿದೆ. ಇದರ ಕಾಲವು ಕ್ರಿ.ಶ.೧೦೮೪.

೪) ಶಿವಮೊಗ್ಗ ಜಿಲ್ಲೆಯಲ್ಲಿನ ಶಿಕಾರಿಪುರ ತಾಲ್ಲೂಕಿನಲ್ಲಿ ದೋರೆತ ಕಳಚೂರಿ ಭುಜಬಳ ಚಕ್ರವರ್ತಿ ಬಿಜ್ಜಳಾದೇವರ ಸನ ಶಾಸನಗಳಲ್ಲಿ 'ಲಕ್ಕದಿನಿ' ಪ್ರಸ್ತಾಪವಿದೆ.

ಈ ಲೇಖನದಲ್ಲಿರುವ ಈ ಎಲ್ಲಾ ಅಂಶಗಳನ್ನು ದೃಷ್ಟಿಸಿದಾಗ ಕಲ್ಯಾಣ ಚಾಳುಕ್ಯರ ವಿಕ್ರಮಾದಿತ್ಯನ ಅನೇಕ ಹೊಸ ವಿಚಾರಗಳು ಇಲ್ಲಿ ವಿಶ್ಲೇಷಿಸಿರುವುದು ಕಂಡು ಬರುತ್ತದೆ. ಈ ಲೇಖನ ಖಂಡಿತವಾಗಿಯೂ ಕಲ್ಯಾಣ ಚಾಲುಕ್ಯರ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುವುದು ಕಂಡು ಬರುತ್ತದೆ.

ಡಾ.ಬಿ.ವ್ಹಿ ಶಿರೂರರ ಬಿಜ್ಜಳನನ್ನು ಕೆಂದ ಮಲ್ಲೆ ಬೊಮ್ಮಯ್ಯ ಈ ಲೇಖನದಲ್ಲಿ ಬಿಜ್ಜಳವನ್ನು ಕೊಂದ ಜಗದೇವ ಮಲ್ಲೆಬೊಮ್ಮಯ್ಯರಲ್ಲಿ ಮಲ್ಲೆ ಬೊಮ್ಮಯ್ಯನ ಚರಿತ್ರೆ ಈ ವರೆಗೆ ಸ್ಪಷ್ಟವಾಗಿಲ್ಲದಿರುವುದು ಮತ್ತು ವಿವಿಧ ವಿದ್ವಾಂಸರು ಮಂಡಿಸಿದ ವಾದಗಳನ್ನು ವಿಶ್ಲೇಷಸಲಾಗಿದೆ.

ಡಾ.ವಿ.ಶಿವಾನಂದರ ಹೈದ್ರಾಬಾದ ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು ಲೇಖನದಲ್ಲಿ ಚಾರಿತ್ರಿಕ ದೃಷ್ಟಿಯಿಂದ ಹೈದ್ರಾಬಾದ ಕರ್ನಾಟಕ ಪ್ರದೇಶವು ಅನೇಕ ರಾಜ್ಯ ಸಾಮ್ರಾಜ್ಯಗಳ ಸಾಮಂತ ಮಹಾಸಾಮಂತಾಧಿ ಪತಿಗಳ ಆಡಳಿತ ನೇಲವಾಗಿದೆ. ಇಲ್ಲಿ ರಾಜ್ಯಾಡಳಿತದ ಪ್ರಾಚೀನ ಘಟಕಗಳಲ್ಲಿ ಕಲಬುರ್ಗಿ ಜಿಲ್ಲೆ, ರಾಯಚೂರು ಜಿಲ್ಲೆ, ಬೀದರ ಜಿಲ್ಲೆ, ಬಳ್ಳಾರಿ ಜಿಲ್ಲೆಗಳಲ್ಲಿನ ವಿವರಗಳಿವೆ. ಮತ್ತು ಅಲ್ಲಿನ ಆಡಳಿತ ಪದ್ಧತಿ ಆರ್ಥಿಕ ಸಂಪನ್ಮೂಲಗಳು ವಿವಿಧ ಮತ-ಧರ್ಮ, ದೇವಾಲಯ, ಪರ್ವ ಉತ್ಸವ ಆಚರಣೆಗಳು, ಶಾಸನೋಕ್ತ ಪ್ರಸಿದ್ಧ ದೇವಾಲಯ ಪ್ರಾಚೀನ ವಿದ್ಯಾಕೇಂದ್ರಗಳು, ಶಾಸನ ಕವಿಗಳು ಶಾಸನಗಳ ಭಾಷೆ, ಶೈಲಿ, ಸ್ಥಳನಾಮ ನಿಷ್ಪತ್ತಿಯಲ್ಲಿ ಶಾಸಗಳ ಮಹತ್ವ ಈ ಎಲ್ಲಾ ವಿಷಯಗಳ ಕುರಿತಾದ ಸಂಶೋಧನಾ ವಿಶ್ಲೇಷಣೆ ಕಾಣ ಸಿಗುತ್ತದೆ.

---

೯) ಡಾ.ವ್ಹಿ.ಜಿ.ಪೂಜಾರ - ಸಂಶೋಧನಾ ಲೇಖನಗಳು. ಪುಟ-೯

ಪ್ರೋ. ಲಕ್ಷ್ಮಣ ತೇಲಗಾವಿಯವರ ಕೃಷ್ಣ ದೇವರಾಯನ ಇನ್ನೊಂದು ಹೋಸ ಶಾಸನ ಬರಹದಲ್ಲಿ ಈ ವರೆಗೆ ಬೆಳಕಿಗೆ ಬಂದಿರುವ ಕೃಷ್ಣದೇವರಾಯನ (೧೫೧೦-೧೫೨೯) ಕಾಲದ ಹಲವಾರು ಶಾಸನಗಳ ಸಾಲಿನಲ್ಲಿ ಈಗ ದೊರೆತಿರುವ ನೂತನ ಶಾಸನ "ಹೊಸ ಪೇಟೆಯಿಂದ ತುಂಗಭದ್ರಾ ಆಣೆಕಟ್ಟು ಹೋಗುವ ಮುಖ್ಯ ಮಾರ್ಗ (ಕೊಪ್ಪಳ ಮಾರ್ಗ)ದಲ್ಲಿರುವ ಇಂದಿರಾನಗರ ಬಡಾವಣೆಯಲ್ಲಿ ಪ್ರಸ್ತುತ ಶಾಸನದ ಕಾಲ ಕ್ರಿ.ಶ೧೫೨೧ ಎಂದು ಪ್ರೋ. ತೆಲಗಾವಿಯವರು ಹೇಳುತ್ತಾರೆ. ಅಲ್ಲದೆ ಬೋಳು ತಲೆಯಾಕಾರದಲ್ಲಿ ವಿಶೇಷವಾಗಿ ಸಿದ್ಧಪಡಿಸಲಾದ ಹಾಗೂ ನಯಗೊಳಿಸಿದ ಚಪ್ಪಡಿ ಕಲ್ಲಿನ ಮೇಲೆ ಗುಂಡೆಗೆ ದೊಡ್ಡದಾದ ಸುಂದರ ಅಕ್ಷರಗಳಿಂದ ಕೂಡಿದ ಪಾಠವನ್ನು ಕಂಡರಿಸಲಾಗಿದೆ. ಎಡ ಬದಿಯ ಮೇಲ್ಭೈಯಲ್ಲಿ ಅಲ್ಲಲ್ಲಿ ಕಲ್ಲು ಚುಕ್ಕೆಗಳು ಎದ್ದಿರುವುದರಿಂದ ೧೧ ರಿಂದ ೨೦ರ ವರೆಗಿನ ಸಾಲುಗಳಲ್ಲಿ ಕೆಲವು ಅಕ್ಷರಗಳು ಮುಕ್ಕಾಗಿರುವುದುಂಟು. ಸುಮಾರು ೨೦ ಸಾಲುಗಳನ್ನು ಶಾಸನದಲ್ಲಿ ಗುರುತಿಸಬಹುದಾಗಿದೆ.

ಅಲ್ಲಿರುವ ಶಾಸನದ ಸಾರಾಂಶವೇನೆಂದರೆ, ವಿಜಯನಗರ ಸಾಮ್ರಾಜ್ಯವನ್ನಾಳಿತ್ತಿದ್ದ ಶ್ರೀಕೃಷ್ಣದೇವರಾಯನು ತಿರುಮಲದೇವಿಯರ ಪಟ್ಟದ ನಾಲ್ಕು ಬಾಗಿಲ ಬಳಿಯ ಶ್ರೀ ಕಾಶಿವಿಶ್ವೇಶ್ವರನ ಪ್ರತಿಷ್ಠಾ ಕಾಲದಲ್ಲಿ ಆ ದೇವರ ಪೂಜೆ ನೈವೇದ್ಯಗಳಿಗಾಗಿ ಆ ಪಟ್ಟಣದ ಕೋಟೆಗೆ ಪಶ್ಚಿಮಕ್ಕೆ ಇದ್ದ ಯಲ್ಲಪ್ಪಣ್ಣ ಕೆರೆಯನ್ನು ಆ ದೇವರಿಗೆ ಧಾರೆಯನೆರೆದು ಕೊಟ್ಟು ಈ ಶಾಸನ ಬರೆಯಿಸಿದ. ಈ ಕೆರೆಯ ನಾಲ್ಕು ದಿಕ್ಕುಗಳ ಮೇರೆಗಳೆಂದರೆ ಪೂರ್ವ ದಿಕ್ಕಿಗೆ ವಿರುಪಾಪುರದ ದಿಬ್ಬ ದಕ್ಷಿಣ ದಿಕ್ಕಿಗೆ ಕೋಟೆಯ ಅಗಳು ಪಶ್ಚಿಮ ದಿಕ್ಕಿಗೆ ಹೊಸೂರು ಬಾಗಿಲಿನಿಂದ ಕೃಷ್ಣದೇವರಾಯ ಕಾಲುವೆ ಮೇಲಿನ ವರೆಗಿನ ಪ್ರದೇಶ ಹಾಗೂ ಉತ್ತರ ದಿಕ್ಕಿಗೆ ವಿರುಪಾಪುರರಾಯರ ಕಾಲುವೆಯ ತಟ್ಟ ಈ ನಾಲ್ಕು ದೊರೆಗಳಲ್ಲೂ ಲಿಂಗಮು ದ್ರೆಯಕಲ್ಲುಗಳನ್ನು ಸ್ಥಾಪಿಸಲಾಗಿದೆ.

ಒಟ್ಟಿನಲ್ಲಿ ಈ ಶಾಸನ ಕೃಷ್ಣದೇವರಾಯನು ತನ್ನ ಘನತೆಗೆ ತಕ್ಕಂತೆ ಆತ ಹಾಕಿಸಿದ ಶಾಸನವೊಂದಕ್ಕೆ ಈ ರೂಪದಲ್ಲಾದರೂ ಪ್ರಜಾಗೌರವ ಆ ಪ್ರಾಪ್ತವಾದುದು ಮೆಚ್ಚಲರ್ಹವಾದ ಸಂಗತೀಯಾಗಿದೆ ಎಂದು ಪ್ರೊ. ಲಕ್ಷ್ಮಣ ತೆಲಗಾವಿಯವರು ಹೇಳುತ್ತಾರೆ.

ಶ್ರೀಮತಿ ಹನುಮಾಕ್ಷಿ ಗೋಗಿಯವರ ರೇವಣಸಿದ್ದನನ್ನು ಕುರಿತ ಶಿರವಾಳ ಶಾಸನವೆಂಬ ಸಂಶೋಧನ ಲೇಖನದಲ್ಲಿ ದೊರೆತ ಸ್ಥಳ ಕಲಬುರ್ಗಿ ಜಿಲ್ಲೆಯ ಶಹಾಪೂರ ತಾಲೂಕಿನ ಒಂದು ಹಳ್ಳಿ ಶಿರವಾಳ ಇದು ಶಹಾಪುರದಿಂದ ಈಶಾನ್ಯಕ್ಕೆ ಸುಮಾರು ೧೦ಕಿಲೋ ಮೀಟರ್ ದೂರದಲ್ಲಿದೆ.

ಶಾಸನ ಸ್ವರೂಪ:

ಶಾಸನಕಲ್ಲು ಸು.೩೫" ಉದ್ದ ೩೦" ಅಗಲವಿದೆ. ಈ ಭಾಗದಲ್ಲಿ ಅತಿವಿರಳವಾಗಿ ಸಿಕ್ಕುವ ಕರಿಕಲ್ಲಿನ ಒಂದು ಮುಖವನ್ನುನುಣುಪಾಗೆ ಮಾಡಿಕೊಂಡು ನಂತರ ಅಕ್ಷರಗಳನ್ನು ಆಳವಾಗಿ ಕೊರೆಯಲಾಗಿದೆ. ಲಿಪಿಶಾಸ್ತ್ರದ ಪ್ರಕಾರ ಸು.೧೨ನೇಯ ಶತಮಾನದ ಕನ್ನಡಾಕ್ಷರಗಳಿವು.

ಶಾಸನದ ಮಿತಿ ಇಡಿ ಶಾಸನದಲ್ಲಿ ಬರುವ ಏಕೈಕ ಸಂಖ್ಯೆ ಎಂದರೆ ಮಿತಿಯನ್ನು ಶಾಸನದಲ್ಲಿ "ಶಕವರ್ಷ ೧೧೧೦ ನೆಯ ಪ್ಲವಂಗ ಸಂವತ್ಸರದ ಭಾದ್ರಪದ ಬಹುಳ ಅಮವಾಸ್ಯೆ ಶುಕ್ರವಾರ ಸೂರ್ಯಗ್ರಹಣ ವನ್ನು ಹೆಸರಿಸಲಾಗಿದೆ. ಇಲ್ಲಿ ಶಕವರ್ಷ ೧೧೧೦ ರ ಬದಲು ೧೧೦೯ ಎಂದಿರಬೇಕಿತ್ತು. ಉಳಿದ ವಿವರಗಳು ಗ್ರೆಗೋರಿಯನ್ ಕ್ಯಾಲೆಂಡರಿನ ಪ್ರಕಾರ ಸೆಪ್ಟೆಂಬರ ೪.೧೧೭೮ ಕ್ಕೆ ಸರಿಹೊಂದುತ್ತವೆ.

---

೧೦) ಡಾ.ವ್ಹಿ.ಜಿ.ಪೂಜಾರ - ಸಂಶೋಧನಾ ಲೇಖನಗಳು ಪುಟ-೩೧

ರಾಜವಂಶ:

ಶಾಸನದ ಮೇಲ್ಭಾಗ ಒಡೆದು ಹೋಗಿರುವುದರಿಂದ ಯಾರು ಚಕ್ರವರ್ತಿ ಎಂಬುದು ತಿಳಿಯದು. ಉಳಿದಿರುವ ಶಾಸನದ ಆರಂಭ ಮಹಾಮಂಡಳೇಶ್ವರನ ಬಿರುದಾವಳಿಗಳಿಂದ ಪ್ರಾರಂಭಗೊಂಡಿದೆ.

ಶಾಸನದ ಉದ್ದೇಶ: ಸೂರ್ಯ ಗ್ರಹಣದಂತಹ ಪುಣ್ಯದಿನದಲ್ಲಿ ಮಹಾಮಂಡಳೇಶ್ವರ ಸಿಂಗಿದೇವರಸ ಅವ್ವೆನಾಗಲದೇವಿ ಮಹಾಪ್ರಧಾನ ಸೇನಾಧಿ ಪತಿ ಘುಟ್ಟಿಯ ಕೇತಋನಾಯಕ ಮಹಪಸಾಯಿತ ಅಧಿಕಾರಿ ಪಯ್ಯನಾಯಕ, ಸಮಸ್ತ ಪರಿವಾರ, ನಾಡಗ್ರಾಯಿತರಲಿ ಇವರೆಲ್ಲ ಸೇರಿ ನೀರಿವೋಳಲ ಸಿದ್ದಸಾತೇಶ್ವರ ದೇವರ ಅಂಗಬೊಗ ರಂಗಬೋಗ ಖಂಡ ಸ್ಪುಟಿತ ಜಿರ್ಣೋದ್ದಾರ ಮತ್ತು ವಾಸಿಸುವ ಶಿವಯೋಗಿಗಳ ಆಸನ ಆಚ್ಚಾದನೆಗಳಿಗಾಗಿ ಅಲ್ಲಿಯ ಸ್ಥಾನಚಾರಿಯಾಗಿರ ಬಹುದಾದ ರೇವಣದೇವಯ್ಯನ ಪಾದ ಪ್ರಕ್ಷಾಳನೆ ಮಾಡಿ ದತ್ತಿ ನೀಡಿದುದನ್ನು ಈ ಶಾಸನ ತಿಳಿಸುತ್ತದೆ. ಶಾಸನದ ಸಾಹಿತ್ಯಾಂಶದ ಕುರಿತು ಈ ರೀತಿ ನೋಡಬಹುದು. ಶಾಸನ ಗದ್ಯ ಕಂದಗಳಿಂದ ಕೂಡಿ ಕನ್ನಡ ಭಾಷೆಯಲ್ಲಿ ರಚಿತವಾಗಿದ್ದರೂ ಸಂಸ್ಕೃತ ಭೂಯಿಷ್ಠ ಬಿರುದಾವಳಿ ಹಾಗೂ ಸಂಸ್ಕೃತ ಫಲ ಶೃತಿಗಳು ಹಣಿ ಕಿಕ್ಕಿವೆ. ಶಾಸನ ಗದ್ಯವು ಪದ್ಯದ ಲಯದಲ್ಲಿಯೇ ಪ್ರವಹಿಸುವುದರಿಂದ ಒಂದು ರೀತಿಯ ಶೋಭೆಯುಂಟಾಗಿದೆ ಎಂದು ಶ್ರೀಮತಿ ಹನುಮಾಕ್ಷಿ ಗೋಗಿಯವರು ಹೇಳುತ್ತಾರೆ.

ಒಟ್ಟಿನಲ್ಲಿ ರಾಷ್ಟ್ರಕೂಟ ವಾಸ್ತುಶಿಲ್ಪಕಲೆಯ ಮೇರು ಸದೃಶ ಬೃಹತ ದೇವಾಲಯಗಳನ್ನು ಹೊಂದಿರುವ ಊರು ಕಲಬುರ್ಗಿ ಜಿಲ್ಲೆಯ ಶಹಾಪೂರ ತಾಲೂಕಿನ ಶಿರವಾಳದಲ್ಲಿನ ಐದು ಶಾಸನಗಳನ್ನು ಪ್ರಕಟಿತ ಗೊಂಡಿದ್ದು. ಇದು ಇತ್ತಿಚೆಗೆ ದೊರಕಿದ ಶಾಸನವಾಗಿದೆ.

---

೧೧) ಡಾ.ವ್ಹಿ.ಜಿ.ಪೂಜಾರ – ಸಂಶೋಧನಾ ಲೇಖನಗಳು ಪುಟ–೩೯

ಸಾಂಸ್ಕೃತಿಕ ಕೇಂದ್ರವಾಗಿ ನಾಗಾವಿ ಕೆಲವು ಟಿಪ್ಪಣಿಗಳು ಈ ಲೇಖನ ಡಾ.ಸಿ.ನಾಗಭೂಷಣ ಅವರ ಸಂಶೋಧನಾ ಲೇಖನವಾಗಿದ್ದು "ನಾಗಾವಿ ಪ್ರಾಚೀನ ಅರಸು ಮನೆತಗಳ ಕಾಲದಿಂದಲೂ ಅಗ್ರಹಾರ" ಬ್ರಹ್ಮಪುರಿಯಾಗಿದ್ದು, ನಂತರ ಘಟಕಾಲವಾಗಿ ಮಾರ್ಪಟ್ಟಿತು. ರಾಷ್ಟ್ರಕೂಟ ಅರಸು ಮನೆತನದ ೪ನೇ ಗೋವಿಂದನು ತನ್ನ ಪಟ್ಟಾಭಿಷೇಕ ಕಾಲದಲ್ಲಿ ೭೦೦ ಅಗ್ರಹಾರಗಳಿಗೆ ಮತ್ತು ೮೦೦ ವಿದ್ಯಾರ್ಥಿಗಳಿಗೆ ದತ್ತಿ ಬಿಟ್ಟ ವಿಷಯವನ್ನು ಶಿಲಾಶಾಸನಗಳು ಹೇಳುತ್ತವೆ. ಆ ವೇಳೆಗಾಗಲೇ ನಾಗಾವಿ ಮಹಾಗ್ರಹಾರವಾಗಿತ್ತೇಂದು ಸಂಶೋಧಕರ ಅಭಿಪ್ರಾಯ ನಾಗಾವಿಯ ರಾಮೇಶ್ವರ ದೇವಾಲಯದ ಜೋತೆಗೆ ಇದ್ದ ಸತ್ರ ಮತ್ತು ವಿದ್ಯಾಕೇಂದ್ರಕ್ಕಾಗಿ ಭೂಮಿದಾನವನ್ನು ನೀಡಿರುವುದನ್ನು ರಾಷ್ಟ್ರಕೂಟರ ಕಾಲದ ಕ್ರಿ.ಶ ೧೯೪೯ರ ನಿತ್ಯ ವರ್ಷ ದೇವನ ಶಾಸನವು ಉಲ್ಲೇಖಿಸಿದೆ.

ಕ್ರಿ.ಶ ೧೦೫೮ ಕಾಲಕ್ಕೆ ಉನ್ನತ ಶಿಕ್ಷಣದ ಕಲಿಕೆಗೆ ಆಗರವಾಗಿದ್ದ ನಾಗಾವಿಯು ಕ್ರ.ಶ.೧೦೮೫ ವೇಳೆಗೆ ತನ್ನ ವ್ಯಾಪ್ತಿಯನ್ನು ವಿಸ್ತಿರಿಸಿಕೊಂಡು ಸಾಂಸ್ಕೃತಿಕ ಚಟುವಟಿಕೆಗಳಿಗೂ ಅವಕಾಶವನ್ನು ಕಲ್ಪಿಸಿಕೊಟ್ಟು ಲಲಿತ ಕಲೆಗಳ ನೆಲೆ ಬೀಡು ಆಗಿತ್ತು. ಹನ್ನೊಂದನೇಯ ಶತಮಾನದಲ್ಲಿ ನಾಗಾವಿಯಲ್ಲದ್ದ ಮಧುಸುಧನ ದೇವಾಲಯವು ಸಮಾಜಿಕವಾಗಿ ಸಾಂಸ್ಕೃತಿಕವಾಗಿ ಮಹತ್ತರವಾದವನ್ನು ಪಡೆದಿತ್ತು ಎಂಬುದು ಕ್ರ.ಶ೧೦೬೮ರ ಶಾಸನಗಳಲ್ಲಿಯ ವಿವರದಿಂದ ತಿಳಿದು ಬರುತ್ತದೆ.

ದೇವಾಲಯದ ಗರ್ಭಗುಡಿಯ ದೇವತಾ ವಿಗ್ರಹದ ಮುಂದುಗಡೆಯ ನವರಂಗದಲ್ಲಿ ನರ್ತಕಿಯರಿಂದ ನಡೆಯುವ ಗೀತ ನೃತ್ಯಗಳಾದ ರಂಗ ಭೋಗಗಳು ಸಹ ಮಧುಸೂಧನ ದೇವಾಲಯದಲ್ಲಿ ನಡೆಯುತ್ತಿದ್ದವು ಎಂಬುದು ಶಾಸನದಿಂದ ತಿಳಿದು ಬರುತ್ತದೆ.

---

೧೨) ಡಾ.ವ್ಹಿ.ಜಿ.ಪೂಜಾರ – ಸಂಶೋಧನಾ ಲೇಖನಗಳು ಪುಟ–೪೦

ನಾಗಾವಿಗೆ ಕೈಗೊಂಡ ಸಂಬಂಧಿಸಿದ ಕೆಲವೊಂದು ಅವಶೇಷಗಳಿಂದ ಅಗ್ರಹಾರ ಘಟೀಕಾಲಯ ವಾಗುವುದಕ್ಕಿಂತ ಮೊದಲು ಜೈನ ಮತದ ತಾಣವು ಆಗಿತ್ತು ಎಂಬುದಾಗಿ ತಿಳಿದುಬಂದಿದೆ. ನಾಗಾವಿನ ಈಗಿನ ಮಧುಸೂದನ ದೇವಾಲಯದ ಹಿಂಬದಿಯ ಅರ್ಧ ಕಿ.ಮಿ ಅಂತರದಲ್ಲಿ ಪಾಳು ಬಿದ್ದ ಕಟ್ಟಡಗಳ ಅವಶೇಷಗಳು ಎಲ್ಲಾ ಕಡೆ ಹರಡಿದ್ದು ಅವಶೇಷಗಳನ್ನು ಕೆದಕಿ ಪರಿಶೀಲಿಸಿದಾಗ ಜೈನ ತೀರ್ಥಂಕರ ವಿಗ್ರಹ ಹಾಗೂ ಇನ್ನಿತರ ಕುರುಹುಗಳು ಕಂಡು ಬಂದಿವೆ.

ಹೀಗೆ ವಿದ್ಯಾಚಟುವಟಿಕೆಳ ಹಾಗೂ ಲಲಿತ ಕಲೆಗಳ ಆಶ್ರಯ ತಾಣವಾಗಿದ್ದ ಮಧುಸೂದನ ದೇವಾಲಯವು ಇಂದು ದುಃಸ್ಥಿತಿಯಲ್ಲಿದೆ. ಅಲ್ಲಿಗೆ ಭೇಟಿಕೊಟ್ಟ ಯಾರಿಗಾದರೂ ಅದನ್ನು ಕಂಡಾಗ ಮರುಕವಾಗದಿರದು ಎಂದು ಲೇಖಕರು ಕಳಕಳಿಯಿಂದ ನುಡಿದಿರುವಂತೆ ತೋರುತ್ತದೆ.

ಕನ್ನಡ ನಾಡಿನ ಸಂಸ್ಕೃತಿಯ ಪ್ರತೀಕವಾದ ನಾಗಾವಿಯು ಈಗ ಜಾಲಿ ಮುಳ್ಳು ಗಿಡಗಳಿಂದ ಪಾಳುಬಿದ್ದ ಅವಶೇಷಗಳಿಂದ ಹುಳು-ಹುಪ್ಪಟೆಗಳಿಗೆ ಆಶ್ರಯ ತಾಣವಾಗಿ ಯಾರಿಗೂ ಬೇಡವಾದ ಸ್ಥಳವಾಗಿ ಉಳಿದಿರುವದರಿಂದ ಇದನ್ನು ಯಥಾ ಸ್ಥಿತಿಗೆ ತರುವ ಸಂರಕ್ಷಿಸುವ ಹೊಣೆ ಎಲ್ಲರದ್ದು ಎಂದು ಲೇಖಕರು ನಾಗಾವಿಯ ಉಳಿವಿಗೆ ಅದು ದಾಖಲೆಯಲ್ಲಿ ಮಾತ್ರ ಉಳಿಯದಿರಲಿ. ಅದು ಮುಂದಿನ ಪೀಳಿಗೆಗೆ ಮಾರ್ಗ ಸೂಚಿಯಾಗಲಿ ಎಂದು ರಾಜ್ಯ ಪುರಾತತ್ವ ಇಲಾಖೆಗೆ ನಮ್ಮ ನಾಡಿನ ಜನತೆಗೆ ಕಿವಿ ಮಾತನ್ನು ಹೇಳಲು ಪ್ರಯತ್ನಿದ್ದಾರೆ.

ಸೇಡಮ್ ಜೈನ ಸ್ಮಾರಕಗಳ ನೆಲೆವೀಡು :

ಪ್ರಸ್ತುತ ಸಂಶೋಧನಾ ಲೇಖನವು ಡಿ.ಎನ್. ಅಕ್ಕಿಯವರು ಮಹತ್ವ ಪೂರ್ಣ ಐತಿಹಾಸಿಕ ಸ್ಥಳಗಳು ಶಾಸ್ತ್ರೀಯ ಸಂಶೋಧನೆ ಮತ್ತು ಸಕ್ರೀಯ ಕ್ಷೇತ್ರಕಾರ್ಯದ ಕೊರತೆಯಿಂದಾಗಿ ಇತಿಹಾಸದಲ್ಲಿ ರಾಷ್ಟ್ರಕೂಟರಿಗೆ ಸಿಕ್ಕ ಪ್ರಾಶಸ್ತ್ಯ ಸೇಡಿಂಬಪುರ (ಸೇಡಮ್) ಕ್ಕೆ ಸಿಗಂದಂತಾಗಿದೆ.

ಸೇಡಮ್ ನಗರದ ಕೆಲ ಸ್ಮಾರಕಗಳ ಅಧ್ಯಯನ ಯೋಗ್ಯವಾದವು ಸೇಡಿಂಬ ನಗರ ಅರಸರ ಅಧಿಕಾರಿಗಳ ಆಡಳಿತ ಕೇಂದ್ರವಾಗಿದಂತೆ ಧಾರ್ಮಿಕ ನೆಲೆಗಟ್ಟು ಆಗಿತ್ತೇಂಬುದಕ್ಕೆ ಅಲ್ಲಿ ಸಿಗುವ ಅಳಿದುಳಿದ ಜೈನ ಮಂದಿರಗಳು ಜಿನ ಬಿಂಬಗಳು

ಯಕ್ಷ ಯಕ್ಷಿಯರ ವಿಗ್ರಹಗಳು ಸಾಕ್ಷಿಯಾಗಿ ನಿಂತಿವೆ. ಇವೆಲ್ಲದರ ಸಂಶೋಧನೆ ನಡೆದಿದ್ದರೆ ಎಷ್ಟೋ ಹೊಸ ವಿಷಯಗಳು ಹೊರ ಬರುತ್ತಿದ್ದವು. ಆದರೆ ಆ ಕೆಲಸ ಸೇಡಮ್ ನಗರದಲ್ಲಿ ಹೆಚ್ಚಾಗಿ ನಡೆದಿಲ್ಲ. "ದಿಗಂಬರ, ಶ್ವೇತಂಬರ ಮತ್ತು ಯಾಪನಿಯ ಸಂಪ್ರದಾಯದವರ ಕಾರ್ಯ ಕ್ಷೇತ್ರವಾಗಿ ನಾಡಿಗೆ ಧರ್ಮದ ಚೌಕಟ್ಟಿನಲ್ಲಿ ಜನರನ್ನು ಮುನ್ನಡೆಸುತ್ತಿದ್ದ ನೆಲ ಸ್ಮಶಾನ ಸದೃಶವಾಗುವ ಮಟ್ಟದಲ್ಲಿದೆ ಕೆಲವೊಂದು ಜೀನ ಮುಂದಿರದ ವಿಗ್ರಹಗಳು ರಾಷ್ಟ್ರಕೂಟರ ಕಾಲದವು ಬಹುತೇಕ ಅವಶೇಷಗಳು ಕಲ್ಯಾಣ ಚಾಲುಕ್ಯರ ಕಾಲದವು ಇನ್ನಿತರ ಶಾಸನಾಧಾರಗಳ ಮೇಲೆ ತ್ರಿಕೂಟ ಬ್ರಹ್ಮ ಜೀನಾಲಯ ಶಾಂತಿನಾಥ ಬಸದಿ ಲೋಕ ಜಿನಾಲಯ ಪಾರ್ಶ್ವನಾಥ ಬಸದಿ ತೆಂಕಣ ಬಸದಿ ಇನ್ನಿತರ ಜಿನ ಮಂದಿರಗಳ ಬಗ್ಗೆ ಮಾಹಿತಿ ಸಿಗುತ್ತವೆ. ಅಲ್ಲದೇ ಕಲಾತ್ಮಕವಾದ ಯಕ್ಷಿ ಪ್ರತಿಮೆಗಳು ಕಂಡು ಬರುತ್ತವೆ. ಶ್ರೀ ಕೂಷ್ಮಾಂಡಿನಿ, ಶ್ರೀ ಪದ್ಮಾವತಿ ಪ್ರತಿಮೆಗಳು ಬಸದಿಯ ಪ್ರವೇಶ ದ್ವಾರದ ಒಳಭಾಗದಲ್ಲಿ ನವರಂಗಕ್ಕೆ ಎದುರಾಗಿ ಇರುವುದು ಕಾಣಬಹುದು. ಇನ್ನು ಮಾಣಿಕೇಶ್ವರ ಗುಡಿಯನ್ನು ಜನಲಿಂಗದ ಗುಡಿ ಎಂದು ಕರೆಯುವುದುಂಟು. ಕ್ರಿ.ಶ ೧೦,೧೧ನೇ ಶತಮಾನದ ೪೫ ಕಂಬಗಳುಳ್ಳ ಇದು ಸಾಲು ಮಂಟಪ ಇದರ ಮಧ್ಯಭಾಗದಲ್ಲಿ ಚಿಕ್ಕ ಗುಡಿಯನ್ನು ನಿರ್ಮಿಸಿದ್ದಾರೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯದ ಈಶಾನ್ಯ ದಿಕ್ಕಿಗೆ ಎತ್ತರವಾದ ಕಂಬವಿದೆ. ಈ ಕಂಬಕ್ಕೆ ಜನ ಬಾನಿಕಲ್ಲು, ಬಾಣಂತಿಕಲ್ಲು ಎಂದು ಕರೆಯುವುದುಂಟು.

ಇಂಥ ಅನೇಕ ಮಹತ್ವ ಪೂರ್ಣ ಐತಿಹಾಸಿಕ ಮಾಹಿತಿಯ ಸ್ಥಾನಗಳು ಹೈದ್ರಾಬಾದ ಕರ್ನಾಟಕದ ಎಲ್ಲೆಡೆಗೂ ಇವೆ. ಅವು ಸಂಶೋಧಕರ ಕೊರತೆಯಿಂದಾಗಿ ಮತ್ತು ನಿರ್ಲಕ್ಷ್ಯದಿಂದಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಸಮಾಜ ಬಾಂಧವರು ಇತಿಹಾಸ ಪ್ರೇಮಿಗಳು ಸಂಘ ಸಂಸ್ಥೆಗಳು ಸಾಂಸ್ಕೃತಿಕ ಪರಂಪರೆಯ ಇಂಥ ಅಮೂಲ್ಯ ಸ್ಮಾರಕಗಳನ್ನು ಉಳಿಸಿಕೊಳ್ಳುವತ್ತ ಮನಸ್ಸು ಮಾಡಬೇಕಾಗಿದೆ.

ಸುರಪುರ ಸಂಸ್ಥಾನದ ಬಂಡಾಯ :

ಪ್ರಸ್ತುತ ಲೇಖನದಲ್ಲಿ ಡಾ. ರಂಗರಾಜ ವನದುರ್ಗರವರು ದತ್ತು ಪುತ್ರರಿಗೆ ಹಕ್ಕಿಲ್ಲವೆಂಬ ಲಾರ್ಡ್‌ಡಾಲ್ ಹೌಸಿಯ ಶಾಸನದಿಂದ ಕಿತ್ತೂರ ಝಾನ್ಸಿಯಂತಹ ಅನೇಕ ಸಂಸ್ಥಾನಗಳು ತತ್ತರಿಸಿದ್ದವು. ತಮ್ಮ ಮೂಲ ಅಸ್ತಿತ್ವಕ್ಕೆ ಕೊಡಲಿ ಪೆಟ್ಟು ಕೊಡುವ ಇಂಥ ನೀತಿ ವಿರುದ್ದ ಸ್ವದೇಶ ಸಂಸ್ಥಾನಗಳೆಲ್ಲ ಕೆಂಡ ಕಾರಿದವು. ಬ್ರಿಟಿಷ ಸರಕಾರದ ವಿರುದ್ಧ ಸೈನ್ಯ ಸಂಘಟಿಸುವ ಮೂಲಕ ಬಂಡಾಯ ಹೂಡಿದ ನಾಲ್ವಡಿ ವೆಂಕಟಪ್ಪ ನಾಯಕನ ವ್ಯಕ್ತಿತ್ವ ಇಲ್ಲಿ ಅಮೋಘವಾದುದು. ಏಕೆಂದರೆ ಕೇವಲ ೨೪ರ ಹರೆಯದ ತರುಣ ರಾಜನ ಇಲ್ಲಿಯ ಚರಿತ್ರೆ ಸ್ಮರಣಾರ್ಹವಾಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಇದರ ಹಿನ್ನೆಲೆ:

"ಸುರಪುರದ ದೊರೆ ಮತ್ತು ಹೈದ್ರಾಬಾದ ನಿಜಾಮರ ಮಧ್ಯೆ ಹಣದ ವಿವಾದವಿದ್ದುದರಿಂದ ಅದನ್ನು ಬಗೆ ಹರಿಸಲೇಂದು ಸಂಸ್ಥಾನದಲ್ಲಿ ಪ್ರವೇಶಿಸಿದ ಬ್ರಿಟೀಷರು ಇಲ್ಲಿಯ ಬೇಡರ ಬೇರುಗಳನ್ನು ಕತ್ತರಿಸಲು ಆರಂಭಿಸಿದರು. ಇದನ್ನು ಸಹಿಸಿಕೊಳ್ಳದ ವೆಂಕಟಪ್ಪ ನಾಯಕ ಬ್ರಿಟೀಷರ ದ್ವಂದ್ವ ನೀತಿಯನ್ನು ಧಿಕ್ಕರಿಸಿದನು. ಇದನ್ನೆ ಮನದಲ್ಲಿಟ್ಟುಕೊಂಡು ಕಂಪನಿ ಸರಕಾರ ಸುರಪುರದ ಮೇಲೆ ತನ್ನ ಕೆಂಗಣ್ಣು ಇಟ್ಟಿತು.

ವೆಂಕಟಪ್ಪನಾಯಕ ಮೃಗಜಾತಿ ಶೂರ
ಎಲ್ಲಿ ಹುಟ್ಟಿರಲಿಲ್ಲ. ಇಂಥ ಸರದಾರ
ಸ್ವಾತಂತ್ರ್ಯ ಸಮರಕ್ಕೆ ಅಣಿಯಾದ ಧೀರ
ಇನ್ನು ಮುಂದೆ ಕೇಳ್ರಿ ಕಥೆಯ ವಿಸ್ತಾರ॥
ಧಾರವಾಡ ನರಗುಂದ ಬಳ್ಳಾರಿ ಮೈಸೂರ
ರಾಯಚೂರ ಮುಂಡರಗಿ ಕಲಾದಗಿಯವರ
ಬೆಳಗಾವಿ ಸೊಲ್ಲಾಪೂರದ ಎಲ್ಲಾ ಪ್ರಮುಖರ
ಮೇಲೆ ನಾಯಕನಾದ ರಾಜಕುಮಾರ॥

ಎಂಬ ಇಂಥ ಹಲವು ಬಗೆಯ ದುಂದುಮೆ ಹಾಡುಗಳು ಸುರಪುರದ ವೆಂಕಟಪ್ಪ ನಾಯಕನ ಸೈನ್ಯ ಸಂಘಟನೆಯನ್ನು ವಿಸ್ತಾರವಾಗಿ ಸಮರ್ಥಿಸುತ್ತವೆ ಮತ್ತು ಬೆಂಬಲಿಸಿದ ಇತರ ಸಂಸ್ಥಾನಗಳ ದೊಡ್ಡ ಪಟ್ಟಿಯನ್ನೇ ಇದು ನೀಡುತ್ತದೆ.

ತನ್ನ ಸಂಸ್ಥಾನದ ಪಿತ್ತೂರಿಗಾರರಿಂದಲೇ ವೆಂಕಟಪ್ಪ ನಾಯಕನ ಸಂಸ್ಥಾನವು ಬ್ರಿಟೀಷರ ಪಾಲಾಯಿತು. ವೆಂಕಟಪ್ಪ ನಾಯಕನ ಅವನತಿಯಾಯಿತು ಸ್ವದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ವ್ಯಕ್ತಿಗಳಲ್ಲೆ ನಮ್ಮ ದೃಷ್ಟಿಯಲ್ಲಿ ವೀರರು ಅದೇ ವೀರರು ಬ್ರಿಟೀಷರ ದೃಷ್ಟಿಯಲ್ಲಿ ವೈರಿಗಳು ಸುರಪುರದ ಶೂರ ರಾಜನಿಗೆ ರಾಜ್ಯ ದ್ರೋಹದ ಆರೋಪ ಹೊರಿಸಿದ ಬ್ರಿಟೀಷರ ತಂತ್ರ ಇದೇ ನೀತಿಯದು ವೈರಿಗಳೆ ನ್ಯಾಯಾದೀಶರಾದಾಗ ನಮಗೆ ನ್ಯಾಯ ದೋರಕುವುದಾದರೂ ಹೇಗೆ? ಬಂಧೀತ ರಾಜನನ್ನು ಚಂಗಲ್ಲೇಟೆ ಸೆರೆಮನೆಗೆ ಒಯ್ಯುವ ನಾಟಕದಲ್ಲಿ ಬ್ರಿಟೀಷರು ಸುರಪುರದ ರಾಜನನ್ನು ಕೊಂದೆ ಬಿಟ್ಟರು ಎಂದು ಸುರಪುರದ ವೆಂಕಟಪ್ಪ ನಯಕನ ಜೀವನ ಚಿತ್ರಣವನ್ನು ಇಲ್ಲಿ ಮನ ತಟ್ಟುವಂತೆ ಚಿತ್ರಿಸಲಾಗಿದೆ.

ಮಿತಾಕ್ಷರ ಕೃತಿ ಧರ್ಮ ಶಾಸ್ತ್ರ ಸಾಹಿತ್ಯ ರಾಶಿಯಲ್ಲಿ ಮಿತಾಕ್ಷರಾ ವ್ಯಾಖ್ಯಾನವು ಅನನ್ಯ ಸ್ಥಾನವನ್ನು ಹೊಂದಿದೆ. ಅದರ ಸ್ಥಾನವನ್ನು ಸಂಸ್ಕೃತ ಸಾಹಿತ್ಯದಲ್ಲಿ ವ್ಯಾಕರಣ ಶಾಸ್ತ್ರದಲ್ಲಿ ಪತಂಜಲಿಯ ಮಹಾಭಾಷ್ಯಕ್ಕೆ ಮತ್ತು ಅಲಂಕಾರ ಶಾಸ್ತ್ರದಲ್ಲಿ ಮಮ್ಮಟನ ಕಾವ್ಯ ಪ್ರಕಾಶಕ್ಕೆ ಇರುವ ಸ್ಥಾನಕ್ಕೆ ಹೋಲಿಸಲಾಗಿದೆ.

ಮೀತಾಕ್ಷರ ತನ್ನ ಹಿಂದಿನ ಸುಮಾರು ೨೫೦೦ ವರ್ಷಗಳ ಧರ್ಮಶಾಸ್ತ್ರಗಳ ಸಾರಸಂಗ್ರಹದ ಊಹೆಯನ್ನು ಪ್ರತಿನಿಧಿಸುತ್ತದೆ.

ಆಂಗ್ಲಕಾಲೀನ ಭಾರತದ ನ್ಯಾಯಾಲಯಗಳ ನಿರ್ಣಯಗಳಲ್ಲಿ ಹಿಂದೂ ಕಾನೂನಿಗೆ ಸಂಬಂಧಿಸಿದ ಹಲವು ವಿಷಯಗಳಿಗೆ ಮೀತಾಕ್ಷರವು ಅತ್ಯಂತ ಪ್ರಮಾಣ ಗ್ರಂಥವಾಗಿತ್ತು. ಇವತ್ತಿಗೂ ಅದರ ಪ್ರಾಮುಖ್ಯತೆ ಹಾಗೆಯೇ ಉಳಿದಿದೆ ಎಂದು ಡಾ. ಮೈಬೇಲ್‌ರವರು ಮಿತಾಕ್ಷರಾದ ಪ್ರಾಮುಖ್ಯತೆ ಕುರಿತು ಹೇಳುತ್ತಾರೆ.

---

೧೩) ಡಾ.ವ್ಹಿ.ಜಿ.ಪೂಜಾರ – ಸಂಶೋಧನಾ ಲೇಖನಗಳು ಪುಟ-೪೦

ಮಿತಾಕ್ಷಾರಾವನ್ನು ಪ್ರಮಿತಾಕ್ಷರಾ ಅಥವಾ ಋಜು ಮಿತಾಕ್ಷರಾ ಅಥವಾ ಕೇವಲ ಮಿತಾಕ್ಷರಾ ಎಂಬುದಾಗಿ ಹಲವು ಹಸ್ತುಪ್ರತಿಗಳ ಕೊನೆಯಲ್ಲಿ ಕರೆಯಲಾಗಿದೆ. ಮಿತಾಕ್ಷರ ಕೇವಲ ಯಾಜ್ಞವಲ್ಕ್ಯ ಸ್ಮೃತಿಯ ವಿವರಣೆಯಾಗಿರದೆ ಅದರ ವಸ್ತುವಿನ ವ್ಯವಸ್ಥೆಗೊಳಿಸುವ ಮೂಲಕ ಅದು ಪರ್ಯಾಲೋಚನೆಗೆ ತೋಡಗುತ್ತದೆ ಎಂದು ಲೇಖಕರು ಹೇಳುತ್ತಾರೆ.

ವಿಜ್ಞಾನೇಶ್ವರನವೆಂದೇ ಪರಿಗಣಿತವಾದ ಹಲವು ಸಿದ್ಧಾಂತಗಳು ಮಿತಾಕ್ಷರಾದಲ್ಲಿದೆ ಎಂದು ಲೇಖಕರು. ತಿಳಿಸಿರುವಂತೆ ಉದಾ:– ಯಾಜ್ಞವಲ್ಕ್ಯ ಸ್ಮತೀಯ ೧೫೨ನೇ ಶ್ಲೇರುಕದ ವಿವರಣೆಯಲ್ಲಿ ಸಪಿಂಡವೆಂದರೆ ರಕ್ತಸಂಬಂದಿಯೆಂದೇ ತಿಳಿಯಬೇಕೆಂದಿದ್ದಾನೆ. ಪಿತ್ರಾರ್ಜನೆ ಮತ್ತು ಉತ್ತರಾಧಿಕಾರತ್ವವು ರಕ್ತ ಸಂಭಂಧಿಗಳಿಗೆ ಮಾತ್ರ ಎಂದು ಇವನು ಸ್ಪಷ್ಟವಾಗಿ ಹೇಳಿದ್ದಾನೆ. ದಾಯವನ್ನು ಪ್ರತಿಬಂಧ ಮತ್ತು ಸಪ್ರತಿಬಂಧವೆಂದು ವಿಭಜಿಸಿ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮಕ್ಕಳು ಹುಟ್ಟಿನಿಂದ ಪೂರ್ವ ಜನರ ಆಸ್ತಿಗೆ ಹಕ್ಕುದಾರರಾಗುತ್ತಾರೆಂದು ತಿಳಿಸುತ್ತಾನೆ.

ಈ ರೀತಿಯಲ್ಲಿ ವಿಜ್ಞಾನೇಶ್ವರನ ಮಿತಾಕ್ಷರಾ ವ್ಯಾಖ್ಯ ಕುರಿತು ಡಾ.ಮೈಬೇಲ್ ರವರು ವಿಶ್ಲೇಷಣಾತ್ಮಕವಾಗಿ ವಿವರಿಸಿದ್ದಾರೆ.

ಪ್ರಸ್ತುತ ಕೃತಿಯ ಸಂಪಾದಕರ ಡಾ..ವ್ಹಿ.ಜಿ ಪೂಜಾರರ ಸಂಶೋಧನಾ ಲೇಖನದಲ್ಲಿ ಗುಲಬರ್ಗಾ ತಾಲೂಕಿನ ಸ್ಥಳನಾಮಗಳು, ಭಾಷಿಕ ಸಾಂಸ್ಕೃತಿಕ ಅಧ್ಯಯನ.

ಸಾಹಿತಿಕ, ಸಾಂಸ್ಕೃತಿಕ ಮತ್ತು ಭಾಷಿಕ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಮೆರೆದ ಗುಲಬರ್ಗಾ ಜಿಲ್ಲೆಯು ಕೆಲಕಾಲ ಮುಸ್ಲಿಂರ ಆಡಳಿತ ಒಳಪಟ್ಟಿರುವುದರಿಂದ ಆ ಸಂಸ್ಕ್ರತಿಯ ಭಾಷೆಯ ಪ್ರಭಾವವು ಈ ನಾಡಿನ ಮೇಲೆ ದಟ್ಟವಾಗಿ ಮೂಡಿತು. ಈ ಕಾರಣದಿಂದಾಗಿ ಇಂದಿಗೂ ಸಹ ಇಲ್ಲಿನ ಜನರು ದೈನಂದಿನ ಮಾತುಗಳಲ್ಲಿ ಕಿಲ್ಲಾ, ಸವಾರಿ, ಜಲಸಾ, ದೋಬಿ, ರಜಾಯಿ, ದುಕಾನ್, ಖಾರಿಖ್, ಹಿಕಮತ್, ನಜರ್, ಕಿರಾಯ್, ತೇಜ, ಬತಾಯಿ, ಖರಾಬ್,

ದುಇಯಾದ, ಮುಷ್ಕಿಲ್, ಮಜಬೂರ, ಮುಂತಾದ ಉರ್ದು ಪದಗಳನ್ನು ಹೇರಳವಾಗಿ ಆಡು ಮಾತಿನಲ್ಲಿ ಬಳಸುತ್ತಾರೆ.

ಆದರೆ ಈ ಭಾಗದ ಭಾಷೆಯ ಬಗೆಗೆ ನಡೆದಷ್ಟು ಅಧ್ಯಯನ ಸ್ಥಳನಾಮಗಳ ಮೇಲೆ ನಡೆದಿಲ್ಲದಿರುವದನ್ನು ಗಮನಿಸಿ ಡಾ.ಪೂಜಾರರು ಗುಲ್ಬರ್ಗಾ ತಾಲೂಕಿನ ಸ್ಥಳನಾಮಗಳ ಭಾಷಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಅಧ್ಯಯನ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ಸ್ಥಳನಾಮವೆಂದರೆ ಊರ ಹೆಸರುಗಳು',ಗ್ರೀಕ್ ಭಾಷೆಯಲ್ಲಿ 'ಟೋಪೋಸ' ಎಂದರೆ ಸ್ಥಳಗಳು 'ನೋಮೋಸ್' ಎಂದರೆ ಹೆಸರುಗಳು. ಆದ್ದರಿಂದ ಸ್ಥಳಗಳ ಹೆಸರುಗಳನ್ನು ಅಧ್ಯಯನ ಮಾಡುವ ವಿಜ್ಞಾನಕ್ಕೆ 'ಟೋಪೋನೋಮಿ' ಎಂದು ಕರೆಯಲಾಗಿದೆ ಊರು, ಗ್ರಾಮ, ದೇಶ ಮುಂತಾದ ಪದಗಳಿಗೆ ಪಾರಂಪರಿಕವಾದ ಸೀಮಿತ ಅರ್ಥಗಳಿರುವದರಿಂದ ಉಳಿದ ಸಾಮುದಾಯಿಕ ಮಾನವ ನೆಲೆಗಳ ಅರ್ಥವನ್ನು ಅವು ಒಳಗೊಳ್ಳುವುವು.

ಆದುದರಿಂದ ಇಲ್ಲಿ ಹೊಸದಾಗಿ ಬಳಕೆಗೆ ಬಂದಿರುವ ಸ್ಥಳಾನಾಮವೆಂಬ ಪದವನ್ನು ಹೆಚ್ಚು ಸಮರ್ಪಕವೆಂದು ಬಳಸಬಹುದು. ಸ್ಥಳನಾಮಗಳು ಮಾನವರ ಸಣ್ಣ ನೆಲೆಯಿಂದ ಆರಂಭಿಸಿ ಅತೀ ದೊಡ್ಡ ಮಾನವ ವಸಾಹತು ನೆಲೆಗಳ ಅರ್ಥವನ್ನು ಹೊಂದಿವೆ.

ಈ ಸ್ಥಳನಾಮಗಳನ್ನು ಎರಡು ರೀತಿಯಲ್ಲಿ ಅರ್ಥಯಿಸಬಹುದಾಗಿದೆ. ಒಂದು ಭೌಗೋಳಿಕ ವೈಲಕ್ಷಣ್ಯವನ್ನು ಸೂಚಿಸುವ ಸಮಾನ ಅರ್ಥ ಈ ಬಗೆಯ ಹೊಸ ಹೆಸರುಗಳು ಹೆಚ್ಚಾಗಿರೂಢ ನಾಮಗಳ ಸ್ವರೂಪದಲ್ಲಿ ಮಾತ್ರ ಉಳಿಯುತ್ತವೆ.

---

೧೪) ಡಾ.ವ್ಹಿ.ಜಿ.ಪೂಜಾರ – ಸಂಶೋಧನಾ ಲೇಖನಗಳು ಪುಟ–೬೧

ಎರಡು ಸಾಂಸ್ಕೃತಿಕ ವೈಶಿಷ್ಯವನ್ನು ಸೂಚಿಸುವ ವಿಶೇಷಾರ್ಥ ಆಯಾ ಜನಸಮುದಾಯವು ನೆಲೆನಿಂತ ಒಂದೊಂದು ಸ್ಥಳದ ವಿಸ್ತೀರ್ಣ ಅಲ್ಲಿನ ಜನಸಂಖ್ಯೆ ಮುಂತಾದ ಆಧಾರಗಳ ಮೇಲಿಂದ ಅದನ್ನು ಒಂದು ಹಳ್ಳಿ, ಊರು, ಗ್ರಾಮ, ನಗರ, ಖೇಡ, ಪುರ, ಪಟ್ಟಣ ಎಂದು ಮುಂತಾಗಿ ಕರೆಯಲಾಗುತ್ತದೆ. ಇದರೊಂದಿಗೆ ಆಯಾ ಸ್ಥಳಕ್ಕೆ, ಪ್ರಾಪ್ತವಾದ ಒಂದು ರೀತಿಯ ವಿಶಿಷ್ಟ ಘಟಕಗಳು ಬರುತ್ತವೆ. ಇಂಥ ನಿರ್ದಿಷ್ಟ ಹೆಸರುಗಳುಳ್ಳ ಪದಗಳೇ ಸ್ಥಳನಾಮಗಳು ಸ್ಥಳನಾಮವೆಂದಾಗ ಆ ಊರು ಹೆಸರಿನ ಹಿಂದೆ ಸಮಾನ್ಯವಾಗಿ ಒಂದು ವಿಧದ ವಿಶೇಷತೆ ಇರುತ್ತದೆ. ಜನತೆಯ ಜೀವನ ವಿಧಾನ ಅವರ ಸಂಸ್ಕೃತಿ ಅದರಲ್ಲಿ ಅಡಗಿರುತ್ತದೆ. ಒಂದು ಊರಿಗೆ ಅಲ್ಲಿ ನಡೆದ ಸಾಮಾಜಿಕ ಧಾರ್ಮಿಕ ಅಥವಾ ರಾಜಕೀಯ ಇತ್ಯಾದಿ ವಿಶೇಷ ಘಟನೆಯ ನೆನಪಿಗಾಗಿ ಹೆಸರು ಇಟ್ಟಿರಲು ಸಾಧ್ಯವಿದೆ ಎಂದು ಲೇಖಕರು ಇಲ್ಲಿ ವಿವರಣಾತ್ಮಕವಾಗಿ ಚಿತ್ರಿಸಿದ್ದಾರೆ.

ಗುಲಬರ್ಗಾ ತಾಲುಕಿನಲ್ಲಿ ಬರುವ ೧೯೦ ಊರುಗಳಲ್ಲಿ ಕೆಲ ಊರುಗಳ ಹೆಸರುಗಳನ್ನು ಇಲ್ಲಿ ಭಾಷಿಕ ಮತ್ತು ಸಂಸ್ಕೃತಿಕ ಊರುಗಳು ಹೆಸರುಗಳನ್ನು ಇಲ್ಲಿ ಭಾಷಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಡಾ.ಪೂಜಾರರು ಅಳವಡಿಸಿಕೊಂಡದ್ದಾರೆ.

ಭಾಷಿಕ ಅಧ್ಯಯನ:

"ಭಾಷಾ ವಿಜ್ಞಾನಿಗಳು ಊರ ಹೆಸರುಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕ (Specific and generic) ಎಂಬೆರಡು ಘಟಕಗಳಲ್ಲಿ ವಿಭಜಿಸಿ ಅಧ್ಯಯನಕ್ಕೆ ತೋಡಗುತ್ತಾರೆ. ಯವುದಾದರೂ ವಿಷಯವನ್ನು ಒಳಗೊಂಡಂಥದು ವಾರ್ಗಿಕ ಅಂದರೆ ಊರುಗಳ ಹೆಸರು ಉತ್ತರಾರ್ಧ ಘಟಕ ಇದರಲ್ಲಿ ವಿಷಯ ಪ್ರಸ್ತಾಪ ಇರುವುದಿಲ್ಲ ಊರುಗಳನ್ನು ವರ್ಗಿಕರಣಕ್ಕೆ ಒಳಪಡಿಸಬಹುದಾದ ಸಾಮಾನ್ಯ ಘಟಕ ಇದಾಗಿರುತ್ತದೆ.

ಕಲ್ಲು, ಮೂಡ, ಹಾಳ, ವಾಡ, ಕೆರೆ, ವಾಡಿ, ಪಟ್ಟಣ, ಕುಂದ, ಕೋಟೆ ಈ ಮುಂತಾದ ಘಟಕಗಳಲ್ಲಿ ಒಂದನ್ನೊಳಗೊಂಡು ಕೊನೆಗೊಳ್ಳುವಂಥವು.

ನಿರ್ದಿಷ್ಟ ಮತ್ತು ವಾರ್ಗಿಕ ಇವೆರಡೂ ಪ್ರತ್ಯೇಕ ಧ್ವನಿವ್ಯತ್ಯಾಸವೂ ಆಗುತ್ತದೆ. ನಿಘಂಟು ವಿಜ್ಞಾನಕ್ಕೂ ಈ ರೀತಿಯ ಸ್ಥಳನಾಮಾಧ್ಯನ ಮಹತ್ವದ

ಕೊಡುಗೆಯಾಗುತ್ತದೆ. ಭಾಷಿಕ ದೃಷ್ಟಿಯಿಂದ ಗುಲಬರ್ಗಾ ತಾಲೂಕಿನಲ್ಲಿ ಬರುವ ಕೆಲವು ಊರುಗಳನ್ನು ಈ ಘಟಕಗಳನ್ವಯ ವಿಂಗಡಿಸಿದುದನ್ನು ಹಾಗೂ ಅವು ರೂಪ ಹಾಗೂ ಧ್ವನಿ ವ್ಯತ್ಯಾಸ ಪಡೆದುದನ್ನು ಇಲ್ಲಿ ಕೆಲವು ಉದಾಹರಣೆಗಳನ್ನು ನೋಡುವದರ ಮೂಲಕ ತಿಳಿಯಬಹುದಾಗಿದೆ.

೧. ಊರು:ಇದು ಅಚ್ಚ ದ್ರಾವಿಡ ಪದ ಇಲ್ಲಿ ನಿರ್ದಿಷ್ಟ ಮತ್ತು ವಾರ್ಗಿಕ ಘಟಕಗಳು, ಸೇರುವಾಗ ಸ್ವರೈಕ್ಯ(**Assimilation**) ಹೊಂದುವುದನ್ನು ಗುರುತಿಸಬಹುದು.

   ನಾಗ+ಊರು=ನಾಗೂರು

   ಜೋಗಿ+ಊರು=ಜೋಗೂರು

೨. ಪುರ ಪುರದಿಂಧ ಕೊನೆಗೊಳ್ಳುವ ಸ್ಥಳಗಳು ಊರಿಗಿಂತ ಗಾತ್ರದಲ್ಲಿ ದೊಡ್ಡವು. ಸಾಮಾನ್ಯವಾಗಿ ಇವುಗಳ ಮಧ್ಯ ದೇವಾಲಯವಿರುತ್ತದೆ.

   ಕಮಲ+ಪುರ=ಕಮಲಾಪುರ

   ಹೀರಾ+ಪುರ=ಹೀರಾಪುರ

೩. ಹಳ್ಳಿ :- ಹಳ್ಳಿಯಿಂದ ಕೊನೆಗೊಳ್ಳುವ ಸ್ಥಳಗಳ ಹೆಸರಿನಂತೆ ಗಾತ್ರದಲ್ಲಿ ಚಿಕ್ಕದಾಗಿರುತ್ತದೆ.

   ನಾಗನ+ಹಳ್ಳಿ=ನಾಗನಹಳ್ಳಿ

   ಸೋಮನಾಥ+ಹಳ್ಳಿ=ಸೋಮನಾಥಹಳ್ಳಿ

   ಭಿಮ+ಹಳ್ಳಿ=ಭೀಮಹಳ್ಳಿ

   ನಡುವಿನ+ಹಳ್ಳಿ=ನಡನಳ್ಳಿ, ನಡ್ನಳ್ಳಿ

   ಇಲ್ಲಿ ಭೀಮಳ್ಳಿ ಹಾಗೂ ನಡ್ನಳ್ಳಿ ಜನತೆಯ ಸೌಲಭ್ಯಾಕಾಂಕ್ಷೆಗೆ ಒಳಗಾಗಿ ಈ ರೂಪ ಪಡೆದಿವೆ.

೪. "ಗ್ರಾಮ: ಗಾ.ಗೆ.ಗಿ" ಗ್ರಾಮಪದ ಸಂಸ್ಕೃತದ್ದು, ಇದು ಊರುಗಳ ಕೊನೆಗೆ ಬರುವಂತಹದ್ದು. ಈ ಗ್ರಾಮ ಗ್ರಾವ್ ಆಗುತ್ತದೆ. ಇಲ್ಲಿಯ ಅರ್ಧಸ್ವರವಾದವ್ ಆಡುಮಾತಿನಲ್ಲಿ ಉದುರಿ ಹೋಗಿ ಆಗ

ಉಳಿಯುವ ಗಾ+ಗೆ ಆಗುವದು. ಭಾಷೆಯಲ್ಲಿ ಜರುಗುವ ಸಹಜ ಕ್ರಿಯೆಯಾಗಿದೆ.

ಹೀಗೆ ರೂಪಗೊಂಡ ಕೆಲ ಊರುಗಳು ಇಲ್ಲವೆ.

ಕವಲ+ಗ್ರಾಮ=ಅಂಕಲಗಾಂವ್ =ಅಂಕಲಗಾ>ಅಂಕಲಗಿ.

ಹೀಗೆ ಊರ ಹೆಸರಿನ ಕೊನೆಗೆ ಬರುವ ಗ್ರಾಮಗಾವ್ ಆದುದನ್ನ :ಗಾ>ಗೆ ಹಾಗೂ ಗೆ>ಗಿ ಆದುದನ್ನು ನೋಡಿದೆವು.

೫. ಕೆಯ್-ಕೆ(ಗೆ) ಕಿ(ಗಿ) : ಕೆಲವು ಊರುಗಳ ಕೊನೆಗೆ ಬರುವ ಕೆಯ್ - ರೂಪಕ (ಗೆ) ಕೆ>ಕಿ(ಗಿ) ಆಗುವುದನ್ನು ನೋಡಬಹುದು. ಹಾಗರಗುಂಡ+ಕೆಯ್=ಹಾಗರಗುಂಡಕೆ(ಗೆ) ಹಾಗರ ಗುಂಡ ಕಿ(ಗಿ)>ಹಾಗರಗುಂಡಗಿ"

ಸಡಗರ + ಕೆಯ್ = ಸರಡಕೆ (ಗಿ) > ಸರಡಕಿ (ಗಿ) > ಸರಡಗಿ

ಜೀವಣ + ಕೆಯ್ = ಜೀಣಕೆ (ಗಿ) > ಜೀವಣ ಕಿ (ಗೆ) > ಜೀವಣಗಿ.

ಕಲಂಬರ + ಕೆಯ್ = ಕಲಂಬರಕೆ(ಗೆ) > ಕಲಂಬರ ಕಿ (ಗಿ) > ಕಲಂಬರಗಿ ಕಲಬರಗಿ > ಕಲಬುರಗಿ.

ಇಲ್ಲಿ ಸಬಿಂದುಕ ಅಬಿಂದುಕವಾಗಿದೆ. ಮತ್ತು 'ಅರ್ಧ ಸ್ವರೂಪವಾಗಿರುವ' ಯ್ ಉದುರುವುದು, ಆಗ ಉಳಿಯುವ ಕೆ (ಗೆ) > ಕಿ (ಗಿ) ಆಗುವುದು ಆಡು ಮಾತಿನಲ್ಲಿ ಸಹಜವಾಗಿದೆ.

೬. ಆಬಾದ:- ಇದು ಪರ್ಶಿಯನ ಪದ ಉರ್ದು ಭಾಷೆಯ ಪ್ರಭಾವದಿಂದ ಕನ್ನಡಕ್ಕೆ ಬಂದಂಥದು. ಆಬಾದ ಎಂದರೆ ಜನರು ವಾಸಿಸಲು ಯೋಗ್ಯವಾದ ಸ್ಥಳ ಎಂದರ್ಥ.

ಫರಹತ್ + ಆಬಾದ = ಫರಹತಾಬಾದ.

ಫಿರೋಜ + ಆಬಾದ = ಫಿರೋಜಾಬಾದ.

---

೧೫) ಡಾ.ವ್ಹಿ.ಜಿ.ಪೂಜಾರ - ಸಂಶೋಧನಾ ಲೇಖನಗಳು ಪುಟ-೭೩

೭. ಕಲ್ಲು:- ಕಲ್ಲದಿಂದ ಕೊನೆಗೊಳ್ಳುವ ಊರುಗಳು ಹೆಸರಿಡುವ ಮೊದಲನೇ ಘಟ್ಟವನ್ನು ಅಂದರೆ ಬಹು ಪ್ರಾಚೀನತೆಯನ್ನು ಸೂಚಿಸುತ್ತವೆ.

ತಡ + ಕಲ್ಲ = ತಡಕಲ್ಲು

ತೊಂಡ + ಕಲ್ಲು = ತೊಂಡಕಲ್ಲ.

೮. ಹಾಳ: ಇದು 'ಪೊಳಲು'ದಿಂದ ಬಂದಿದೆ ಪೊಳಲು ಎಂದರೆ ಪಟ್ಟಣ. ಕಾಲಾಂರದಲ್ಲಿ ಪ>ಹ ವ್ಯತ್ಯಾಸವಾಗಿ ಹೊಳಲು ಆಗಿದೆ. 'ಹೋಳಲು' ಬರಬರುತ್ತ ಜನತೆಯ ಸೌಲಭ್ಯಕಾಂಕ್ಷೆ ಹಾಗೂ ಪರಿಹಾರಾತ್ಮಕ ದೀರ್ಘಕರಣಕ್ಕೊಳಗಾಗಿ 'ಹಾಳ' ವಾದಂತೆ ತೋರುತ್ತದೆ.

ಭೀಮನ + ಪೋಳಲು (ಪ>ಹ) ಭಿಮನ ಹೊಳಲು > ಭೀಮನೊಳಲು ಭಿಮನಾಳ ಬಸವನ + ಪೊಳಲು (ಪ>ಹ) ಬಸವನ ಹೊಳಲು > ಬಸವನೊಳಲು ಬಸವನಾಳ.

೯. ವಾಡಿ ವಾಡಿ : ವಾಡ ಎಂದರೆ ಜನವಸತಿ ಸ್ಥಳ, ವಾಡಿ ಎಂದರೆ ಬಿಡಾರ, ವಾಸಸ್ಥಳವೆಂಬರ್ಥಗಳಿವೆ, ವಾಡ, ವಾಡಿ ವಾರ್ಗಿಕವನ್ನುಳ್ಳ ಊರುಗಳು ಈ ತಾಲೂಕಿನಲ್ಲಿ ಕಡಿಮೆ ಇರುವುದು ಕಂಡು ಬರುತ್ತದೆ.

ಅವು:-

ಬೋಳ + ವಾಡಿ = ಬೋಳವಾಡ

ಪಟ + ವಾಡಿ = ಪಡವಾಡ

ಗೊಬ್ಬರ + ವಾಡಿ = ಗೊಬ್ಬರವಾಡಿ

ಹೊಸದು + ವಾಡಿ = ಹೊಸವಾಡಿ

೧೦. ಕೆರೆ :- ಕೆರೆ ಸಮಿಪದಲ್ಲಿರುವ ಊರುಗಳು ಸಾಮಾನ್ಯವಾಗಿ ಕೆರೆ, ಗೆರೆ, ಗೇರಾ, ವಾರ್ಗಿಕರಣಗಳನ್ನು ಹೊಂದುವುದುಂಟು. ಇದಕ್ಕೆ ಜಲಪಾಚಿ ಸ್ಥಳನಾಮಗಳೆಂದು ಕರೆಯುವರು.

ತಾವರೆಯ + ಕೆರೆ = ತಾವರಗೆರೆ (ಕೆ>ಗೆ)

ತಾವರೆಗೆರಿ (ರೆ>ರಿ) ತಾವರಗೇರಾ (ರಿ >ರಾ)

೧೧. ಕುಂದ, ಕೋಟೆ : ಕುಂದವೆಂದರೆ ಬೆಟ್ಟ, ಗುಡ್ಡ, ದಿನ್ನೆ ಮುಂತಾದ ಎತ್ತರವಾದ ಪ್ರದೇಶಗಳ ಹತ್ತಿವಿರುವ ಊರುಗಳು ತಮ್ಮ ಹೆಸರಿನ ಉತ್ತರಾರ್ಧದಲ್ಲಿ 'ಕುಂದ' 'ಗುಂದ' ಎಂಬ ವಾರ್ಗಿಕವನ್ನು ಸಾಮಾನ್ಯವಾಗಿ ಹೊಂದಿರುತ್ತವೆ.

ಪೊಳಲು + ಕುಂದ = ಪೊಳಕುಂದ (ಪ > ಹ) ಹೊಳಕುಂದ

ಮೇಳ + ಕುಂದ = ಮೇಳಕುಂದ > ಮೇಳ ಕುಂದಾ

ಕುರಿ + ಕೋಟೆ = ಕುರಿಕೋಟೆ > ಕುರಿಕೋಟಾ

ಬೆಳೆ + ಕೋಟಾ = ಬೆಳಕೋಟೆ > ಬೆಳೆಕೋಟಾ.

೧೨. ಖೇಡ, ಖೇಡ, ಖರ್ವಡಗಳ ಪ್ರಸ್ತಾಪ 'ವಡ್ಡಾರಾಧನೆ' ಯಲ್ಲಿ ಬರುತ್ತದೆ. ಸುತ್ತಲೂ ಎತ್ತರವಾದ ಪ್ರಕಾರದ ಗೊಡೆಗಳುಳ್ಳ ಗ್ರಾಮವೇ ಬೇಡ ಈ ಗೋಡೆ ಕೊಟೇಯನ್ನು ಹೋಲುತ್ತದೆ.

ನೀಲು + ಖೇಡ = ನೀಲಖೇಡ

ಗಣಜಲ + ಖೇಡ = ಗಣಜಲಖೇಡ

ಸಾಂಸ್ಕೃತಿಕ ಅಧ್ಯಯನದಲ್ಲಿ ಸಂಸ್ಕೃತಿ ಮನುಷ್ಯನಲ್ಲಿ ಇರುವಂತೆ ಊರುಗಳಿಗೆ ಹೆಸರಿಡುವಾಗಲೂ ಆತ ಇದನ್ನು ಪ್ರದರ್ಶಿಸಿರುವುದನ್ನು ಇಂದು ಗುರುತಿಸುವ ಅಗತ್ಯವಿದೆ ಎಂದು ಡಾ.ಪೂಜಾರರ ಅಭಿಪ್ರಾಯವಾಗಿದೆ. ಅಲ್ಲದೇ ಅಧಿಕಾರವಿರುವವರರಿಗೆ ಹೆದರಿ ಸಾಮನ್ಯ ಜನ ಅವರಂತೆ ನಡೆದುಕೊಳ್ಳುವದು. ಸಹಜ ಮುಸ್ಲಿಂ ಆಳ್ವಿಕೆಯ ಅವಧಿಯಲ್ಲಿ ಈ ಭಾಗದ ಜನರು ಅವರ ಧರ್ಮ, ಸಂಸ್ಕೃತಿಯನ್ನು ಬಹಳಷ್ಟು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡು, ಎಷ್ಟೊ ಊರುಗಳಿಗೆ ಇರುವ ಹೆಸರುಗಳು ಉರ್ದುಮಯವಾಗಿವೆ. ಕೆಲ ಮುಸ್ಲಿಂ ರಾಜ, ರಾಣಿಯರ ಹೆಸರು ಹೊಂದಿರುವುದನ್ನು ನೋಡಬಹುದಾಗಿದೆ.

---

೧೬) ಡಾ.ವ್ಹಿ.ಜಿ.ಪೂಜಾರ – ಸಂಶೋಧನಾ ಲೇಖನಗಳು ಪುಟ-೭೫

ಉದಾ:– ಫಿರೋಜಾವಾದ, ಸುಲ್ತಾನಪೂರ, ಹೀರಾಪೂರ, ಮುಂತಾದವುಗಳು.

ಗುಲಬರ್ಗಾ ಎಂದೇ ಹೆಚ್ಚಾಗಿ ಕರೆಯಲ್ಪಡುತ್ತಿರುವ ಈ ಊರಿನ ಮೂಲ ಹೆಸರು ಕಲಬುರ್ಗಿ, ಕಲಬುರ್ಗಿ ಕ್ರಿ.ಶ.೧೧೯೮ ರ ಹುಣಸೀ ಕಲಬುರ್ಗುು. ಹಡಗಲೀ ಶಾಸನದಲ್ಲಿ ಇದರ ಹೆಸರು 'ಕಲಂಬುರಗೆ' ಎಂದು ನಿರ್ದೇಶಿತವಾಗಿದೆ.

ಅನಂತರ ಕ್ರಿ.ಶ.೧೪೫೯ ರ ಶಿರವಾಳದ ಒಂದು ಶಿಲಾಶಾಸನದಲ್ಲಿ "ಶ್ರೀಮತ್ ಕಲಂಬುರಗಿ ನಾಡೋಳ ಗೋ" ಎಂಬ ನಿರ್ದೇಶನವಿದೆ.

ಈ ಹೆಸರು ನಿಜಾಂ ಅರಸನ ಕಾಲಕ್ಕೆ ಪಾರಸೀಕರಣಗೊಂಡು ಮುಸ್ಲಿಂರ ಆಡಳಿತ ಹಾಗೂ ಪ್ರಭಾವಕ್ಕೊಳಗಾಗಿ ಗುಲಬರ್ಗಾ ಎಂದಾಯ್ತು ಎಂದು ವಿದ್ವಾಂಸರು ಅರ್ಥೈಸುತ್ತಾರೆ ಗುಲಬರ್ಗಾ ತಾಲೂಕಿನ ಸ್ಥಳನಾಮಗಳ ಕುರಿತಾದ ಭಾಷಿಕ ಹಾಗೂ ಸಾಂಸ್ಕೃತಿಕವಾದ ಅಧ್ಯಯನವನ್ನು ಡಾ.ವ್ಹಿ.ಜಿ ಪೂಜಾರರು ಬಹಳ ದೀರ್ಘವಾಗಿ ಮತ್ತು ವಿಶ್ಲೇಷಶಾತ್ಮಕವಾಗಿ ಚಿತ್ರಿಸಿದ್ದಾರೆ.

ಪ್ರಸ್ತುತ ಕೃತಿಯ ಮತ್ತೊಂದು ಲೇಖನದಲ್ಲಿ ಡಾ.ಸಂಗಮೇಶ ಸವದತ್ತಿ ಮಠರವರ ಈಶಾನ್ಯ ಕರ್ನಾಟಕದ ಕನ್ನಡ ಭಾಷೆಯ ವಿಶ್ಲೇಷಣೆಯನ್ನು ಕಾಣಬಹುದಾಗಿದೆ.

ಈ ಲೇಖನವು ಈಶಾನ್ಯ ಕರ್ನಾಟಕ ಭಾಗದ ಕನ್ನಡ ಭಾಷೆಯ ಕುರಿತು ಸಂಶೋಧನಾ ವಿವರಣೆಯನ್ನು ಒಳಗೊಂಡಿದೆ. ಕನ್ನಡದ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಸಂಗತಿಗಳು ಹೆಚ್ಚಾಗಿ ಈಶಾನ್ಯ ಕರ್ನಾಟಕದ ಸುತ್ತ ಬೆರಳು ತೋರುವುದರಿಂದ ಕನ್ನಡದ ಕನ್ನೆನೆಲ, ಮೂಲ ನೆಲೆ ಇಲ್ಲಿಯದೇ ಎಂದು ಹೇಳಲು ಪ್ರೇರೆಪಿಸುತ್ತದೆ. ಈ ಭಾಗವು ತೆಲಗು ಮತ್ತು ಮರಾಠಿ ಗಡಿ ಭಾಗಗಳನ್ನೊಳಗೊಂಡು, ಆ ಭಾಷೆಗಳ ಒತ್ತಡಕ್ಕೂ ಒಳಗಾಗಿ, ಉರ್ದುವಿನ ಕತ್ತಿ ತಲೆ ಮೇಲೆ, ಈ ಎಲ್ಲವುಗಳ ಹೊಡೆತಕ್ಕೆ ಕನ್ನಡ ಭಾಷೆ ಸಿಲುಕಿದರಿಂದ ತನ್ನ ಮೂಲ ಸೊಗಡನ್ನು ಕಳೆದುಕೊಂಡ ವಿಶಿಷ್ಟ ಪ್ರಾದೇಶಿಕ ಉಪಭಾಷೆಯಾಗಿ ಮಾತ್ರ ಉಳಿಯಿತು.

ಅಲ್ಲದೇ ಪಶ್ಚಿಮ :

ದಕ್ಷಿಣ ಭಾಗದ ಕೃಷ್ಣ ನದಿ ಪ್ರದೇಶ ಬಳ್ಳಾರಿ, ಧಾರವಾಡ ಪ್ರದೇಶದೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದರಿಂದ ಕೃಷ್ಣಯ ಉತ್ತರ ಭಾಗದ ಕನ್ನಡದಷ್ಟು ಹೆಚ್ಚು ಸ್ಥಿತ್ಯಂತರ ಹೊಂದಲು ಅವಕಾಶವಾಗಲಿಲ್ಲ. ಹೀಗಾಗಿ ಮೊಗಲಾಯಿ ಕನ್ನಡ ಎಂಬುದು ಬೀದರ ಕಲಬುರ್ಗಿ ಜಿಲ್ಲೆಯ ಕನ್ನಡಕ್ಕೆ ಹೆಚ್ಚು ಅನ್ವಯಿಸುತ್ತದೆ.

ರಾಯಚೂರು ಜಿಲ್ಲೆಯ ಕನ್ನಡ ಸ್ವಲ್ಪ ಮೊಗಲಾಯಿ, ಕನ್ನಡಕ್ಕಿಂತ ಭಿನ್ನವಾಗಿ ನಿಲ್ಲುತ್ತದೆ. ಹೈದ್ರಾಬಾದ ಕರ್ನಾಟಕವನ್ನು ಒಟ್ಟಾಗಿ ಪರಿಗಣಿಸಿದರೆ ಉರ್ದು ಪ್ರಭಾವ ಬೀದರಿನಲ್ಲಿ ಅತೀ ಹೆಚ್ಚು ಕಲಬುರ್ಗಿಯಲ್ಲಿ ಹೆಚ್ಚು ರಾಯಚೂರಿನಲ್ಲಿ ಸಾಧರಣವಾಗಿ ಕಂಡುಬರುತ್ತದೆ.

ಒಟ್ಟಿನಲ್ಲಿ ರಾಯಚೂರು ಜಿಲ್ಲೆಯ ಕನ್ನಡ ಉತ್ತರ ಕರ್ನಾಟಕದ ಧಾರವಾಡ, ವಿಜಾಪುರ ಕನ್ನಡ ಹಾಗೂ ಬೀದರ ಕಲಬುರ್ಗಿ ಕನ್ನಡ ಇವುಗಳ ಮಿಶ್ರಣ ಭಾಷೆಯಂತಿದೆ ಹೆಚ್ಚಿನ ಅಂಶಗಳೆಲ್ಲ ಧಾರವಾಡ ಉಪಭಾಷೆಯನ್ನೇ ಹೋಲುತ್ತದೆ. ತೆಲುಗು ಮಿಶ್ರಣದಿಂದಾಗಿ ರಾಯಚೂರು ತಾಲೂಕು ಮಾತ್ರ ಸ್ವಲ್ಪ ಭಿನ್ನ ಎನಿಸುತ್ತದೆ. ದೇವದುರ್ಗ ತಾಲೂಕವಂತೂ ಪ್ರತಿಶತ ೬೦ ರಷ್ಟು ಕಲಬುರ್ಗಿ ಕನ್ನಡವನ್ನಳವಡಿಸಿಕೊಂಡಿದೆ.

ಈ ರೀತಿಯಾಗಿ ಈಶಾನ್ಯ ಕರ್ನಾಟಕ ಕನ್ನಡ ಭಾಷೆಯ ವೈಶಿಷ್ಯ ಇಲ್ಲಿನ ಹಳ್ಳಿಗಳ ಭಾಷಾ ಸೊಗಡನ್ನು ಡಾ.ಸಂಗಮೇಶ ಸವದತ್ತಿ ಮಠರವರು ಸವಿಸ್ತಾರವಾಗಿ ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

ಪ್ರಸ್ತುತ ಕೃತಿಯ ಇನ್ನೊಂದು ಲೇಖನ ಡಾ.ದೇವೆಂದ್ರಕುಮಾರ ಹಕಾರಿಯವರ ಚಕ್ಕಿನಾಮ ಹಾಡುಗಳು ಒಂದು ಟಿಪ್ಪಣಿ.

ಭಾರತ ಅಗಣಿತ ಜನಾಂಗಗಲ ಮತ್ತು ಭಾಷೆಗಳ ತವರು ಯಾವುದೇ ಪ್ರದೇಶದ ಭಾಷೆಯನ್ನು ವಿಶೇಷತೆ ಲಂಬಾಣಿ ಭಾಷೆಯ ಹಾಡುಗಳನ್ನು ಗಮನಿಸಿದರೆ ಅದಕ್ಕೆ ತನ್ನದೇ ಆದ ಭಯ, ಧಾಟಿ, ಆಯಾ ಜನಪದ ಸಮುದಾಯ

ಅಗಣಿತ ಜೀವನ ಅನುಭವಗಳ ಒಂದು ಉಗ್ರಾಣವಾಗಿರುವುದು ಕೂಡ ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಈಗ ನಾಲ್ಕು ದಶಕಗಳ ಹಿಂದೆ ಗುಲಬರ್ಗಾ, ಬೀದರ ರಾಯಚೂರು ಕೆಲವು ಭಾಗಗಳಲ್ಲಿ ಕೇಳಿ ಬರುತ್ತಿದ್ದ ಜನಪದ ಹಾಡು, ಜನಪದ, ಗಾದೆ, ನುಡಿಗಟ್ಟು ಇತ್ಯಾದಿ ಈಗ ವಿರಳ ಅಂಥವುಗಳಲ್ಲಿ ಚಕ್ಕೀನಾಮೆ, ಬೀಸುಕಲ್ಲಿನ ಹಾಡು ಒಂದು ವಿರಳವಾದ ಪ್ರಕಾರವಾಗಿದೆ ಅದು ಕೇವಲ ದಖನಿ ಭಾಷೆಗೆ ಮಾತ್ರ ಸೀಮಿತವಾಗಿದೆ.

ಈ ಟಿಪ್ಪಣಿಯಲ್ಲಿ ಬಂದಿರುವ ಚಕ್ಕಿನಾಮೆ ಹಾಡುಗಳನ್ನು ಬೀದರನಲ್ಲಿ ಕೇಳಿರುವ ಕೆಲವು, ಗುಲಬರ್ಗಾದಿಂದ ಸಂಗ್ರಹಿಸಿದ ಕೆಲವು ಮತ್ತು ಬಾಗಲಕೋಟೆಯ ಅಧ್ಯಾಪಕರಿಂದ ಕೆಲವನ್ನು ಸಂಗ್ರಹಿಸಿ ರಚಿಸಲಾಗಿದೆ.

ದಖನಿ ಚಕ್ಕಿನಾಮೆಯನ್ನು ದಾಖಲಿಸುವ ಮೊದಲು ಕನ್ನಡದ ಒಂದು ಪದ್ಯವನ್ನಿಲ್ಲಿ ಲೇಖಕರು ಹೇಳುತ್ತಾರೆ.

"ಮುಕ್ಕೀಗಿ ಮೊದಲ ಮಾದೇವ್ರ ನೆನದೇನ

ಉಕ್ಕಿ ಬಂದಿತ ಹಿರಿ ಹೊಳಿಯ ಸುಳಿಯಾಗ

ಸಿಕ್ಕಿ ಬಂದೀದ ಹುದಲಾಗ"

ಈ ಪದ್ಯದಲ್ಲಿ ಮಾದೇವನ ನೆನೆಯುವುದು ಮುಖ್ಯವಾಗಿದೆ. ಜೀವನದ ಅನೇಕ ಸಂಕಷ್ಟಗಳ ಸುಳಿಯಲ್ಲೀ ಸಿಲುಕಿದ ಮನುಷ್ಯ ಅದರಿಂದ ಪಾರಾಗಿ ಬರುವಂತೆ ಹುದಲಲ್ಲಿ.

ಸಿಕ್ಕಿದವನೂ ಪಾರಾಗಿ ಬರುತ್ತಾನೆ. ದಖನಿ ಭಾಷೆಯ ಚಕ್ಕಿನಾಮೆ ದ್ವಿಪದಿಗಳ ಪದ್ಯವನ್ನಿಲ್ಲಿ ನೋಡಬಹುದು.

"ಬಿಸ್ಮಿಲ್ಲಾ ಬೋಲ್‌ಕೋ ಪೈಲಾಪುಕ್ಕಾ ಭಾಯಿಜೀ

ಬರಕತ್ ದ್ಯೋ ಇಲಾಹಿಮೆರಿ ಸಂಯ್ಯಾಕಿ ಕಮಾಯಿಜಿ"

ಇದರ ಅರ್ಥ (ದೇವರೇ ನಿನ್ನ ಸ್ಮರಣೆಯನ್ನು ಮಾಡುತ್ತ ಮೊದಲ ಮುಕ್ಕ ಹಾಕಿದ್ದೇನೆ ದೇವರೆ ಕರುಣೆ ತೋರು, ಇದು ನನ್ನ ಗಂಡನ ದುಡಿಮೆ) ಎಂದು ಹೆಣ್ಣು ಮಗಳೊಬ್ಬಳು ತಾನು ಹಾಕುವ ಧಾನ್ಯ ಅವಳ ಗಂಡನ ದುಡಿಮೆಯ ಫಲ, ಶ್ರಮದಗಳಿಕೆ. ಆದ್ದರಿಂದ ದೇವರು ಕರುಣಿಸಲಿ, ಹರಸು ನೀಡಲಿ ಶ್ರಮದಗಳಿಕೆ ದೇವರಿಗೆ ಖಂಡಿತವಾಗಿ ಮೆಚ್ಚಿಗೆಯಾಗುತ್ತದೆಂದು ಆಕೆಯ ಆತ್ಮವಿಶ್ವಾಸ. ಇದೇ ಆ ಪ್ರಾಥನೆಯ ಆಶಯ ಕೂಡಾ ಆಗಿದೆ.

ಅದರಂತೆಯೇ ತನಗಾಗಿ ಚಿನ್ನದ ಸುತ್ತೋಲೆಗಳನ್ನು ತನ್ನನಲ್ಲ ತುಂಬ ಪ್ರೀತಿಯಿಂಬ ಮಾಡಿಸಿ ತಂದಿದ್ದು, ಕಿವಿಯಲ್ಲಿ ಅದನ್ನು ಹಾಕಿಕೊಳ್ಳುವಾಗ ಆದ ನೋವುಯಾತನೆ ಹಾಕಿಸಿಕೊಂಡ ಮೇಲೆ ತನ್ನ ಪ್ರೀಯತಮ ನೋಡಿ ಸಂತೋಷ ಪಟ್ಟಿದ್ದು ನೋವು ನಲಿವು ಒಡನೊಡನೆ ನುಗ್ಗಿ ಬಂದುದ್ದರಿಂದ ಹೂವಿನ ಪಕಳೆಯಂಥ ಕಿವಿಗೆ ಎಷ್ಟು ಕಷ್ಟವಾದರೂ ಸಹಿಸಿಕೊಂಡು.

‘ಸೋನಾ ಚನ್ನನೇ ಕೊ ಕಾನಾಂ ಛೇದ್ನಾ ಪಡ್ತೆಂ

ಪೂಲ ಜೈಸೆ ಪಂಖ್ಯುಕೊ ಕ್ಯಾಕ್ಯಾ ಸೊಸ್ನ ಪಡ್ತೆಂ’

ಎಂದು ಹೇಳುತ್ತಾನೆ. ಬಂಗಾರ ವಾಲಿ ಹಾಕೂದಂದ್ರ ಕಿವಿ ಚುಚ್ಚ ಬೇಕ ಹೂವಿನ ಪಕಳೀ ಹಂತಾವು ಏನೇನು ಸೊಸಬೇಕು.

ಹಿಗೇ ಚಕ್ಕಿನಾಮೆಗಳು ಹೆಣ್ಣು ಮಕ್ಕಳ ನೋವು ನಲಿವಿನ ಹೃದಯ ಸ್ಪರ್ಶಿಸಂವೇದನೆಗಳ ವ್ಯಕ್ತರೂಪಗಳು ಎಂದು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ.

ಡಾ. ಎಂ.ಎಸ್ ಲಕ್ಠೆಯವರ ಮತ್ತೊಂದು ಲೇಖನದಲ್ಲಿ ಕವಲೆತ್ತಿನದರ ಬದುಕನ್ನು ವಿವರಣಾತ್ಮಕವಗಿ ಚಿತ್ರಿಸಲಾಗಿದೆ. ಮನುಷ್ಯನಿಗೆ ಬದುಕಲು ಆಹಾರ ಅವಶ್ಯಕವಿರುವುದರಿಂದ ಆತ ದುಡಿದೋ ಅಥವಾ ಬೇಟೆಯಾಡಿಯೋ ಅಥವಾ ಯಾವುದಾದರೊಂದು ವೇಷಹಾಕಿ ಪಶು ಪಕ್ಷಿಗಳನ್ನು ಅಟವಾಡಿಸಿಕೊಂಡು ಜೀವನೋಪಾಯಕ್ಕೆ ಹಲವಾರು ವೃತ್ತಿಗಳನ್ನು ಹುಡುಕಿಕೊಳ್ಳುತ್ತಾನೆ. ಹೀಗೆ ಅಲ್ಲಲ್ಲಿ ಕೆಲಸ ಮಾಡಿ ಬದುಕುವ ನಾಗರಿಕ ಜನಾಂಗಗಳಲ್ಲಿ ‘ ಗೊಲ್ಲ’ ಜನಾಂಗವೂ ಒಂದಾಗಿದೆ.

ಈ ಜನಾಂಗವು ಬಹಳ ಬಡತನದವರಾಗಿದ್ದು, ಇವರು ಆಕಳು, ಕುರಿ, ಸಾಕಿ, ಗುಡ್ಡಗಂವ್ವರ ತಿರುಗುತ್ತ ಒಂದು ಸ್ಥಳದಿಂದ ಇನ್ನೋಂದು ಸ್ಥಳಕ್ಕೆ ತಿರುಗುತ್ತಿರುತ್ತಾರೆ. ಇನ್ನು ಕೆಲವರು ಹಾಲು, ಬೆಣ್ಣೆ ಮಾರಿಯೋ, ರೋಗ ಪರೀಕ್ಷೆ, ಸಂದು-ವಾತ-ವಾಯುವಿಗೆ ಔಷದ ಎಂದು ಬೀದಿ ಬೀದಿ ತಿರುಗಿ ವನಸ್ಪತಿ ಮಾರುವುದು ಮತ್ತೆ ಹಲವಾರು ಮಂಗ, ಕರಡಿ, ಕಪಿಲೆ ಬಸವಣ್ಣನಿಗೆ ನೀಡಿ ಆಟವಾಡಿ ಸುತ್ತ ಹೊಟ್ಟೆ ತುಂಬಿಸಿಕೊಳ್ಳುವರು, ಎಂದು ಅವರ ವೃತ್ತಿ ಜೀವನವನ್ನು ಕುರಿತು ಡಾ. ಲಠ್ಠೆಯವರು ಹೇಳುತ್ತಾರೆ.

ಗೊಲ್ಲರ ಪೂರ್ವೇತಿಹಾಸ :

ಕರ್ನಾಟಕದಲ್ಲಿರುವ ಗೊಲ್ಲರು ಮೂಲತ: ಆಂಧ್ರ ಪ್ರದೇಶದವರೆಂದು ಅವರು ಮಾತನಾಡುವ ಮಾತೃಭಾಷೆಯಾದ ತೆಲುಗು ಭಾಷೆಯಿಂದ ತಿಳಿಯಬಹುದಾಗಿದೆ. ಉತ್ತರ ಹಿಂದುಸ್ತಾನದಿಂದಲೂ ಕೆಲವರು ವಲಸೆ ಬಂದರೆಂದು ಇವರು ಹೆಚ್ಚಾಗಿ ಹಿಂದಿ ಮಾತನಾಡುವದರಿಂದ ತಿಳಿಯಬಹುದು. ಕರ್ನಾಟಕ, ಆಂಧ್ರ ಮಹಾರಾಷ್ಟ್ರದಲ್ಲಿಯೂ ಈ ಗೊಲ್ಲ ಜನಾಂಗದ ಅಲೆದಾಟ ಹೆಚ್ಚಾಗಿರುವುದರಿಂದ, ಇವರನ್ನು ಅಲೆಮಾರಿ ಜನಾಂಗದವರೆಂದು ಕರೆಯುವವಾಡಿಕೆ.

ಗೊಲ್ಲ ಜನಾಂಗದ ಪಂಗಡಗಳು:

ಗೊಲ್ಲರಲ್ಲಿ ಪ್ರಮುಖವಾಗಿ ಎರಡು ಪಂಗಡಗಳಿರುತ್ತವೆ. ಹೊಲಗದ್ದೆಗಳಲ್ಲಿ ಕೆಲಸ ಮಾಡಿಕೊಂಡಾಗಲಿ, ಅರಸನ ಬೊಕ್ಕಸದ ಇಲ್ಲವೆ ಬೀಗ ಮುದ್ರೆ ಕಾರ್ಯಕ್ಕೆಕೊಂಡಾಗಲಿ ಇವರು ಬದುಕುವರು.

ಹೀಗೆ ಜೀವಿಸುವ ಗೊಲ್ಲರನ್ನು ಊರುಗೊಲ್ಲರೆಂದೂ ಕಾಡುಗಳಲ್ಲಿ ಕುರಿ, ಆಕಳು ಕಾಯುತ್ತ ಬೇಟೆಯಾಡುತ್ತಾ ಉಪ ಜೀವಿಸುವ ಗೊಲ್ಲರಿಗೆ ಕಾಡುಗೊಲ್ಲರೆಂದೂ ಕರೆಯುತ್ತಾರೆ.

ಕವಲೆತ್ತಿನವರು ಹೆಸರಿನ ಔಚಿತ್ಯ:

ಕವತಿ ಎತ್ತಿನವರು ಕವಲೆತ್ತಿನವರು ಇಲ್ಲಿಯ ಸಂಸ್ಕೃತದ 'ಕಪಿಲೆ' ಶಬ್ದವು 'ಕವಿತೆ' ಎಂದು ತದ್ಭವ ರೂಪವಾಗಿರುತ್ತದೆ. ಕವೆಲೆಗೆ ಬೂದಿ ಬಣ್ಣದ ಆಕಳು (A Brown cow) ಎಂಬ ಅರ್ಥವಿದೆ ಕಪಿಲೆ ಎತ್ತು ಅಂದರೆ ಬೂದಿ ಬಣ್ಣದ ಆಕಳು ಮತ್ತು ಎತ್ತು ಎಂದು ಅರ್ಥ. ಗ್ರಾಮಿಣ ಜನರು ದೇವರಿಗೆ ಬಿಟ್ಟು ಆಕಳನ್ನು ಕಪಲಿ (ಕಪಿಲೆ–ಕವಳೆ) ಎಂದು ಕರೆಯುವುದುಂಟು ಹೆಣ್ಣು ಕರು ಇದ್ದರೆ ಅದನ್ನು ಕಪಲಿ ಎಂದೂ ಗಂಡು ಹೋರಿ ಇದ್ದರೆ ಅದಕ್ಕೆ 'ಗೂಳಿ' 'ಬಸವ' ಎಂದು ಕರೆಯುವ ವಾಡಿಕೆ ಇಂಥ ಹೋರಿ ಆಕಳುಗಳನ್ನು ತಂದು ಅವುಗಳಿಗೆ ತರಬೇತಿ ನೀಡಿ, ಆಟವಾಡಿಸುತ್ತ ಹೊಟ್ಟೆ ಹೊರೆದುಕೊಳ್ಳುವ ವೃತ್ತಿಕಾರವನ್ನು ಕವಲೆತ್ತಿನವರು ಎಂದು ಕರೆಯುತ್ತಾ ಬರಲಾಗಿದೆ.

ಕವಲೆತ್ತಿನವರ ಆಹಾರ:

ನರಿ, ಮೀನು, ಮೊಲ, ಕುರಿ, ಕೋಳಿಯ ಮಾಂಸವನ್ನು ಇವರು ತಿನ್ನುತ್ತಾರೆ. ಕುಲ, ಮತದ ಭೇದವಿಲ್ಲದೆಯೆ ಎಲ್ಲರ ಮನೆಗೆ ಬಿಕ್ಷೆಗೆ ಹೋಗಿ ತಂದ ಆಹಾರವನ್ನು ಉಣ್ಣುತ್ತಾರೆ.

ಕವಲೆತ್ತಿನವರ ಗುರುವು ವರಂಗಲ್ಲಿ ಜಿಲ್ಲೆಯ (ಆಂಧ್ರ) ನಾಲಗೊಂಡಾದಲ್ಲಿರುವರೆಂದೂ ಅವರು ಕನಿಷ್ಠ ಪಕ್ಷ ಮೂರು ವರ್ಷಕ್ಕೊಮ್ಮೆ ಇವರಿದ್ದಲ್ಲಿಗೆ ಬಂದು ಕಾಣಿಕೆ ಸ್ವೀಕರಿಸಿ ಆಶೀರ್ವದಿಸಿ ಹೋಗುತ್ತಾರೆ.

ಇವರು ದೇವರ ಶ್ರೀ ಶೈಲದ ಮಲ್ಲಿಕಾರ್ಜುನ, ತುಳಜಾಪುರದ ಅಂಬಾಭವಾನಿ, ತಿರುಪತಿಯ ವೆಂಕಟರಮಣ ಮೊದಲಾದ ದೇವರ ಪ್ರತಿಮೆಗಳನ್ನು ಇಟ್ಟು ಪೂಜಿಸುವರು.

ಇವರ ವಿಧಿ–ಕರ್ಮಗಳನ್ನು ಹೇಳುವದಾದರೆ ಒಬ್ಬನು ಬೇಕಾದಷ್ಟು ಲಗ್ನವಾಗಬಹುದು. ಉಡಕಿ ಪದ್ಧತಿಯಾ ಜಾರಿಯಲ್ಲಿದೆ. ಸೋಡ ಪತ್ರಕೊಡುವ ಪದ್ದತಿ ಇಲ್ಲ. ಮದುವೆಯ ಕಾಲಕ್ಕೆ ಗಂಡಿನವರು ಮೂರು ಊಟ ಮತ್ತು

ಹೆಣ್ಣಿನವರು ಎರಡು ಊಟ ಮತ್ತು ಹೆಣ್ಣುನವರು ಎರಡು ಊಟ ಕೊಡುವ ಪದ್ಧತಿ ಇದೆ. ಊಟಕ್ಕೆ ಮಾಂಸ, ಶಾಖಾಹಾರ, ಕೊನೆಗೆ ಮಧ್ಯವು ಇರುವುದು.

ಇವರಲ್ಲಿ ಹೆಣಗಳನ್ನು ಹುಗಿಯುತ್ತಾರೆ ಮುಸಲ್ಮಾನರಂತೆ ತಗ್ಗು, ತೋಡಿ, ಮಲಗಿಸಿ ಮಣ್ಣು ಮುಚ್ಚುತ್ತಾರೆ. ಆದರೆ ಶಸ್ತ್ರಗೊಲ್ಲರು ವೀರಶೈವ ಹಾಗೆ ಆಳ ತಗ್ಗು ತೋಡಿ ಅಲ್ಲಿ ಒಳಗೆ ಮಾಡ ಮಾಡಿ ಅದರೊಳಗೆ ಹೆಣವನ್ನು ಕೂಡ್ರಿಸಿ ಮಣ್ಣು ಮುಚ್ಚುತ್ತಾರೆ.

ಇವರು ಕವಲೆತ್ತಾಡಿಸಲು ಹೋಗುವಾಗ ಬೆಕ್ಕು ಕಾಗೆ ಅಡ್ಡ ಬಂದರೆ ಅಪಶಕುನ ಎಂದು ಸ್ವಲ್ಪ ನಿಂತು ಮುಂದೆಸಾಗುತ್ತಾರೆ. ಇವರ ವೇಷ-ಭೂಷಣ ಅಷ್ಟೇನೂ ಭಾರಿಯಾಗಿ ಕಂಡು ಬಂದಿರುವುದಿಲ್ಲ. ದಕ್ಷಿಣ ದೇಶದವರಂತೆ ಗಂಡಸರು ಒಮದು ಧೂತರು, ಅಂಗಿ, ಕೋಟು, ರುಮಾಲು ಸುತ್ತಿರುತ್ತಾರೆ. ಮೇಲೆ ಒಂದು ಸೆಲ್ಲೊ ಹೊತ್ತು, ಕೈಯಲ್ಲಿ ಹಿತ್ತಾಳಿ, ತಾಮ್ರ ಇಲ್ಲವೆ ಬೆಳ್ಳಿಯ ಉಂಗುರಗಳನ್ನು ಧರಿಸುತ್ತಾರೆ. ಹೆಂಗಸರು ಬಲಕ್ಕೆ ಸೆರಗು ಹಾಕಿ ಸೀರೆ ಉಡುತ್ತಾರೆ. ಕುಬಸ ತೊಡುತ್ತಾರೆ. ಇವರೆಲ್ಲ ಜನರಿಂದ ಬೇಡಿ ಪಡೆದ ಬಟ್ಟೆಗಳನ್ನೆ ತೊಟ್ಟುಕೊಂಡು, ತಮ್ಮ ಎತ್ತು-ಆಕಳಿಗೂ ಝೂಲು ಹಾಕುತ್ತಾರೆ.

ಕವಲೆತ್ತಿನವರ ಆಟದ ವಿಧಾನದಲ್ಲಿ ಆಟ ಆಡಿಸುವವನು ಆಟಾ ಮಾಡತಿ ಎನಂತಿ? ಎಂದು ಕೇಳಿದಾಗ ಎತ್ತು ಗೋಣು ಹಾಕುತ್ತದೆ. ' ಗೌಡ್ರು ದಾನಾ ಕೊಡೋ ಕೈ ತೋರಿಸು, ಎಂದಾಗ ಅದು ಬಲಗಾಲನ್ನೆತ್ತುತ್ತದೆ. 'ಪಾಪದ ಕೈತೋರಿಸು' ಅಂದಾಗ ಎಡಗಾಲು ತೋರಿಸುತ್ತದೆ.

'ಮಕ್ಕಳ ಸಂತಾನ ಹೆಚ್ಚಾಗಲಿ, ಜೋಗುಳದ ಹಾಡು' ಎಂದಾಗ ಕವಲೆತ್ತು ನಾಲಿಗೆ ತೆಗೆಯುತ್ತದೆ. ಹೀಗೆ ಆಟ ಆಡಿಸುವಾಗ ಮನೆಯವಳು ಕಾಳು ಇಲ್ಲ ಬಟ್ಟೆ ಕೊಟ್ಟರೆ.

"ಗೌಡ್ರಿಗೆ ಹರಕ್ಯಾಗ್ಲಿ, ಕುಡಾವ್ರು ತಾಯ್ತಂದಿ, ಕುಡಲಾರದವ್ರು ತಾಯ್ತಂದಿ ಬಂದ ಮನಿಗಿ ಹತ್ತ ಮನಿ ಆಗ್ಲಿ ನಮಗ ಯಾವಾಗ ಬಂದ್ರೂ ಹಿಂಗೆ ಕೊಡೊಹಾಂಗ ಆಗ್ಲಿ, ಗೌಡ್ರಗೆ ಗೌಡ್ತಿಗೆ ಹರಕಿ ಮಾಡು" ಎಂದಾಗ ಕವಲೆತ್ತು ಬಂದು ಕಾಲೂರಿ ತಲಿ ಕೆಳಗೆ ಹಾಕಿ ನಮಸ್ಕಾರ ಮಾಡುತ್ತದೆ.

ಕಲೆಯ ಪ್ರಯೋಜನವನ್ನು ಡಾ.ಲಕ್ಕೆಯವರು ಈ ರೀತಿಯಾಗಿ ಹೇಳುತ್ತಾರೆ. ಕವಲೆತ್ತಿನ ಆಟ ಆಡಿಸುವವರಿಗೆ ಹೊಟ್ಟೆಗೆ ರೊಟ್ಟಿ, ಮೈಗೆ ಬಟ್ಟೆ ವೆಚ್ಚಕ್ಕೆ ಹೊನ್ನು, ದನ-ಕರುಗಳಿಗೆ ಮೇವು ದೊರಕುತ್ತದೆ. ಆಟವನ್ನು ನೋಡುವವರಿಗೆ ಮನರಂಜನೆ ದೊರೆತು. ಭಾವುಕರ ರೋಗರುಜಿನಗಳು ದೂರಾಗುತ್ತವೆ. ನಂಬಿದವರಿಗೆ ಮಳೆ ಬರುತ್ತದೆ. ಮಕ್ಕಳು- ಮರಿ ಆಗುತ್ತವೆ. ಬೆಳೆಗಳು ಸರಿಯಾಗಿ ಬೆಳೆಯುತ್ತವೆ ಫಲ ದೊರಕುತ್ತದೆ, ಜನಪದ ಕಲೆ ಉಳಿದುಕೊಂಡು ಬರುತ್ತದೆ.

ಇಂಥ ಒಂದು ಜನಪದ ಕಲೆಯಾದ ಕವಲೆತ್ತಿನವರ ಕುರಿತು ಸವಿಸ್ತಾರವಾಗಿ ವಿವರಣಾತ್ಮಕವಾದ ಚಿತ್ರಣವನ್ನು ಇಲ್ಲಿ ಚಿತ್ರಿಸಲಾಗಿದೆ. ಪ್ರಸ್ತುತ ಕೃತಿಯ ಮತೊಂದು ಸಂಶೋಧನಾ ಲೇಖನ ಕನ್ನಡ ಬೀದಿ ಬಯಲಾಟಗಳು ಡಾ. ವೀರಣ್ಣ ದಂಡೆಯವರು ಹೆಸರು ಹೆಚ್ಚಾಗಿ ಜಾನಪದ ಕ್ಷೇತ್ರದಲ್ಲಿ ಕಂಡು ಬರುತ್ತದೆ. ಹೈದ್ರಾಬಾದ ಕರ್ನಾಟಕ ಭಾಗದ ಜಾನಪದ ವಿದ್ವಾಂಸರು ಸಂಶೋಧಕರ ಸಾಲಿನಲ್ಲಿ ಡಾ. ದಂಡೆಯವರು ನಿಲ್ಲುತ್ತಾರೆ. ಅವರು ಹೇಳುವಂತೆ, ಜಾನಪದದ ಅತ್ಯಂತ ಹಳೆಯ ರೂಪಕಗಳನ್ನು ತನ್ನಲ್ಲಿ ಹಿಡಿದಿಟ್ಟುಕೊಂಡ ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳು, ಸಂಶೋಧಕರಿಗೆ ಅನೇಕ ವಸ್ತು, ಸಂಗತಿಗಳನ್ನೊದಗಿಸುವಂತೆ ಕನ್ನಡ ಬಯಲಾಟಗಳಿಗೂ ಇಲ್ಲಿಯ ಕೊಡುಗೆ ಬಹಳ ಮಹತ್ವದ್ದು.

ಬೀದಿ ಬಯಲಾಟಗಳು ಎಂದಾಗ, ಸಮಾನ್ಯವಾಗಿ ಅವು ಬೀದಿಯ ಮೇಲೆ ಪ್ರಯೋಗಗೊಳ್ಳುವವಾಗಿರುತ್ತವೆ. ಇವು ಭಾರತದಲ್ಲಿ ಒಂದೆರಡು ರಾಜ್ಯಗಳಲ್ಲಿ ಮಾತ್ರ ಕಾಣಿಸಿಕೊಳ್ಳವ ಈ ಅಪರೂಪದ ಕಲೆ ಈಗ ನಮ್ಮಲ್ಲಿಯೂ, ಇರುವ ಸಂಗತಿ ತಿಳಿದಿರುವುದುರಿಂದ ಬಿಹಾರ ಮತ್ತು ಗುಜರಾತಗಳ ಜೊತೆಗೆ ಕರ್ನಾಟಕವೂ, ಒಂದು ಅಪರೂಪದ ಉದಾಹರಣೆಯಾಗಿ ನಿಲ್ಲುತ್ತದೆ. ಈ ಮೂಲಕ ಬೀದರ ಮತ್ತು ಕಲಬುರ್ಗಿ ಜಿಲ್ಲೆಗಳು ಕೂಡ ವಿಶೇಷ ಮಾನ್ಯತೆಯನ್ನು ಪಡೆಯುವವು ಎಂದು ಲೇಖಕರು ಹೆಳುತ್ತಾರೆ.

ಇಲ್ಲಿ ಡಾ. ದಂಡೆಯವರು ಸ್ವತಃ ಊರೂರಿಗೆ ಹೋಗಿ ಅಯಾ ಸಂದರ್ಭಗಳಲ್ಲಿ ಪ್ರದರ್ಶಿಸಲ್ಪಡುವ ಬೀದಿ ಬಯಲಾಟಗಳ ವಕ್ತೃಗಳನ್ನು ಅವರಿಂದ ಮಾಹಿತಿ ಪಡೆದು ಈ ಲೇಖನದಲ್ಲಿ ಸವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ.

ಡಾ. ದಂಡೆಯವರು ಹೇಳುವಂತೆ ಇಲ್ಲಿಬಯಲಾಟದ ಬೇರುಗಳು ಬೀದಿಬಯಲಾಟಗಳಲ್ಲಿ ಕಂಡು ಬರುತ್ತದೆ. ಬೀದಿ ಬಯಲಾಟದಲ್ಲಿ ಬರುವ ಗೀತ ರೂಕಗಳಲ್ಲಿ ಮೂಲ ಬಯಲಾಟದ ಕುರುಹುಗಳು ಗೋಚರಿಸುವುದರಿಂದ, ಇದನ್ನು ಬಯಲಾಟದ ಒಂದು ಹೊಸ ಪ್ರಕಾರವಾಗಿ ಗಣಿಸಲು ಸಾಧ್ಯವಿದೆ ಎಂಬ ನಿರ್ಧಾರಕ್ಕೆ ಡಾ. ದಂಡೆಯವರು ಬರುತ್ತಾರೆ. ಅವರು ಹೇಳುವಂತೆ ಬೀದಿ ಬಯಲಾಟಗಳ ಮೂಲ ರಚನಾಕಾರರು ಯಾರು ಎಂದು ಹಲವಾರು ಜನರನ್ನು ವಿಚಾರಿಸಿದಾಗ ಯಾವ ಸುಳಿವೂ ಸಿಗಲಿಲ್ಲ. ಹಿಂದಿನಿಂದ ಬಂದವುಗಳು ಎಂಬ ಮಾತನ್ನೇ ಎಲ್ಲರೂ ಹೇಳುವುದರಿಂದ ಇವು ಬಾಯಿಮಾತಿನ ಸಂಪ್ರದಾಯದಲ್ಲಿ ತಲೆ ಮಾರಿನಿಂದ ಉಳಿದು ಬಂದ ರೂಪಗಳಾಗಿವೆ ಎಂದು ಆಶಯ ವ್ಯಕ್ತ ಪಡಿಸಿದ್ದಾರೆ.

ಜನಪದ ಕಾವ್ಯದಲ್ಲಿ ಚೆನ್ನಬಸವಣ್ಣನ ಜನನ ವೃತ್ತಾಂತ :

ಪ್ರಸ್ತುತ ಲೇಖನವು 'ಸಂಶೋಧನ ಲೇಖನಗಳು' ಕೃತಿಯ ಒಂದು ಭಾಗದವಾಗಿದೆ. ಡಾ. ಬಸವರಾಜ ಸಬರದರವರು. ಇಲ್ಲಿ ಚನ್ನಬಸವಣ್ಣನ ಜನನದ ಬಗೆಗಿದ್ದ ಹಲವಾರು ವಾದವಿವಾದಗಳು, ಪ್ರಕಟವಾದ ಲೇಖನಗಳನ್ನು ಪರಾಮರ್ಶಿಸಿ ಒಂದು ತೌಲನಿಕವಾದ ಅಧ್ಯಯನ ಒಳಗೊಂಡ ಲೇಖನವನ್ನು ಇಲ್ಲಿ ಮಂಡಿಸಿದ್ದಾರೆ.

"ಜನಪದ ಬಸವಪುರಾಣ" (ಸಂಪಾದಕರು ಪಿ.ಕೆ ರಾಜಶೇಖರ) 'ಕನ್ನಡ ವೃತ್ತಿಗಾಯಕರ ಕಾವ್ಯಗಳು (ಸಂ.ಡಾ.ಜಿ ಶಂ.ಪ), ಚಿಕ್ಕದಣ್ಣಾಯಕ ಚೆನ್ನ ಬಸವಣ್ಣ "ಐದು ಜನಪದ ಕಥನ ಗೀತೆಗಳು" (ಸಂ.ಕ್ಯಾತನಹಳ್ಳಿ ರಾಮಣ್ಣ) ಈ ಮೊದಲಾದ ಜನಪದ ಕಾವ್ಯ ಕೃತಿಗಳಲ್ಲಿ ಚೆನ್ನಬಸವಣ್ಣನ ಜನನಕ್ಕೆ ಸಂಬಂಧಿಸಿದಂತೆ ಒಂದೇ ರೀತಿಯ ವಿಚಾರ ವ್ಯಕ್ತವಾಗಿದೆ. ಇತ್ತೀಚೆಗೆ ಪ್ರಕಟವಾಗಿರುವ 'ಬುಲಾಯಿ ಹಾಡುಗಳು' (ಸಂ.ಡಾ.ಡಿ.ಬಿ.ನಾಯಕ) ಮತ್ತು "ಬೀದರ ಜಿಲ್ಲೆಯ ಬುಲಾಯಿ ಹಾಡುಗಳು (ಸಂ:ಡಾ.ಜಗನ್ನಾಥ ಹೆಬ್ಬಾಳೆ) ಕೃತಿಗಳಲ್ಲಿಯೂ ಕೂಡ ಒಂದೇ ವಿಷಯ ವ್ಯಕ್ತವಾಗಿದೆ.

ಈ ಎಲ್ಲಾ ಕೃತಿಗಳಲ್ಲಿ ವ್ಯಕ್ತವಾಗಿರುವ ವಿಷಯವೆಂದರೆ, ಕಕ್ಕಯ್ಯನ ಪ್ರಸಾದ ಸೇವನೆಯಿಂದ ಅಕ್ಕ ನಾಗಮ್ಮ ಗರ್ಭವತಿಯಾಗುತ್ತಾಳೆ. ಚೆನ್ನ ಬಸವಣ್ಣ ಅಯೋನಿಜನಾಗಿ ಜನಿಸುತ್ತಾನೆ. ಈ ಎಲ್ಲಾ ಪ್ರಸಂಗಗಳು ಕಲ್ಯಾಣದಲ್ಲಿ ನಡೆಯುತ್ತವೆ. ಎಂದು

ಹೇಳಿದ ಡಾ. ಸಬರದವರು ಇವೆಲ್ಲ ಜನಪದ ಕಾವ್ಯಗಳಿಗಿಂತ ಭಿನ್ನವಾದ ವಿಷಯವನ್ನಿಲ್ಲಿ ಹೇಳುತ್ತಾರೆ.

ಅದೇನೆಂದರೆ "ಅಕ್ಕ ನಾಗಮ್ಮನ ಹಾಡು" ಇತ್ತೀಚಿಗೆ ಅರಿವು ವಿಚಾರ ಪತ್ರಿಕೆಯಲ್ಲಿ ಪ್ರಕಟವಾದುದು.

("ಅರಿವು-ಆಚಾರ"-ತ್ರೈಮಾಸಿಕ, ಸಂಪುಟ – ೧, ಸಂಚಿಕೆ –೪೨೦೦೧, ಡಾ. ವೀರಣ್ಣ ದಂಡೆ ಸಂಗ್ರಹ) ಈ ಹಾಡಿನಲ್ಲಿ ಅಕ್ಕನಾಗಮ್ಮ ಸಾಹುಕಾರ ಧನ ಶೆಟ್ಟಿಯ ಮಗನೊಂದಿಗೆ ಮದುವೆಯಾಗಿ ಗಂಡನಿಂದ ಗರ್ಭಧರಿಸುತ್ತಾಳೆ. ಈ ಇಡೀ ಕಥೆಯು ಒಂದೇ ಊರಿನಲ್ಲಿ ನಡೆಯುತ್ತದೆ.

ಕ್ರಿ.ಶ.೧೭೫೦ ರಲ್ಲಿದ್ದ ಶ್ರೀ ಚನ್ನಪ್ಪದೇವ ರಚಿಸಿರುವ "ಯಕ್ಷಗಾನ ಬಸವಪುರಾಣ" ಅಥವಾ "ಶರಣ ಲೀಲಾಮೃತ" ಕೃತಿಯು ಬಸವ ಪುರಾಣದ ಕಥೆಯನ್ನು ವಿಸ್ತಾರವಾಗಿ ಹೇಳುತ್ತದೆ. ಪ್ರಾರಂಭದಲ್ಲಿ ಬಸವಣ್ಣ, ಕಕ್ಕಯ್ಯ ಶರಣನ ಗುಣಗಾನ ಮಾಡುತ್ತಾನೆ. ಕಕ್ಕಯ್ಯನ ಮನೆಯಲ್ಲಿ ಉಳಿದಿರಬಹುದಾದ ಪ್ರಸಾದಕ್ಕಾಗಿ ಕಾದು, ಇರುವೆತಂದ ಪ್ರಸಾದದ ಚೂರನ್ನು ಪಡೆಯಲು, ಅದಕ್ಕೆ ಸಕ್ಕರೆ ಅಸೆ ತೋರಿಸಿ ಈ ಪ್ರಸಾದವನ್ನು ಇರುವೆಯ ಬಾಯಿಯಿಂದ ಬಿಡಿಸಿಕೊಂಡು ಬಂದು ತನ್ನ ಮನೆಯಲ್ಲಿಟ್ಟಾಗ ಅದನ್ನು ನೋಡಿದ ಅಕ್ಕನಾಗಮ್ಮ ಅದನ್ನು ಸೇವಿಸಿ ಗರ್ಭಧರಿಸುವಳು ಗಂಡನಿಲ್ಲದ ನಾಗಮ್ಮ ಹೇಗೆ ಗರ್ಭಧರಿಸುವಳು? ಎಂಬ ವಿಷಯ ಪ್ರಚಾರವಾಗಿ ಕೊಂಡೆ ಮುಂಚಣ್ಣಗಳ ಮೂಲಕ ಈ ಸುದ್ದಿ ಬಿಜ್ಜಳ ರಾಯನವ ರೆಗೆ ಹೊಗುತ್ತದೆ. ಆಗ ಬಿಜ್ಜಳ ಅಕ್ಕನಾಗಮ್ಮನಿಗೆ ಪರೀಕ್ಷೆಯನ್ನೊಡ್ಡುತ್ತಾನೆ. ಅಕ್ಕ ನಾಗಮ್ಮನ ಗರ್ಭದಿಂದಲೇ ಚೆನ್ನಬಸವಣ್ಣ ಮಾತನಾಡಿ, ಆಕೆಯ ಪತಿವ್ರತ್ಯಕ್ಕೆ ಎಲ್ಲರೂ ತಲೆ ಬಾಗುವಂತಾಗುತ್ತದೆ.

ಡಾ.ಜಿ.ಶಂಪ ಅವರ ಸಂಪಾದನೆ ಮಾಡಿರುವ "ಕನ್ನಡ ವೃತ್ತಿಗಾಯಕ ಕಾವ್ಯಗಳು" ಕೃತಿಯಲ್ಲಿ ದಲಿತ ವರ್ಗಕ್ಕೆ ಸೇರಿದ ಗಾಯಕ ನೀಲಗಾರ ಸಂಪ್ರದಾಯದ ಪ್ರಸಿದ್ಧ ಕಲಾವಿದ ಮಳವಳ್ಳಿ ರಾಚಯ್ಯ ಹಾಡಿರುವ ಈ ಕಥಾನಕದ ಹಾಡಿನಲ್ಲಿ ಅನೇಕ ಶರಣ-ಶರಣೆಯರ ಪ್ರಸ್ತಾಪವಿದ್ದು, ಇಲ್ಲಿ ಚನ್ನಬಸವಣ್ಣನ ಜನನಕ್ಕೆ ಹರಳಯ್ಯನ ಪ್ರಸಾದ ಕಾರಣವೆಂದು ಹೇಳಲಾಗಿದೆ.

" ಹರಳಯ್ಯನವರ ಮಠದ ಪ್ರಸಾದ ತಾನಾಗ

ನಾಗಮ್ಮನವರ ಗರ್ಭಕ್ಕೆ ಹೋಗಿ ಬೀಳಲು ಆವಾಗ

ಬಂದು ಚೆನ್ನಣ್ಣ ಮೂರ್ತವಾದ_ _ _ _ _ _ _"

ಹೀಗೆ "ಜನಪದ ಬಸವಪುರಾಣ"ದಲ್ಲಿ ಕನ್ನಡ ವೃತ್ತಿಗಾಯಕರ ಕಾವ್ಯಗಳು "ಕೃತಿಯಲ್ಲಿ" ಚಿಕ್ಕದಣ್ಣಾಯಕ ಚನ್ನಬಸವಣ್ಣ ಸಂಗ್ರಹದಲ್ಲಿರುವದು ಜನಪದ ಕಥನ ಗೀತೆಗಳು ಕಾವ್ಯ ಕೃತಿಯಲ್ಲಿ ಮತ್ತು "ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ಕೃತಿಯಲ್ಲಿ ಒಂದೇ ವಿಷಯ ಪ್ರಸ್ತಾಪವಾಗಿದೆ. ಈ ಎಲ್ಲಾ ಹಾಡುಗಳಲ್ಲಿ ಅಕ್ಕ ನಾಗಮ್ಮ ಅಪವಾದ ಹೊತ್ತು, ಸತ್ವ ಪರಿಕ್ಷೆಗೊಳಗಾಗಿ ಗೆಲ್ಲುತ್ತಾಳೆ. ಪುಣ್ಯ ಕಥಾನಕದ ನಾಯಕಿಯಾಗಿದ್ದಾಳೆ. ಹೆಣ್ಣಿನ ವ್ಯಕ್ತಿತ್ವಕ್ಕೆ ಆಕೆಯ ಪಾತಿವ್ರತ್ಯ ಕಳಂಕವನ್ನುಂಟು ಮಾಡುವ ಘಟನೆಗಳು ಎಲ್ಲೆಲ್ಲಿ ನಡೆದಿವೆಯೋ ಅಂಥಲ್ಲೆಲ್ಲಾ ದಿವ್ಯದಂತಹ ಉಗ್ರ ಪರೀಕ್ಷೆಗಳು ನಡೆದು ಆ ಕಥಾ ನಾಯಕಿಯರು ಜಯಗಳಿಸಿದ್ದಾರೆ. ಅಕ್ಕ ನಾಗಮ್ಮನ್ನ ನಿಷ್ಠೆ ಪ್ರಾಮಾಣಿಕತೆ, ಸಂಯಮ. ಈ ಕಥಾನಕಗಳಲ್ಲಿ ಎದ್ದು ಕಾಣುತ್ತವೆ ಎಂದು ಡಾ. ಸಬರದವರು ಜನಪದದ ಕಥಾನಕಗಳಲ್ಲಿ ಅಯಾ ಕಥೆಯ ನಾಯಕಿಯರು (ಹೆಣ್ಣು ಮಕ್ಕಳು, ತಮ್ಮಗೊದಗಿದ ಸಂಕಷ್ಟಗಳ್ನನು ಎದುರಿಸಿ ತಮ್ಮ ಪಾತಿವ್ರತ್ಯ ಮತ್ತು ಪ್ರಾಮಾಣಿಕತೆಯನ್ನು ಹೇಗೆ ಸಾಧಿಸಿ ತೋರಿಸಿದರು ಎಂಬುದನ್ನಿಲ್ಲಿ ಚಿತ್ರಿಸಿದ್ದಾರೆ).

ಶಿಷ್ಟ ಕಾವ್ಯ ಪರಂಪರೆಯಲ್ಲಿ ಮತ್ತು ಜನಪದ ಕಾವ್ಯ ಪರಂಪರೆಯಲ್ಲಿ ಚೆನ್ನಬಸವಣ್ಣನ ಜನನಕ್ಕೆ ಸಂಬಂಧಿಸಿದಂತೆ ಮೂರು ರೀತಿಯ ವಿಚಾರಗಳು ವ್ಯಕ್ತವಾಗಿರುವುದನ್ನು ಲೇಖಕರು ಹೇಳುತ್ತಾರೆ. ಅವುಗಳು :-

೧. ಚೆನ್ನಬಸವಣ್ಣನು ಕಕ್ಕಯ್ಯನ ಪ್ರಸಾದದಿಂದ ಜನಿಸಿದ.

೨. ಬಸವಣ್ಣನ ಪ್ರಸಾದದಿಂದ ಜನಿಸಿದ.

೩. ಶಿವದೇವ ಮತ್ತು ನಾಗಮ್ಮ ದಂಪತಿಗಳ ಉದರದಿಂದ ಜನಿಸಿದ.

ಈ ಮೂರು ರೀತಿಯ ವ್ಯಾಖ್ಯಾನಗಳಲ್ಲಿ ಮೂರನೇಯ ವ್ಯಾಖ್ಯಾನವೇ ಅಧೀಕೃತವೆಂದು, ಶಿಷ್ಟಕಾವ್ಯ ಪರಂಪರೆಯಲ್ಲಿ 'ಶಿಂಗಿರಾಜ ಪುರಾಣ: ಜನಪದ ಕಾವ್ಯ ಪರಂಪರೆಯಲ್ಲಿ ಅಕ್ಕನಾಗಮ್ಮನ ಹಾಡು ಚೆನ್ನಬಸವಣ್ಣನ ಜನನ ವೃತ್ತಾಂತಕ್ಕೆ ಪ್ರಮುಖ ಆಧಾರವಾದವುಗಳೆಂದು ಮತ್ತು ಈ ಎರಡೂ ದಾಖಲೆಗಳು ಚಾರಿತ್ರಿಕವಾಗಿ ತುಂಬಾ ಮಹತ್ವದವುಗಳಾಗಿವೆ.

ಕೆಲ ಸಂಶೋಧಕರ ಅಭಿಪ್ರಾಯದಂತೆ ಒಂದು ವೇಳೆ ಅಕ್ಕನಾಗಮ್ಮನ ವಿವಾಹ ಕಕ್ಕಯ್ಯನೊಂದಿಗೆ ಆಗಿದ್ದರೆ, ಅದೇ ಮೊದಲನೆಯ ಅಂತರ್ಜಾತಿ ವಿವಾಹವಾಗುತ್ತಿತ್ತು. ಆಗ ಜಾತಿ ಸಂಘರ್ಷಕ್ಕೆ ಅವಕಾಶವೇ ಇರುತ್ತಿರಲ್ಲಿಲ್ಲ. ಹರಳಯ್ಯನ ಮಗ – ಮಧುವರಸನ ಮಗಳೊಂದಿಗೆ ಮದುವೆಯಾದಾಗ ಕಲ್ಯಾಣದಲ್ಲಿ ಕೋಲಾಹಲವಾಗುತ್ತಿರಲಿಲ್ಲ. ಎಳೆ ಹಿಟ್ಟೆಯ ಹಿಮಸೆ ನಡೆಯುತ್ತಿರಲ್ಲಿಲ್ಲ. ವಚನ ಚಳುವಳಿ ಅಷ್ಟು ಬೇಗ ಕೊನೆಗೊಳ್ಳುತ್ತಿರಲಿಲಲ. ಅಕ್ಕನಾಗಮ್ಮ ಶಿವದೇವನ ಪತ್ನಿಯೆಂಬುದಕ್ಕೆ ಶಿಷ್ಟ ಹಾಗೂ ಜನಪದ ಕಾವ್ಯ ಪರಂಪರೆಗಳಲ್ಲಿ ಪ್ರಬಲವಾದ ಆಧಾರಗಳಿರುವುದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ವಾದವಿವಾದಗಳ ಅಗತ್ಯವೇ ಬರುವುದಿಲ್ಲ. ಏಕೆಂದರೆ, ಶಿವದೇವನೂ ಶರಣ, ಅಕ್ಕ ನಾಗಮ್ಮನೂ ಸಾತ್ವಿಕ ಶರಣೆ ಇಂತಹ ಶರಣ ದಂಪತಿಗಳ ಉದರದಲ್ಲಿ ಚೆನ್ನ ಬಸವಣ್ಣನ ಜನನವಾಯಿತು. ಆದರೆ ಕಲ್ಯಾಣದ ಸಂಧರ್ಭದಲ್ಲಿ ಶಿವದೇವನ ಪ್ರಸ್ತಾಪ ಬರದೇ ಇರುವುದರಿಂದ, ಆತ ಆ ವೇಳೆಗಾಗಲೇ ಮಡಿದು ಹೋಗಿರಬಹುದು, ಇಲ್ಲವೇ ಇಂಗಳೇಶ್ವರದಲ್ಲಿಯೇ ಇದ್ದಿರಬಹುದೆಂದು ಊಹಿಸ ಬಹುದಾಗಿದೆ.

ಹೀಗೆ ಚೆನ್ನಬಸವಣ್ಣ, ಶಿವದೇವ, ನಾಗಮ್ಮ ಶರಣ ದಂಪತಿಗಳ ಮಗನಾಗಿ ಹುಟ್ಟಿ, ಬಸವಣ್ಣನ ಮಾರ್ಗದರ್ಶದಲ್ಲಿ ಬೆಳೆದು ವೀರಶೈವ ಸಿದ್ಧಾಂತಕ್ಕೆ ತಾತ್ವಿಕ ನೆಲೆಯನ್ನೊದಗಿಸಿದ ಸಂಗತಿಯನ್ನು ಈ ಎಲ್ಲಾ ಆಧಾರಗಳಿಂದ ಸ್ಪಷ್ಟ ಪಡಿಸಿಕೊಳ್ಳಬಹುದೆಂದು ಡಾ. ಸಬರದರವರು ಚೆನ್ನ ಬಸವಣ್ಣನ ಜನನದ ಕುರಿತು ವಿಮರ್ಶಾತ್ಮಕವಾದ ಮತ್ತು ವಿವರಣಾತ್ಮಕವಾದ ಚರ್ಚೆಯನ್ನು ಈ ಲೇಖನದಲ್ಲಿ ಅಳವಡಿಸಿಕೊಂಡಿದ್ದಾರೆ.

ಮುಸ್ಲಿಂ ಜಾನಪದ ಎಂಬುದು ಇದೆಯೆ :

ಎಂಬ ಪ್ರಸ್ತುತ ಲೇಖನದಲ್ಲಿ ಡಾ. ರಹಮತ್ ತರೀಕೆರೆಯವರು ವಿವರಿಸುವಂತೆ ಒಂದು ಧರ್ಮ ತಾನು ಹುಟ್ಟಿದ ಭೌಗೋಳಿಕ ಸಾಮಾಜಿಕ ರಾಜಕೀಯ ಸನ್ನಿವೇಶಗಳಿಂದ ದೂರಹೋಗಿ, ಬೇರೊಂದು ನಾಡಿನ ಸಮುದಾಯಗಳ ಮಡಿಲಲ್ಲಿ ಬಿದ್ದು, ಅವುಗಳ ಭಾಷೆ ಧರ್ಮ ಸಂಸ್ಕೃತಿ, ಧಾರ್ಮಿಕ –ಆರ್ಥಿಕ ಸಂದರ್ಭಗಳ ಒಳಗೆ ಬದುಕಬೇಕಾಗುವುದು ಹಾಗೆ ಬದುಕುವಾಗ ಎದುರಿಸುವ ಸವಾಲುಗಳು, ನಡೆಸುವ ಸಂಘರ್ಷ ಮಾಡಿಕೊಳ್ಳುವ ರಾಜಿ ಹಾಗೂ ಅಂತಿಮವಾಗಿ ರೂಪಾಂತರ ಪಡೆದುಕೊಳ್ಳುವುದು. ಖಂಡಿತವಾಗಿಯೂ. ಆಗಂತುಕ ಧರ್ಮ ತನ್ನ ಮೂಲ ರೂಪವನ್ನು ಉಳಿಸಿಕೊಳ್ಳಲು ಹಾಗೂ ರೂಪಾಂತರಗೊಳ್ಳದೇ ಅದಕ್ಕೆ ಜೀವಿಸಲು ಸಾಧ್ಯವಾಗುವುದಿಲ್ಲ. ಸಹಜವಾಗಿಯೇ ಈ ಗತಿ ಇಸ್ಲಾಮ್ ಧರ್ಮಕ್ಕೂ ಒದಗಿತು. ಇದೇ ಇಸ್ಲಾಮಿಕ ಸ್ಥಳೀಕರಣ ಹಾಗೂ ಜಾನಪದೀಕರಣ ತಮ್ಮ ಧರ್ಮವನ್ನು ಮೂಲ ರೂಪದಲ್ಲಿ ಶುದ್ಧ ರೀತಿಯಲ್ಲಿ ಇಡಬೇಕೆಂದು ಹಂಬಲಿಸುವ ಮೂಲಭೂತ ವಾದಿಗಳು ಇಲ್ಲವೆ ಶುದ್ಧಿಕರಣವಾದಿಗಳು ಅಕ್ರೋಶದಿಂದ ಕಲಬೆರಕೆ ಇಸ್ಲಾಂ "ಭ್ರಷ್ಟ" (ಅಣಡಿಡಿಣಠಿಣ) ಇಸ್ಲಾಂ ಎಂದು ಕರೆಯುವುದು ಇದನ್ನೆ ಎಂದು ಲೇಖಕರು ಇಸ್ಲಾಂ ಧರ್ಮದ ಹುಟ್ಟು ಅದರ ಪರಿವರ್ತಿತ ರೂಪದ ಕುರಿತು ವಿಶ್ಲೇಷಿಸಿದ್ದಾರೆ.

ಸಮಸ್ಯೆಯು ಇಲ್ಲಿಂದಲೇ ಪ್ರಾರಂಭವಾಗುವುದರಿಂದ ಮತೀಯವಾಗಿ ಆಲೋಚಿಸುವ ಚರಿತ್ರೆಕಾರರೂ ತಾರ್ಕಿಕವಾಗಿ ಆಲೋಚಿಸಬೇಕಾದ 'ಸಂಸ್ಕೃತಿ ಚಿಂತಕರೂ' ಎದುರು ಬದುರು ಆಗಬೇಕಾಗಿರುವುದು ಕೂಡ ಇಲ್ಲಿಂದಲೇ ಎಂದು ಹೇಳಿದ್ದಾರೆ.

ಸಮುದಾಯಗಳು ಯಾವಾಗಲೂ ಚರಿತೆಯನ್ನು ಪುರಾಣಿಕರಿಸುತ್ತವೆ. ದೈವಗಳನ್ನು ಮಾನವೀಕರಿಸಿ, ಬೇರೆ ಕಾಲದ ಕಥೀಯ ಸೊರಗನ್ನು ಎಳೆದು ಸಮಕಾಲೀನಗೊಳಿಸುತ್ತವೆ. ಹಾಗೂ ಜಾಗತೀಕವಾದುದನ್ನು ಸ್ಥಳೀಕೃತ ಸಾಂಸ್ಕೃತಿಕ ರೂಪಗಳಿಗೆ ಜಾಗತಿಕ ಇಸ್ಲಾಮಿನ ಸಂಬಂಧವಿರುವುದಿಲ್ಲವೆ ಎಂದಾಗ ಉತ್ತರ ಇರುತ್ತದೆ ಹಾಗೂ ಇರುವುದಿಲ್ಲ. ಎಂದಾಗ ನೆಪಮಾತ್ರದ ಸಂಬಂಧಗಳು ಹಂದರದ

ಹಾಗಿರುತ್ತವೆ. ಆ ಹಂದರವನ್ನು ಹಬ್ಬಿಹೂ ಹಣ್ಣು ಬಿಡುವುದು ಸ್ವತಂತ್ರ್ಯವಾದ ಬಳ್ಳಿ ಅದರಂತೆಯೇ "ಮುದಗಲ್ಲಿನ ಮೊಹರಂ ಹೀಗೆ ಬಿಟ್ಟ ಒಂದು ಸ್ವತಂತ್ರ ಹೂ ಎಂದು ಡಾ. ತರೀಕೆರೆಯವರು ಹಂದರಕ್ಕೂ ಬಳ್ಳಿಗೂ ಇರುವ ಸಂಬಂದವನ್ನು ಮುಸ್ಲಿಂ ಜಾನಪದದ ಒಂದು ಭಾಗವಾಗಿ ಮುದಗಲ್ಲಿನ ಮೊಹರಂನ್ನು ಚಿತ್ರಿಸಿದ್ದಾರೆ. ಮುದಗಲ್ಲ ಸ್ವಾಮಿ ದರಗಾಕ್ಕೆ ಯಾವ ರೀತಿ ಹರಕೆ ಮಾಡಿಕೊಳ್ಳುವರೆಂದು ನಿರ್ದೇಶಿಸುವತಂಹ ಅರಬ್ಬಿನ ಶಾಸನಗಳು ಯಾವವು ಇಲ್ಲ. ಒಂದು ಗುಂಪು ಅಲ್ಲಿಕೊಂಡ ಹಾಯುತ್ತಿರುತ್ತದೆ. ಅಥವಾ ದೀಡ್ ನಮಸ್ಕಾರ ಹಾಕುತ್ತಿರತ್ತದೆ. ಮತ್ತೊಂದು ಗುಂಪು ಕೊಡೆಗಳಿಗೆ ಬಣ್ಣ ಬಣ್ಣದ ಬಟ್ಟೆ ಚೂರು ಕಟ್ಟಿ ಹೆಜ್ಜೆ ಮೇಳ ಕುಣಿಯುತ್ತಿರುತ್ತದೆ. ಇನ್ನೊಂದು ರಿಯಾಯತುಗಳನ್ನು ಹಾಡುತ್ತಿರುತ್ತದೆ. ಮತ್ತೆ ಕೆಲವರು ಕೊಬ್ಬರಿ ಹಿಲಾಲನ್ನು ಹಿಡಿದು ಪಂಜಿನ ಸೇವೆ ಮಾಡುತ್ತಿದ್ದರೆ ಕಲವರು ಭೆಟಿ ಕೊಟ್ಟು ಕಂದೂರಿ ನಡೆಸುತ್ತಿರುತ್ತಾರೆ ತಮಗೆ ತಾವೇ ಸ್ವತಂತ್ರವಾದ, ಆದರೆ ಹಿಂದಿನಿಂದ ಬಂದ ರಿವಾಜುಗಳಿಗೆ ಬದ್ದವಾದ ಅಪಾರ ಚಟುವಟಿಕೆಗಳ ಒಂದು ತಾಣವದು ಸೂಫಿ ಸಂತರ ಉರುಸುಗಳಲ್ಲೂ ಹೀಗೆ ನಡೆಯುತ್ತಿರುತ್ತದೆ. ಇದನ್ನು ಮುಸ್ಲಿಂ ಜಾನಪದ ಎಂದು ಕರೆದರೆ ಏನು ಹೇಳಿದಂತಾಗುತ್ತದೆ. 'ಹಿಂದೂ', 'ಮುಸ್ಲಿಂ' ಮುಂತಾದ ಧಾರ್ಮಿಕ ಪರಿಭಾಷೆಯಲ್ಲಿ ಸಮುದಾಯಗಳ ಸೃಷ್ಟಿಯಾದ ಜನಪದ ರೂಪಗಳನ್ನು ಗುರುತಿಸುವುದರ ಮುಖ್ಯ ಸಮಸ್ಯೆ ಅದರ ಪರಿಭಾಷೆಯಲ್ಲೇ ಅಡಗಿದೆ.

ಜನಪದ ಸಮುದಾಯ ಎಂದು ಯಾವುದನ್ನು ಕರೆಯುತ್ತೇವೆಯೋ ಅದು ಮತೀಯ ಭಾವನೆಗಳಿಗೆ ಅತೀತಲಾಗಿರುತ್ತದೆಯೇ ಎಂಬ ಪ್ರಶ್ನೆಯನ್ನು ಎತ್ತಿದ್ದಾಗ ವಿಚಿತ್ರವಾದ ಜಾತಿ ಮತಗಳ ನಿಷ್ಠೆಯನ್ನು ತಮ್ಮ ಸಾಮಾಜಿಕ ಬದುಕಿನಲ್ಲಿ ಕಾಯ್ದುಕೊಳ್ಳವ ಈ ಸಮುದಾಯಗಳು ಆಧುನಿಕ, ಅರ್ಥದಲ್ಲಿ 'ಸೆಕ್ಯುಲರ್' ಅಲ್ಲ ಹಾಗಿದ್ದರೂ ಧಾರ್ಮಿಕ ಅನುಭಾವಿಕ ಆಚರಣೆಗಳ ಸಂರ್ದಭದಲ್ಲಿ ಅವು ಒಂದಾಗಿ ಬೆರೆಯುವ ಪರಿ ಎಂತು? ಮೊಹರಂನಲ್ಲಿ ಯಾಗಲಿ ಸಂತರ ಬರುಸು ಅಥವಾ ಊರದ್ಯೇವದ ಜಾತ್ರೆಗಳಲ್ಲಾಗಲೀ, ಬಹು ಮಟ್ಟಿಗೆ ಎಲ್ಲಾ ಜಾತಿ ಮತಗಳ ಜನರು ಒಟ್ಟಿಗೆ ಸೇರುವುದುನಿಜ. ಆದರೆ ಸೂಕ್ಷ್ಮವಾಗಿ ನೋಡಿದರೆ ಈ ಸೇರಾಟದಲ್ಲಿ ಸ್ತ್ರೀಯರು ಕೆಳಜಾತಿಯವರು ಮತ್ತು ಆರ್ಥಿಕವಾಗಿ ಅಭದ್ರವಾಗಿರುವವರು. ಒಟ್ಟಿನಲ್ಲಿ

ದೈಹಿಕ ಶ್ರಮವನ್ನು ಅವಲಂಬಿಸಿಬಾಳ್ವೆ ಮಾಡುವ ವರ್ಗದವರು ಪ್ರಧಾನವಾಗಿರುವುದು ತಿಳಿಯುತ್ತದೆ.

ಕರ್ಬಲಾ ಕದನದಲ್ಲಿ ಹುಲಿಯಂತೆ ಕಾದಿದ ವೀರರ ನೆನಪಿಗೆ ಬಹುಶಃ ಹುಲಿವೇಷ ಹಾಕುವ ಆಚರಣೆ ಬಂದಿರಬಹುದು. ಆದರೆ ಬಳ್ಳಾರಿ ಸೀಮೆಯಲ್ಲಿ ದಲಿತರು ಮತ್ತು ಬೇಡರು ತಮ್ಮ ಮಕ್ಕಳಿಗೆ ಕಾಯಿಲೆಯಾದ ಬೇಸಾದರೆ ಹುಲಿವೇಷ ಹಾಕಿಸುತ್ತೇನೆ ಎಂದು ಹರಸಿಕೊಳ್ಳುತ್ತಾರೆ. ಹೀಗೆ ಹುಲಿ ಕುಣಿತವು ಬಲಿಯ ಧಾರ್ಮಿಕ ಅಥವಾ ಬರಿಯ ಕಲೆಯಾಗಿರದೇ ಒಂದು ಕುಟುಂಬ ತನ್ನ ಕಷ್ಟದ ದಿನಗಳಲ್ಲಿ ಮಡಿಕೊಂಡ ಸಂಕಲ್ಪ ತೀರಿಸುತ್ತಿರುವ ಸಂಗತಿ ಕೂಡ ಆಗಿದೆ.

ಜಾನಪದ ಸಾಹಿತ್ಯ ಕಲೆ ಆಚರಣೆ ಎಂದು ಯಾವುದನ್ನು ಕರೆಯಲಗುತ್ತದೊ ಆ ಪೂರ್ಣವಾಲೊಕವನ್ನು ಜೀವಂತ ವಿಟ್ಟಿರುವದೇ ಈ ವರ್ಷ ಮತ್ತು ಅದರ ಆರ್ಥಿಕವಾದ ಸಾಮಾಜಿಕ ಪರಿಸ್ಥಿತಿಗಳು, ಹೀಗಾಗಿ ಈ ಜಾನಪದವನ್ನು ಮುಸ್ಲಿಂ ಎಂಬ ಧಾರ್ಮಿಕ ಪರಿಭಾಷೆಯಲ್ಲಿ ಹೆಸರಿಟ್ಟು ಕರೆಯುವುದಕ್ಕೆ ಹಿಂಜರಿಕೆ ಹುಟ್ಟು ತೊಡಗುತ್ತದೆ.

ಏಕೆಂದರೆ ಕಳೆದ ಮೂರು ಶತಮಾನಗಳಿಂದ ಕನ್ನಡದಲ್ಲಿ ಹುಟ್ಟು ಬೆಳೆದುಕೊಂಡು ಬಂದಿರುವ ಮೌಖಿಕ ಸಾಹಿತ್ಯವನ್ನು ವಿಶ್ಲೇಷಿಸಿದರೆ, ಮುಸ್ಲಿಂ ಜಾನಪದ ಪರಿಕಲ್ಪನಾತ್ಮಕ ಸಮಸ್ಯೆಗಳು ಅರಿವಾಗುತ್ತವೆ. ಈ ಸಾಹಿತ್ಯ ರಚಿಸಿರುವ ಜನಪದ ಕವಿಗಳು ಲಾವಣಿಕಾರರು, ತತ್ವಪದಕಾರರು ರಿವಾಯತ್ ಪದಕಾರರು, ನಟರು, ಗಾಯಕರು, ಎಲ್ಲವು ಆಗಿದ್ದರು, ಸ್ವತಃ ಯಾವುದೋ ಸೂಫಿ ಸಂತನ ಅಥವಾ ತಮ್ಮ ಊರದೈವದ ಭಕ್ತರಾಗಿದ್ದರು. ನೂರಾರು ಸಂಖ್ಯೆಯಲ್ಲಿರುವ ಮುಸ್ಲಿಂ ಕವಿಗಳು ಹಿಂದೂ ದೇವದೇವಿಯರ ಅಂಕಿತವಿಟ್ಟುಕೊಂಡು, ಹಿಂದೂ ಪುರಾಣದ ಕಥೆಗಳನ್ನು ಹಾಡಿದುದಲ್ಲಿದೆ. ಮತದಿಂದ 'ಹಿಂದೂ' ಎಂದೂ ಕರೆಯಲಾದ ಕವಿಗಳ ಸೂಫಿ ಸಂತರ ಅಂಕಿತವಿಟ್ಟು ಕೊಂಡು ಕರ್ಬಲ್‌ಪದಗಳನ್ನು ಇಸ್ಲಾಮಿಕ್ ಪುರಾಣಗಳನ್ನುಳ್ಳ ಸವಾತ್ ಜವಾಬ್ ಪದಗಳನ್ನು ಕಟ್ಟು ಹಾಡಿದ್ದಾರೆ. ಹಾಡುವ ಕವಿಯಾಗಲೀ ಕೇಳುವ ಜನಸಮುದಾಯವಗಲೀ ಮತ್ತು ಪರಂರೆಯನ್ನು ಮುಂದುವರೆಸಿಕೊಂಡು ಬರುವ ಶಿಷ್ಯರಾಗಲಿ, ಯಾರು ಇವರು ನಿರ್ದಿಷ್ಟ ಧರ್ಮಕ್ಕೆ ಸಂಬಂಧಿಸಿದ್ದೆಂದು ಭಾವಿಸಿಲ್ಲ. ಕಡಕೋಳ ಮಡಿವಾಳಪ್ಪನ ಶಿಷ್ಯನಾದ ಮೊಟ್ನಳ್ಳಿ

ಹಸನ್‌ಸಾಬನಿಗೂ , ಗೋವಿಂದ ಭಟ್ಟನ ಶಿಷ್ಯನಾದ ಶರೀಫನಿಗೂ ಈ ಸಂಕಟ ಎದುರಾಗಲಿಲ್ಲ. ಹೀಗಿರುವಾಗ ಈ ಸಾಹಿತ್ಯವನ್ನು "ಮುಸ್ಲಿಂ ಜಾನಪದ" ಎಂದು ಕರೆದು ಬಿಟ್ಟರೆ ಸರಳೀಕರಿಸಿದಂತೆ ಆಗುವುದು ಎಂದು ಡಾ. ರಹಮತ್ ತರೀಕೆರೆಯವರು 'ಮುಸ್ಲಿಂ ಜಾನಪದ' ರೂಪು ರೇಷ್ಮೆಗಳನ್ನೆಲ್ಲ ವಿಮರ್ಶಾತ್ಮಕವಾಗಿ ಚಿತ್ರಿಸಿದ್ದಾರೆ.

ಪ್ರಸ್ತುತ ಮತ್ತೊಂದು ಲೇಖನ ಡಾ. ಶಾಂತಿನಾಥ ದಿಬ್ಬದರವರ ಮಳಖೇಡ ಪರಿಸರದ ಪ್ರಾಚೀನ ಜೈನ ಸಾಹಿತ್ಯ ಮಾನ್ಯಖೇಟ ನಗರವು ದೀನ ಮತ್ತು ಅನಾಥರ ತಾಣವಾಗಿತ್ತು. ಯಾವಗಲೂ ಅರಳಿದ ಹೂಗಳು ಉದ್ಯಾನಗಳಿದ್ದವಲ್ಲಿ. ಅವುಗಳಲ್ಲಿ ಅನೇಕ ಜನರು ವಿಹರಿಸುತ್ತಿದ್ದರು. ಆದ್ದರಿಂದ ಅದು ಇಂದ್ರ ಪರಿಯಂತೆ ಸುಂದರವಾಗಿತ್ತು. ಇಂಥ ನಗರವು ಧಾರನಾಥರು ಕೋಪಾಗ್ನಿಯಿಂದ ದಗ್ಧವಾಗಿ ಹೋಯಿತು. ಇನ್ನೂ ಪುಷ್ಪದಂತ ಕವಿ ಎಲ್ಲಿ ವಾಸಿಸಿಯಾನು? ಎಂಬ ಮಾತುಗಳು ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡವು ಕ್ರಿ.ಶ.೧೦೭೯ರಲ್ಲಿ ಪರಮಾರ ವಂಶದ ದೊರೆ ಹರ್ಷ ದೇವನಿಂದ ಸುಡಲ್ಪಟ್ಟಾಗ ಪ್ರಸ್ತುತ ಕವಿ ಪುಷ್ಪದಂತನ ಗದ್ಗದ ಕಂಠದಿಂದ ಹೊರಂಬವುಗಳು. ಲೇಖಕರು ವಿವರಿಸುವಂತೆ ಇಂದಿರುವ ಮಳಖೇಡವನ್ನು ನೋಡಿದಾಗ ಮನಸ್ಸಿಗೆ ನೋವುಂಟಾಗುತ್ತದೆ. ಮಳಖೇಡದ ರಾಜಕೀಯ ವೈಭವ ಮತ್ತು ಭೌತಿಕ ಸಂಪತ್ತು ನಾಶವಾಗಿದೆ. ಆದರೆ ಅಲ್ಲಿ ಸಂಭವಿಸಿದ ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳ ಕುರುಹುಗಳು ಇನ್ನೂ ಉಳಿದು ಕೊಂಡಿರುವುದು ಕನ್ನಡಿಗರ ಭಾಗ್ಯವೇ ಇದಾಗಿದೆ.

---

೧೭) ಸಂಪಾದನೆ : ಡಾ.ವ್ಹಿ.ಜಿ.ಪೂಜಾರ – ಸಂಶೋಧನಾ ಲೇಖನಗಳು ಪುಟ–೧೪೪

"ಕ್ರಿ.ಶ ೭೫೩ರಲ್ಲಿ ಬಾದಾಮಿ ಚಾಲುಕ್ಯರ ಎರಡನೆಯ ಕೀರ್ತಿವರ್ಮನನ್ನು ಸೋಲಿಸುವ ಮೂಲಕ ದಂತಿದುರ್ಗನು ರಾಷ್ಟ್ರಕೂಟ ಸಾಮ್ರಾಜ್ಯದ ಸಂಸ್ಥಾಪಕನೆನ್ನಿಸಿದನು ಅಂದಿನ ಏಚಲಾಪುರ (ಎಲ್ಲೋರಾ) ಅವರ ರಾಜಧಾನಿಯಾಗಿದ್ದಿತು. ದಂತಿದುರ್ಗನ ನಂತರ ಬಂದ ಒಂದನೇಯ ಕೃಷ್ಣ (ಕ್ರಿ.ಶ೭೫೬-೭೭೪) ಎರಡೇನೆಯ ಗೋವಿಂದ (ಕ್ರಿ.ಶ೭೭೪-೭೮೦) ಧ್ರುವ (ಕ್ರಿ.ಶ.೭೮೦-೭೯೩) ಮೂರನೆಯ ಗೋವಿಂದ (ಕ್ರಿ.ಶ. ೮೧೪-೮೮೦) ಎರಡನೇಯ ಕೃಷ್ಣ (ಕ್ರಿ.ಶ.೮೮೦-೯೧೪) ಮೂರನೆ ಇಂದ್ರ (ಕ್ರಿ.ಶ.೯೧೪-೯೨೦) ಮೂರನೆಯ ಕೃಷ್ಣ (ಕ್ರಿ.ಶ ೯೬೭) ಇವರು ರಾಷ್ಟ್ರಕೂಟ ಸಾಮ್ರಾಜ್ಯದ ಪ್ರಮುಖ ದೊರೆಗಳಾಗಿದ್ದರು. ಇವರಲ್ಲಿ ನೃಪತುಂಗ ತುಂಬ ವಿಶಿಷ್ಟ ದೊರೆಯಾಗಿದ್ದ. ಅವನ ಪೋಷಣೆಯಲ್ಲಿ ಮಳಖೇಡ ಪರಿಸರದಲ್ಲಿ ಜರುಗಿದ ಕನ್ನಡ ಸಾಹಿತ್ಯಿಕ-ಸಾಂಸ್ಕೃತಿಕ ಚಟುವಟಿಕೆಗಳು ಅನನ್ಯವಾದವು. ಅಲ್ಲಿ ಆವೇಳೆಯಲ್ಲಿ ಜೈನ ಧರ್ಮ ಸಾಕಷ್ಟು ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಸೇಡಂ ಮೊದಲಾದ ಜೈನ ಕೇಂದ್ರಗಳಲ್ಲಿ ಅಂದು ಯಾಪನೀಯ ಪಂಥವು ತುಂಬ ಪ್ರಭಾವಶಾಲಿ ಯಾಗಿದ್ದಿತು. ರಾಜಕೀಯದಲ್ಲಿ ನೆಲೆಯಾಗಿದ್ದುದ್ದಲ್ಲದೇ, ನೃಪತುಂಗ ಸ್ವತಃ ಶ್ರೇಷ್ಠ ಕವಿಯೂ ಆಗಿದ್ದು ಜೊತೆಗೆ ಕವಿಜನ ಪೋಷಕನೂ ಆಗಿದ್ದ"

ಈ 'ಭಾಜಿಷ್ಣು' ಎಂಬ ಹೆಸರು ತೀರ್ಥಂಕರರನ್ನು ಹೊಗಳುವ ೧೦೦೮ ಹೆಸರುಗಳಲ್ಲಿ ಒಂದು ಎಂಬ ಕುತೂಹಲಕಾರಿ ಅಂಶ ಬೆಳಕಿಗೆ ತಂದು ಅವನೊಬ್ಬ ಜೈನ ಕವಿ ಎಂಬುದನ್ನು ಹಂಪನಾ ಅವರು ತಿಳಿಸಿದ್ದಾರೆ. ಒಟ್ಟಾರೆಯಾಗಿ ಕನ್ನಡದ ಮೊದಲ ಗದ್ಯಕೃತಿ ಮತ್ತು ಮೊದಲ ಜೈನ ಕಥಾಗುಚ್ಛಕ್ಕೆ ಜನ್ಮ ನೀಡಿದ ಕೀರ್ತಿ ಮಳಳೇಡ ಪರಿಸರದ್ದು ಎಂದು ಲೇಖಕರು ಇಲ್ಲಿ ವಿಶ್ಲೇಷಿಸಿ ಹೇಳಿದ್ದಾರೆ.

ಇಂದ್ರನಂದಿ :

ಈತನು ಕ್ರಿ.ಶ.೯೩೦ರ ಕಾಲದ ಪ್ರಸಿದ್ಧ ಜೈನಾಚಾರ್ಯರಾಗಿದ್ದುಲ್ಲದೆ ಪ್ರಾಕೃತ ಸಂಸ್ಕೃತ ಭಾಷೆಗಳಲ್ಲಿ ಪಂಡಿತರಾಗಿದ್ದರು. ಇವರು ೨ನೇಯ ಅಮೋಃವರ್ಷ ೨ನೇಯ ಕೃಷ್ಣ ಅವಧಿಯಲ್ಲಿ ಮಳಖೇಡದಲ್ಲಿ ವಾಸವಾಗಿದ್ದು ಸಾಹಿತ್ಯ ಕೃಷಿ ಗೈದವರು ಗುಣನಂದಿಯು ಇವರ ಗುರುವಾಗಿದ್ದ ಮತ್ತು ಕವಿ ಪೊನ್ನನ್ನು ಇವರ

ಶಿಷ್ಯನಾಗಿದ್ದನು ಸಮಯ ಭೂಷಣ 'ಶ್ರುತಾವತಾರ',ನೀತಿಸಾರ',ಶ್ರುತಪಂಚಮಿ' ಹಾಗೂ ಜ್ವಾಲಾಮಾಲಿನೀಕಲ್ಪ' ಎಂಬವು ಇವರ ಕೃತಿಗಳಾಗಿವೆ. ಜ್ವಾಲಾ ಮಾಲಿನೀಕಲ್ಪ ಎಂಬುದು ಅತ್ಯಂತ ಪ್ರಸಿದ್ಧವಾದ ಕೃತಿ.

ವೀರ ಸೇನಾಚಾರ್ಯ:

ಜೈನ ಪರಂಪರೆಯಲ್ಲಿ ವೀರ ಸೇನಾಚಾರ್ಯರದು ದೊಡ್ಡ ಹೆಸರು. ಇವರ ಕಾಲ ಕ್ರಿ.ಶ.೮೧೪ ಜೈನ ಕಾವ್ಯ, ಪುರಾಣ, ತತ್ವಶಾಸ್ತ್ರಗಳ ತ್ರೀವೇಣಿ ಸಂಗಮ ದಂತಿರುವ ಮಹಾಪುರಾಣದ ಕರ್ತೃ ಜೀನಸೇನಾಚಾರ್ಯರು ಈ ವೀರ ಸೇನಾಚಾರ್ಯರ ಶಿಷ್ವರಾಗಿದ್ದರು. ಪ್ರಾಕೃತ ಭಾಷೆಯಲ್ಲಿ ರಚನೆಗೊಂಡಿರುವ ೭೨೦೦೦ ಶ್ಲೋಕಗಳ ವ್ಯಾಪ್ತಿಯ ಧವಲ ಎಂಬುದು ವೀರ ಸೇನರ ಪ್ರಸಿದ್ಧ ಕೃತಿಯಾಗಿದೆ. ತಮಗಿಂತ ಮೊದಲಿನ ಜೈನಾಗದು ಜ್ಞಾನಿಗಳಾದ ಭೂತ ಬಲಿ ಮತ್ತು ಪುಷ್ಪದಂತಾಚಾರ್ಯರು ರಚಿಸಿದ್ದ ಷಟ್ಖಂಡಾಗಮ ಎಂಬ ಕೃತಿಗೆ ಬರೆಯಲಾದ ಅಪರೂಪದ ಟೀಕಾಗ್ರಂಥ ಇದಾಗಿದೆ. ಅತಿಶಯಧವಳ ಎಂಬ ಬಿರುದು ಹೊಂದಿರುವಂತಹ ನೃಪತುಂಗೆ ಚಕ್ರವರ್ತಿಯ ಅಭಿನಂದಿನಾರ್ಥವಾಗಿ ತಮ್ಮ ಈ ಕೃತಿಗೆ ಧವಲ ಎಂಬ ಹೆಸರನ್ನು ಇರಿಸಿದ್ದಾರೆ.

ಜಿನಸೇನಾಚಾರ್ಯರು:

ವೀರಸೇನರ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿದ ಇವರು 'ಕಸಾಯ ಪಾಹುಡ' ಎಂಬ ಆಗಮ ಕೃತಿಗೆ ಟೀಕೆ ಬರೆಯಲು ತೊಡಗಿ ೩೦೦೦೦ ಶ್ಲೋಕಗಳನ್ನು ಬರೆಯುವ ಹೊತ್ತಿಗೆ ನಿಧನರಾದ ಕಾರಣ ತಾವು ಮತ್ತೆ ೪೦,೦೦೦ ಶ್ಲೋಕಗಳನ್ನು ಸೇರಿಸಿ 'ಜಯಧವಲ' ಎಂಬ ಬೇಕಾ ಗ್ರಂಥವನ್ನು ಪೂರೈಸಿಕೊಟ್ಟಿದ್ದಾರೆ. ಇದು ಪ್ರಕೃತದಲ್ಲಿದ್ದು, ಬಂಕಾಪೂರದಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಈಗ ಮೂಡ ಬಿದಿರೆಯ ಜೈನ ಮಠದಲ್ಲಿರುವ ಈ ಕೃತಿಗಳು ಗ್ರಂಥ ಸಂಪಾದನಾ ಶಾಸ್ತ್ರದ ದೃಷ್ಟಿಯಿಂದ ಸಂರಕ್ಷಿತ ಹಸ್ತಪ್ರತಿಗಳು 'ಪಾರ್ಶ್ವಾಭ್ಯುದಯ' ಎಂಬುದು ಜಿನಸೇನರ ಒಂದು ಕೃತಿ ಇದು ವಿನೂತನ ಪ್ರಯೋಗದ ಖಂಡಕಾವ್ಯ ಅವರ ಮತ್ತೊಂದು ಮಹತ್ವಕಾಂಕ್ಷೆಯ ಕೃತಿಯೆಂದರೆ ಸಂಸ್ಕೃತದಲ್ಲಿರುವ ಆದಿಪುರಾಣ.

ಮಹವೀರಾಚಾರ್ಯ:

ಇವರು ವಿದ್ಯಾನಂದ ವಾದೀಂದ್ರರ ಶಿಷ್ಯರಾಗಿದ್ದು, ಭಾರತದ ಗಣಿತ ಶಾಸ್ತ್ರದ ಚರಿತ್ರೆಯಲ್ಲಿ ಇವರದು ದೊಡ್ಡ ಹೆಸರು. ಇವರು ನೃಪತುಂಗನ ಬಾಲ್ಯದ ದಿನಗಳಲ್ಲಿ ಅವನಿಗೆ ಗುರುವಾಗಿದ್ದವರು, ಗಣಿತಸಾರ ಸಂಗ್ರಹ ಇವರ ಪ್ರಸಿದ್ಧ ಗ್ರಂಥ ಇದಲ್ಲೀದೆ 'ಷಟ್‌ತ್ರಿಂಶಿಕಾ','ಜ್ಯೋತಿಷ್ಯಪಟಲ','ಕ್ಷೇತ್ರ ಗಣಿತ','ಚತೀಸ ಪೂರ್ವ', ಉತ್ತರ ಪ್ರತಿ ಸಹ ಎಂಬ ಅನೇಕ ಗಣಿತ ಗ್ರಂಥಿಗಳನ್ನಿವರು ರಚಿಸಿದ್ದಾರೆ.

ನೃಪತುಂಗ :

ಪ್ರಶ್ನೋತ್ತರ ರತ್ನಮಾಲಿಕೆ ಎಂಬುದು ನೃಪತುಂಗನ ಕೃತಿ ಜೈನ ಪರಿಭಾಷೆಗೆ ಅನುಗುಣವಾದ ಹಳೆಗನ್ನಡ ಟೀಕೆಯನ್ನುಳ್ಳ ೨೮ ಪದ್ಯಗಳ ಪುಟ್ಟ ಕೃತಿ ಇದು ಜೈನ ವಿಷಯ ಕವಾದ ಈ ಕೃತಿಯನ್ನು ರಚಿಸಿರುವ ಕಾರಣ ಇವ ಜೈನನೇ ಆಗಿದ್ದ ಎಂಬುದನ್ನು ಬಿ.ಬಿ.ಮಹೀಶವಾಡಿ ಅವರು ಸ್ಪಷ್ಟಪಡಿಸಿದ್ದಾರೆ.

ಗುಣ ಭದ್ರಚಾರ್ಯ :

ತಮ್ಮ ಗುರು ಜೀನಸೇನಾ ಚಾರ್ಯರಿಂದ ಆರಂಭವಾಗಿ ಅವರ ಮರಣದಿಂದ ಅರ್ಧಕ್ಕೆ ನಿಂತಿದ್ದ ಮಹಾಪುರಾಣ ಎಂಬ ಸಂಸ್ಕೃತ ಕೃತಿಯನ್ನು ಬರೆದು ಪೂರೈಸಿದವರು ಗುಣಭದ್ರಾಚಾರ್ಯರು.

ಶಾಕಟಾಯಣ :

ಶಾಕಾಟಾಯಣ ನಿಜವಾದ ಹೆಸರು 'ಪಾಲ್ಯ ಕೀರ್ತಿ' ಇವರ ವ್ಯಾಕರಣ ಜ್ಞಾನವನ್ನು ಕಂಡು ಜನರು ಇವನನ್ನು ಪುರಾತನ ಶಾಕಾಟಾಯಣನೂಂದಿಗೆ ಗುರುತಿಸುತ್ತ ಬಂದಿದ್ದಾರೆ. ಜೈನ ಶಾಸನೀಯ ಪಂಥಕ್ಕೆ ಸೇರಿದ ಇವನು ನೃಪತುಂಗನ ಆಸ್ಥಾನದಲ್ಲಿದ್ದು, ಶಬ್ದಾನುಶಾಸನವೆಂಬ ವ್ಯಾಕರಣ ಗ್ರಂಥವನ್ನು ಸಂಸ್ಕೃತದ ಗ್ರಂಥವನ್ನು ಮತ್ತು ಅಮೋಘ ವೃತ್ತಿ ಎಂಬ ಇನ್ನೊಂದು ಕೃತಿಯನ್ನು ರಚಿಸಿದುದ್ದಾಗಿ ತಿಳಿಸಯುತ್ತದೆ.

'ಕವಿರಾಜ ಮಾರ್ಗವು' ಕನ್ನಡದ ಮೊಟ್ಟಮೊದಲ ಅಲಂಕಾರ ಗ್ರಂಥ ಇತರ ಅನೇಕ ವಿಚಾರಗಳನ್ನು ಸಹ ಈ ಕೃತಿಯು ಒಳಗೊಂಡಿದೆ. ಇದು ಒಳಗೊಂಡಿರುವ ವಿಷಯ ಸಂಪತ್ತುನ್ನಾಧರಿಸಿ, ಇದನ್ನು ಪ್ರಾಚೀನ ಕರ್ನಾಟಕ ಸಾಂಸ್ಕೃತಿಕ ವಿಶ್ವಕೋಶವೆಂದು ಧಾರಾಳವಾಗಿ ಕರೆಯಬಹುದು. ಎಂದು ಶ್ರೀ ದಿಬ್ಬದರವೆಂದು ಹೇಳುತ್ತಾರೆ. ಹೀಗೆ ಮಳಖೇಡ ಪರಿಸರದ ಮೂಲಕ ಸಾಕಷ್ಟು ಪ್ರಬಲವಾಗಿ ಹೊರಹೊಮ್ಮಿದ ಪ್ರಾಚೀನ ಜೈನ ಸಾಹಿತ್ಯ ಪರಂಪರೆಯು ಮುಂದೆ ಪಂಪ, ಪೊನ್ನ, ರನ್ನ, ಚಾವುಂಡರಾಯ, ಅತ್ತಿಮಬ್ಬೆ ಮೊದಲಾದ ಮಹನೀಯರಿಂದ ಇನ್ನಷ್ಟು ವಿಸ್ತಾರವಾದ ವೈಭವವನ್ನು ಪಡೆದುಕೊಂಡಿತು. ಕನ್ನಡ-ಸಂಸ್ಕೃತ ಪ್ರಾಕೃತ ಮೊದಲಾದ ಪ್ರಾಚೀನ ಜೈನ ಸಾಹಿತ್ಯ ಪರಂಪರೆಗಳ ತಾಯಿ ಬೇರು ಮಳಖೇಡ ಇಲ್ಲಿಂದಲೇ ಅವುಗಳಿಗೆ ಪೋಷಣೆ ಮತ್ತು ಆಶ್ರಯ ದೊರೆತದ್ದು ಎಂದು ಡಾ. ಶಾಂತಿನಾಥ ದಿಬ್ಬದರವರು ಮಳಖೇಡ ಪರಿಸರದ ಪ್ರಾಚೀನ ಜೈನ ಸಾಹಿತ್ಯದ ಕುರಿತು ಸಮಗ್ರವಾದ ವಿಶ್ಲೇಷಣಾ ನಿರೂಪಣೆಯಲ್ಲಿ ಕೊಟ್ಟಿದ್ದಾರೆ.

ಬಸವಣ್ಣನವರ ಕ್ರಾಂತಿಗೆ ಪ್ರೇರಣೆಗಳು:

ಪ್ರಸ್ತುತ ಡಾ.ಬಿ.ಬಿ. ಹೆಂಡಿಯವರ ಸಂಶೋಧನಾ ಲೇಖನದಲ್ಲಿ ಬಸವಣ್ಣನವರ ವ್ಯಕ್ತಿತ್ವ ಮತ್ತು ಸಾಧನೆಗೆ ನಾವು ಇಂದು ಬೆಲೆ ಕಟ್ಟುತ್ತಿರುವ ರೀತಿಗೂ ಅಂದಿನ ಅವರ ಕುರಿತು ರಚಿತವಾದ ಪುರಾಣ ಪವಾಡ, ಸ್ತೋತ್ರಾದಿ ಮಹತ್ತಾರವಾದ ಅಂತರ ಉಂಟಾಗಿದೆ ಎಂದು ಡಾ.ಹೆಂಡಿಯವರು ಹೇಳುವಂತೆ, ಅವತಾರಗಳು ದೈವಿಕತೆ ಮತ್ತು ಪವಾಡ ಲೀಲೆಗಳ ಅಲೌಕಿಕತೆಯಿಂದ ಬೆರಗು ಹೊಡೆದ ಹಿಂದಿನ ಕವಿ-ಚರಿತ್ರೆಕಾರರ ದೃಷ್ಟಿಯಿಂದ ವಾಸ್ತವಿಕವಾದ ಪ್ರಾಮಾಣಿಕವಾದ ಇತಿಹಾಸ ನುಸುಲಿಕೊಂಡಿತು. ಆ ಕಾರಣದಿಂದಾಗಿ ವಚನಕಾರರನ್ನು ಕುರಿತು ಹಿಂದಿನವರು ಹೇಳಿಕೊಂಡು ಬಂದಿರುವ ಸಾಂಪ್ರದಾಯಿಕವಾದ ಅನೇಕ ಸಂಗತಿಗಳಲ್ಲಿ ನಮಗಿಂದು ಸಂಪೂರ್ಣ ತೃಪ್ತಿ ದೊರೆಯದಾಗಿದೆ. ವಿಶ್ವಾಸ ಉಂಟಾಗದ ಹಾಗಾಗಿದೆ ಇಂದು ಬಸವಣ್ಣನವರ ಜೀವಿತ ಕಾರ್ಯಗಳ ಬೆಲೆ ಕಟ್ಟಲು ಹೊರಡುವ ನಮಗೆ ಪದೇ ಪದೇ ಚಾರಿತ್ರಿಕ

ಪ್ರಮಾಣಗಲ ಕೊರತೆ ಎದುರಾಗಿ ಅನೇಕ ಸಂಗತಿಗಳ ಬಗೆಗೆ ಸ್ಥೂಲವಾಗಿ ಹೇಳಿಕೊಂಡು ಹೋಗುವ ಇಲ್ಲವೆ ವಿಪರ್ಯಾಪ್ತ ನಿರ್ಣಯಗಳಿಗೆ ತಲುಮವ ಸಂದರ್ಭವುಂಟಾಗಿದೆ. ಇದರ ಪರಿಣಾಮವಾಗಿ ಇತ್ತೀಚೆಗೆ ಹಲವು ಆಧುನಿಕ ವಿದ್ವಾಂಸರಲ್ಲಿ ಬಸವಣ್ಣನವರು ಮತ್ತು ಸಮಕಾಲೀನ ವಚನಕಾರರ ಬಗೆಗೆ ಪರಂಪರೆಯಾಗಿ ಹೇಳಿಕೊಂಡು ಬಂದ ಚರಿತ್ರಾಂಶಗಳ ಸಂಬಂಧವಾಗಿ ಪ್ರಶ್ನೆಗಳು ಹುಟ್ಟುಕೊಂಡತೆ ಅವರು ಸಾಮಾಜಿಕವಾಗಿ ಗೈದ ಸಾಧನೆಗಳ ಮೂಲ್ಯ ನಿರ್ಣಯದ ವಿಷಯದಲ್ಲೂ ಹುಟ್ಟಿಕೊಂಡಿವೆ.

ಕ್ರಾಂತಿಕಾರಿಗಳಲ್ಲಿ ಇರಬೇಕಾದ, ಶೋಷಣೆಯ ವಿರುದ್ಧವಾಗಿ ಯಾವ ಸಂದಾನ ಮನೋಭಾವಕ್ಕೂ ಒಳಗಾಗದೆ ಕಂಕಣಕಟ್ಟು ಹೋರಾಡುವ ಕಲಿತನ ಸಾಂಪ್ರದಾಯಿಕವಾಗಿಯೇ, ಪ್ರತಿಗಾಮಿಗಳ ಚಾತುರ್ಯದಿಂದಲೋ ಬೇರೂರಿದ ವ್ಯವಸ್ಥೆ ಹಾಗೂ ಪ್ರಭುತ್ವದ ಸತ್ಯಯ ವಿರುದ್ಧ ಬಂಡೇಳುವ ಧೈರ್ಯ ತಲುಪಬೇಕಾದ ಗುರಿಯ ಸ್ಪಷ್ಠ ದರ್ಶನ ವಿಶಾಲ ಜನಕೋಟಿಯ ಕಲ್ಯಾಣಾಕಾಂಕ್ಷೆ ಹಾಗೂ ಜನತೆಯನ್ನು ಸುಸಂಘಟಿತಗೊಳಿಸಿ ಮಾನಸಿಕ ಮತ್ತು ಕ್ರಿಯಾತ್ಮವಾಗಿ ಮುನ್ನಡೆಸುವ ನಾಯಕತ್ವ ಮುಂತಾದ ಅಂಶಗಳೆಲ್ಲ ಬಸವಣ್ಣನವರಲ್ಲಿಯೂ, ವಚನಕಾರಲ್ಲಿಯೂ ಧಾರಾಳವಾಗಿ ಕಾಣುತ್ತೇವೆ. ಅವರ ಸಾಧನೆಬೋಧನೆಗಳಲ್ಲಿ ಅಂಥ ಶ್ರದ್ದೆ ಆಶಾಢ ಭೂತಿತನ ಶೋಷಣೆಗಳ ವಿರುದ್ಧ ನಡೆಸಿದ ನಿಕಟದ ಹೋರಾಟ ವಿದ್ಯತೆಂಬುದಕ್ಕೆ ಅವರ ವಚನಗಳೆ ಸ್ಪಷ್ಟ ನಿಲುವುಗನ್ನಡಿಗಳಾಗಿವೆ. ಅಲ್ಲಿ ಎದ್ದು ಕಾಣುವ ಎದೆಗಾರಿಕೆ ಕ್ರಾಂತಿಯದೇ ಆಗಿದೆ. ಅಲ್ಲದೇ ಕೇವಲ ಸುಧಾರಣಾವಾದಿ ಅಥವಾ ಸಂಧಾನವಾದಿಯದಾಗಿಲ್ಲ.

> " ವೇದ ನಡನಡುಗಿತ್ತು ಶಾಸ್ತ್ರವಾಗಲಿ ಕೆಲಸಕ್ಕೆ ಸಾರಿದಿತ್ತಯ್ಯಾ;
> ತರ್ಕಾತರ್ಕಿಸಲವಿಯದೆ ಮೂಗುವಟ್ಟುದ್ದಿತ್ತಯ್ಯಾ;
> ಆಗಮ ಹೆಮಿತೋಲಗಿ ಅಗಲಿ ಇದ್ದಿತಯ್ಯಾ
> ನಮ್ಮ ಕೂಡಲ ಸಂಗಲಯ್ಯನು
> ಚೆನ್ನಯ್ಯನ ಮನೆಯಲುಂಡ ಕಾರಣ (ಚೆ.ವ ೨೪೯)

ಆರು ಮನಿದು ನಮ್ಮನೇನ ಮೂಡುವರು ?
ಊರು ಮುನಿದು ನಮ್ಮನೆಂತು ಮಾಡುವರು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ;
ನಮ್ಮ ಸೊಣಗಂಗೆ ತಳಿಗೆಯ ನಿಕ್ಕಬೇಡ!
ಆನೆಯ ಮೇತಿ ಹೋನ ಶ್ವಾನ ಕಚ್ಚ ಬಲ್ಲುದೆ" (ಬ.ವ ೭೫೨)

ಈ ಧೈರ್ಯ ದಿಟ್ಟು ಹೆಜ್ಜೆ ಸಂಪೂರ್ಣವಾಗಿ ತನ್ನ ಹೊಣೆಗಾರಿಕೆಯನ್ನರಿತ ಮತ್ತು ತಾವು ಸಾಧಿಸಬೇಕಾದುದೇನೆಂಬುದರ ಬಗೆಗೆ ಅರಿವು ಹಾಗೂ ಅಚಲ ನಿಷ್ಠೆಯುಳ್ಳ, ಅಗತ್ಯವಿದ್ದರೆ ಸತ್ಯ ಪ್ರತಿಷ್ಠಾಪನೆಗಾಗಿ ಆತ್ಮ ಬಲಿದಾನದಕೂ, ಸಿದ್ಧರಾದ ಕ್ರಾಂತಿಕಾರಿಗಳಿಗೆ ಮಾತ್ರ ಸಾಧ್ಯವೇ ಹೊರತು ಸಾಮಾನ್ಯರಿಗಲ್ಲ ಎಂದು ಡಾ॥ ಹೆಂಡಿಯವರು ಇಲ್ಲಿ ಅವರಿಗೆ ಪ್ರೇರಣೆಯಾದ ಅಂಶಗಳನ್ನು ಚಿತ್ರಿಸಿದ್ದಾರೆ.

ಹನ್ನೆರಡನೆಯ ಶತಮಾನದ ವಚನಕಾರರು ಮತ್ತು ಅವರ ನಾಯಕರಾಗಿದ್ದ ಬಸವಣ್ಣನವರು ಕೈಕೊಂಡ ಕ್ರಾಂತಿಕಾರಿ ಆಂದೋಲನಕ್ಕೆ ಮೂಲವಾದ ಪ್ರೇರಣೆಗಳು ಮೊದಲನೆಯದಾಗಿ, ಅವರು ಬದುಕಿದ್ದ ಧಾರ್ಮಿಕ-ಸಾಮಾಜಿಕ ಪರಿಸರದಲ್ಲಿಯೇ ಇದ್ದುವು. ಎರಡನೆಯದಾಗಿ ಆ ಹಿಂದೆ ಬಿಡಿ ಬಿಡಿಯಾಗಿ ಧಾರ್ಮಿಕ ವಲಯದಲ್ಲಿ ಕಾರ್ಯಮಾಡಿದ ಕರ್ನಾಟಕದ ಹಲವು ಶೈವ ಪಂಥಗಳು ಶರಣರು ಹೊಸ ಅಲೆಯನ್ನು ವಾತಾವರದಲ್ಲಿ ಉಂಟು ಮಾಡಿದುದು, ಮೂರನೆಯದಾಗಿ ಜಾತಿ ವರ್ಣ ಉದ್ಯೋಗ ಹೆಣ್ಣು-ಗಂಡು ಎಂಬ ಯಾವ ತಾರತಮ್ಯಕ್ಕೂ ಪಕ್ಕಾಗದೆ, ತಮಿಳುನಾಡಿನಲ್ಲಿ ಸುಧೀರ್ಘ ಕಾಲದಿಂದಲೂ ಪುರಾತನರಿಂದುಂಟಾದ ಶಿವೈಕ ಭಕ್ತಿಯ ಪ್ರಸಾದ ಕನ್ನಡ ನಾಡಿನ ಶಿವಭಕ್ತಿ ಪಂಥರ ಮೇಲೂ ಪ್ರಬಾವವನ್ನು ಉಂಟು ಮಾಡಿದ್ದಿತ್ತು.

ವೈದಿಕ ಸಂಪ್ರಾದಾಯ ಬೆಳೆಸಿದ ರೋಗಗಳಲ್ಲೀ ಅತ್ಯಂತ ಘಾತುಕ ಮತ್ತು ಜನತೆಯ ಆತ್ಮೋನ್ನತಿಗೆ ಮಾರಕವಾದಂತಹುದು. "ಅಸಮಾನತೆ" ಯೆಂಬುದು ಉಚ್ಚವರ್ಣನೀಚ ವರ್ಣ;ಸ್ತ್ರೀ-ಪುರುಷ, ಬುದ್ಧಿಜೀವಿ - ದುಡಿಮೆಗಾರ ಹೀಗೆ ಈ ಅಸಮಾನತೆಯ ಬಾಲ ಸಮಾಜದ ಸರ್ವಾಂಗವನ್ನೆಲ್ಲಿ ವ್ಯಾಪಿಸಿ, ಅದರ ಚಲನ ಶೀಲತೆಯನ್ನೇ ಸ್ಥಗಿತಗೊಳಿಸಿತು. ಆಗ ಹಾರುವನ ಭಕ್ತಿ ಓಡಿನೊಳಗಗೆಯ

ಕೆಳಯಿಂಕೆಬೇರೂರದು. ಮೇಲೆಫಲವಾಗದು ಎಂದು ಬಸವಣ್ಣನವರು ಈ ಪುರೋಹಿತ ವರ್ಗ ಬೆಳೆಸಿದ ಮಾತು ಸಂಸ್ಕೃತಿಯ ಬಂಜೆತನವನ್ನು ಮೂಲಕವಾಗಿ ಎತ್ತಿ ತೋರಿಸಿದರು.

"ಕೊಲ್ಲುವವನೇ ಮಾದಿಗ, ಹೊಲಸ ತಿಂಬನೇ ಹೊಲೆಯ!
ಕುಲವೇನೊ ಅವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನ್ನೇಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು"

ಬಸವಣ್ಣನವರು ಇಪ್ಪತ್ತನೆಯ ಶತಮಾನದಲ್ಲಿ ಗಾಂಧಿಜೀ ಹೇಳಿದ ಸರ್ವೋದಯವೆಂಬ ಪರಿಕಲ್ಪನೆಯ "ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ದರ್ಶನದಲ್ಲಿ ಹೇಗೆ ಹೊಮ್ಮಿದೆಯೆಂಬುದನ್ನು ಪರಿಭಾವಿಸಬೇಕು. ವಿಪ್ರಮೊದಲು ಅಂತ್ಯಜ ಕಡೆಯಾಗಿ ಜೀವಭಕ್ತಿರೆಲ್ಲರೂ ಒಂದೆ. ಶಿವಾರ್ಪಣ ಭಾವದಲ್ಲೀ ಬದುಕುವವರ ಬಾಳು ಪುರುಷ ಮುಟ್ಟಿದ ಲೋಹದಂತೆ ಚಿನ್ನವಾಗಿ ಪರಿಣಮಿಸಿದುದು.

ಆದುದರಿಂದ

ದೇವ ಸಹಿತಿ ಭಕ್ತಮನೆಗೆ ಬಂದರೆ ಕಾಯಕ ವಾವುದೆಂದು ಬೆಸಗೊಂಡರೆ

ನಿಮ್ಮಾಣೆ ! ನಿಮ್ಮ ಪುರಾತನರಾಣೆ ತಲೆದಂಡ ! ತಲೆದಂಡ !

ಕೂಲಡಸಂಗಮದೇವಾ ಭಕ್ತರ ಕುಲವನೆಣೆಸಿದರೆ

ನಿಮ್ಮ ರಾಣಿವಾಸದಾಣೆ !

ಎಂದು ಭಾಷೆಯಿಟ್ಟು ನುಡಿದುದಲ್ಲದೆ ಇನ್ನೂ ಮುಂದೆ ಹೋಗಿ ದಾಸಿಪುತ್ರನಾಗಲಿ, ವೈಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕವ ಪ್ರಸಾದವ ಕೊಂಬುದೇ ಯೋಗ್ಯ ಎಂದು ಘೋಷಿಸಿದರು.

---

೧೮) **ಸಂಪಾದನೆ: ಡಾ.ವ್ಹಿ.ಜಿ.ಪೂಜಾರ – ಸಂಶೋಧನಾ ಲೇಖನಗಳು ಪುಟ–೧೫೧**

ದೇವಾ ನಿಮ್ಮ ಪೂಜಿಸಿ ಚೆನ್ನ ಕುಲ ಚೆನ್ನಾಯಿತಯ್ಯಾ
ದೇವಾ ನಿಮ್ಮಪೂಜಿಸಿ ದಾಸನಕುಲ ದೇಸಿವಡಿಯಿತಯ್ಯಾ

ಇಂತಹ ಸರ್ವಜೀವ ಸಮಾನತ್ವವನ್ನು ಧಾರ್ಮಿಕ ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ಸ್ಥಾಪಿಸುವುದು ಇಂದಿನಂತೆ ಅಂದು ಅತ್ಯಂತ ಅಗತ್ಯವಾಗಿದ್ದಿತ್ತು. ಮನುಷ್ಯ ಜನ್ಮತ " ಪಾಪಿಯಲ್ಲ ಆತನಲ್ಲಿ ಶಿವಾಂಶ ಅತ್ಯಂತ ಮೂಲಭೂತವಾದ ಸತ್ಯ "ಅದರ ವಿಕಾಸಕ್ಕೆ ತಕ್ಕ ಅವಕಾಶ ಮಾಡಿಕೊಡುವುದೇ ಸಮಾನತೆಯೆಂಬುದಕ್ಕಿರುವ ಮೂಲ ಅರ್ಥ ಎಂದು ಹೇಳಿ ಅಂದಿನ ಸಂದರ್ಭದಲ್ಲಿ ಮಾತ್ರವಲ್ಲ ಇಂದಿಗೂಕೂಡ ಬಸವಣ್ಣನವರು ವಿಭೂತಿ ಪುರುಷರಾಗಿ ಪ್ರೇರಣೆ ನೀಡಬಲ್ಲ ಮಹಾಚೇತನ, ಅವರ ಬಾಳು-ಸಾಧನೆ ಸಿದ್ಧಿಗಳು ಇಂದಗೂ ಕೂಡ ಅಗೆದಷ್ಟು ಹೆಚ್ಚಿಗೆ ಸಂಪತ್ತನ್ನು ನೀಡಬಲ್ಲ. ಸಮೃದ್ಧ ಚಿನ್ನದ ಗಣಿ ಬದಲಾಗುತ್ತಿರುವ ಇಂದಿನ ಕಾಲ ಸಂದರ್ಭದಲ್ಲೂ ಅವರು ನಡೆದ ಮಾರ್ಗದತ್ತ ಲಕ್ಷ್ಯ ಹರಿಸಿದಲ್ಲಿ ನಮ್ಮ ಬದುಕು ಗತಿಶಿಲವಾದಿತೆಂದು ಭರವಸೆ ಪಡೆಬಹುದು. ಈ ರೀತಿಯಾಗಿ ಬಸವಣ್ಣನವರ ಕ್ರಾಂತಿಗೆ ಪ್ರೇರಣೆಗಳು ಯಾವುವು ಮತ್ತು ಅದರಿಂದಾದ ಪ್ರಭಾವಗಳೆಷ್ಟು ಎಂಬ ವಿಷಯ ಕುರಿತಾದ ಸುಧೀರ್ಘವಾದ ವಿಶ್ಲೇಷಣೆಯನ್ನು ಇಲ್ಲಿ ಕಾಣಬಹುದಾಗಿದೆ.

ಸೃಜನಶೀಲ ಮತ್ತು ಸಮಿಕ್ಷಾಕೃತಿಗಳು:

- ಶರಣರ ಎರಡು ನಾಟಕಗಳು
- ಕನ್ನಡ ಸಾಹಿತ್ಯ
- ವಚನ ಸಾಹಿತ್ಯ ಪರಂಪರೆ
- ಅಧುನಿಕ ವಚನ ಸಾಹಿತ್ಯ
- ಕಲಬುರ್ಗಿ ಜಿಲ್ಲೆಯ ತತ್ವಪದಕಾರರು

ಈ ಐದು ಕೃತಿಗಳು ಡಾ. ಪೂಜಾರರ ಸೃಜನಶೀಲ ಮತ್ತು ಸಮೀಕ್ಷೆ ಕೃತಿಗಳಾಗಿವೆ. ಪ್ರಸ್ತುತ ವಚನಸಾಹಿತ್ಯಪರಂಪರೆ ಕೃತಿಯಲ್ಲಿ ವಚನ ಸಾಹಿತ್ಯದ ಪರಂಪರೆಯ ಹಿನ್ನೆಲೆಯನ್ನು ವಚನಗಳ ಅರ್ಥ ಸ್ವರೂಪ ಲಕ್ಷಣಗಳು ಹಾಗೂ ಅದರ ಮೂಲವನ್ನು ತಿಳಿಸಲಾಗಿದೆ. ಅದರಂತೆಯೇ ವಚನ ಸಾಹಿತ್ಯದ ಯುಗಗಳ ಕುರಿತು, ಪ್ರಮುಖ ವಚನಕಾರರು, ವಚನ ಸಾಹಿತ್ಯದ ವಸ್ತುವಿನ ವಿನ್ಯಾಸ ಮತ್ತು ವಚನ ಸಾಹಿತದಲ್ಲಿ ಪ್ರಗತಿಪರ ಧ್ಯೆಯ ಧೋರಣೆಗಳು ಈ ಎಲ್ಲಾ ವಿಷಯಗಳ ಸವಿಸ್ತಾರವಾದ ವಿಶ್ಲೇಷೆಣೆಯನ್ನು ಮಾಡಲಾಗಿದೆ.

ಹನ್ನೆರಡನೆಯ ಶತಮಾನಕ್ಕಿಂತಲೂ ಮೊದಲು ಎಲ್ಲೆಡೆಗೆ ವರ್ಣಾಶ್ರಮ ಧರ್ಮ ಬೇರು ಬಿಟ್ಟು ನಿಂತಿತ್ತು. ಬ್ರಾಹ್ಮಣ ಕ್ಷೇತ್ರಿಯ ವೈಶ್ಯ ಹಾಗೂ ಶೂದ್ರ ಎಂದು ಜನರನ್ನು ಶ್ರೇಣೀಕೃತವಾಗಿ ವಿಂಗಡಿಸಲಾಗಿತ್ತು ಮತ್ತು ಇದನ್ನು ಅಂದಿನ ಸಮಾಜವು ಒಪ್ಪಿತ್ತು. ಬ್ರಾಹ್ಮಣ ಶ್ರೇಷ್ಠ ಶೂದ್ರ ಕನಿಷ್ಠ ಎಂದು ಸ್ತ್ರೀಯನ್ನು ಶೂದ್ರದ ಗುಂಪಿಗೆ ಸೇರಿಸಲಾಗಿತ್ತು. ಆಕೆಗೆ ಮುಕ್ತಿ ಇಲ್ಲ, ಅವಳು ಎಂದೆಂದಿಗೂ ಪುರುಷನ ಸಮಾನಳಾಗಲಾರಳು ಆಕೆ ಹೆರಿಗೆಯ ಯಂತ್ರವೆಂದು ಅವಳನ್ನು ತೀರ ಕೀಳಾಗಿ

ಗಣಿಸಲಾಗುತ್ತಿತ್ತು, ಅಲ್ಲದೆ ಅಂದಿನ ಸಮಾಜದಲ್ಲಿ ರಕ್ತಗತವಾಗಿ ಬೇರೊಂದು ಜಾತಿಬೇಧ, ವರ್ಗಭೇದ, ವರ್ಣಬೇಧ, ಲಿಂಗಬೇಧ, ಕರ್ಮಠತನ ಮೂಢ್ಯ ಹಾಗೂ ಬಹುದೈವೊಪಾಸನೆ ಯಂತಹ ಅನಿಷ್ಠ ಪದ್ಧತಿಗಳು ಜಾರಿಯಲ್ಲಿದ್ದವು.

ಅಂದಿನ ಸಮಾಜದಲ್ಲಿ ಅವನತಿಗೆ ದಬ್ಬುವ, ಮನುಷ್ಯ ಮನುಷ್ಯರಲ್ಲಿ ಅಡ್ಡಗೋಡೆಯಾಗಿದ್ದಂತಹ ಜಾತಿ ಪದ್ದತಿಗೆ ಮೂಲವಾಗಿರುವ ವರ್ಣಾಶ್ರಮ ಪದ್ದತಿಯನ್ನು ಅಮೂಲಾಗ್ರವಾಗಿ ನಿರ್ಮೂಲನೆ ಮಾಡಬೇಕೆಂದು ಕಂಕಣ ಬದ್ಧರಾಗಿ ಬಂದವರೇ ಹನ್ನೆರಡನೇ ಶತಮಾನದ ವಚನಕಾರರು. ಇವರು ಹೆಸರು ಗಳಿಕೆಗೆ ಅಥವಾ ಸಾಹಿತಿಗಳಾಗಬೇಕೆಂಬ ಆಶೆ ಇಟ್ಟುಕೊಂಡು ವಚನಗಳನ್ನು ರಚಿಸಲು ಮುಂದೆ ಬರಲಿಲ್ಲ. ಹೊರತಾಗಿ ಅಂದಿನ ಸಮಾಜದಲ್ಲಿ ಬೇರೂರಿದ್ದ ಅನೇಕ ಕೆಟ್ಟ ಪದ್ದತಿಗಳನ್ನು ಕಂಡು ರೊಚ್ಚಿಗೆದ್ದು ಸಾಹಿತ್ಯರಚನೆಗೆ ಧುಮುಕಿದಂತೆ ಕಂಡುಬರುತ್ತದೆ. ಏಕೆಂದರೆ ಇವರು ಅಶು ಕವಿಗಳಂತೆ ಆಯಾ ಸಂದಂರ್ಭಗಳಲ್ಲೇ ಸಮಯ ಸ್ಪೂರ್ತಿಯಿಂದ, ಜನರ ಮಧ್ಯೆ ಇದುಕೊಂಡೆ, ಅವರ ನೋವು, ನಲಿವುಗಳಿಗೆ ಸ್ಪಂದಿಸುತ್ತಲೆ ವಚನಗಳನ್ನು ರಚಿಸಿದರು. ತಾವು ಕಂಡುಂಡ ಅನುಭವಗಳನ್ನು ತಮ್ಮ ನುಡಿಯಲ್ಲಿಯೇ ಅಭಿವ್ಯಕ್ತಪಡಿಸಿ ಶ್ರೆಷ್ಠ ಸಮಾಜ ಸುಧಾರಕರೆನ್ನಿಸಿಕೊಂಡರು.

ಅಲ್ಲಮ ಪ್ರಭು ಬಸವಣ್ಣ ಜೇಡರದಾಸಿಮಯ್ಯನಂತಹ ಶ್ರೇಷ್ಠ ವಚನಕಾರರು ಶಿವನ ಅಸ್ತಿತ್ವದ ಅನುಭವನ್ನು ಅನುಭಾವದಿ ನೆಲೆಗೇರಿಸಿ ವ್ಯಕ್ತಪಡಿಸಿದ್ದರು.

"ಮರದೊಳಗಣ ಮಂದಾಗ್ನಿಯ ಎರಿಯದಂತಿರಿಸಿದೆ
ನೇರೆವಾಲೋಳಗೆ ತುಪ್ಪದ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನರರು ಕಾಣದಂತರಿಸಿದೆ
ನೀನು ಬೆರಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥ"

"ನೆರೆಯ ಮರೆಯ ನಿಧಾನದಂತೆ
ಮುಗಿಲ ಮರೆಯಲಡಗಿದ ಮಿಂಚಿನಂತೆ
ಕಂಗಳ ಮರೆಯಲಡಗಿದ ಬೆಳಗಿನಂತೆ
ಗುಹೇಶ್ವರಾ ನಿಮ್ಮ ಒಲವು"

"ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚನಂತಿದ್ದಿತ್ತು.
ಸಸಿಯೊಳಗಣ ರಸದಂ ರುಚಿಯಂತಿದ್ದಿತ್ತು
ನನೆಯೊಳಗಣ ಪರಿಮಳದಂತಿದ್ದಿತ್ತು.
ಕೂಡಲ ಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು"

ಈ ರೀತಿಯಾಗಿ ಅನುಭಾವವೆಂದರೆ ನೆಲದ ಮರೆಯ ನಿಧಾನ ಶಿಶ ಕಂಡ ಕನಸ್ಸು ಅಂತರಾಗದಿ ರತ್ನ, ತಾನಾರೆಂಬುದನ್ನು ತೋರುವ ಆತ್ಮ ವಿದ್ಯೆ ಎಂದೆಲ್ಲ ಶರಣರು ನುಡಿದಿರುವರು. ಉರಲಿಂಗದೇವ ಎಂಬ ಒಬ್ಬ ಶರಣನ 'ಉಲಿಂದೇವಾ' ಎಂಬ ಅಂಕಿತದಲ್ಲಿ ಸುಮಾರು ೪೪ ವಚನಗಳು ಅಚ್ಚಾಗಿದೆ. ಇವುಗಳಲ್ಲಿ ಸತಿ ಪತಿ ಭಾವದ ಮಧುರ ಭಕ್ತಿ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ.

> **"ಎನ್ನ ನಲ್ಲ ನೆನ್ನನೊಲ್ಲದಿರ್ದಡೆ ನಾ ಎಲ್ಲಿ ಅರಸುವೆನವ್ವಾ ?**
> **ಗಂಗೆಯ ನೋಡೆನು ಗೌರಿಯ ನೋಡೇನು,**
> **ಎಲ್ಲಿ ಅರಸವೆನವ್ವಾ**
> **ಎನ್ನ ಅಂತರಂದ ಆತ್ಮ ಜ್ಯೋತಿಉರಿಲಿಂಗದೇವಾ ಎಂದು**
> **ಇಲ್ಲಿಯೇ ಅರಸುವೆನವ್ವಾ"**

ಎನ್ನವಲ್ಲಿ ಸ್ತ್ರೀಯೇ ಇರಲಿ ಪುರುಷನೇ ಇರಲಿ ಅವರು ಸತಿ ಪತಿಯರು ಎಲ್ಲರಿಗೂ ಪತಿ ಆದೇದರು ಎಂದು ತಿಳಿಯುವುದೇ ಸತಿ ಪತಿ ಭಾವ ಇದೊಂದು ವಿಧದ ಮಧುರ ಭಕ್ತಿ ಉರಿಲಿಂಗದೇವ ತಾನು ಸತಿಯ ಪತಿಯಾದ ಭಗವಂತನ ಸಾನ್ನಿಧ್ಯಕ್ಕಾಗಿ ಬಗೆ ಬಗೆಯಾಗಿ ಬಯಸಿ ಬಳಲಿ, ಬೆಂಡಾಗಿ ಕಳವಳಪಡುವ ಚಿತ್ರ ಈತನ ವಚನಗಳಲ್ಲಿ ವರ್ಣನೆಗೊಂಡಿದೆ ಅಣ್ಣ ಬಸವಣ್ಣನವರ ಎರಡನೇ ಪತ್ನಿಯಾದ ನೀಲ ಲೋಚನೆಯು ಸಂಗಯ್ಯ ಅಂತಿಕದಲ್ಲಿ ೧೭೫ ವಚನಗಳನನು ಬರೆದಿದ್ದು, ಎಲ್ಲವೂ ಪ್ರಕಟಗೊಂಡಿವೆ" ನೀಲಲೋಚನೆ ಸಿದ್ಧರಸ ಮಂತ್ರಿಯ ಮಗಳು ಬಸವಣ್ಣನ ಸಾಮಾಜಿಕ ಧಾರ್ಮಿಕ, ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ಬಂದ ಈಕೆ ಆತನವಿಚಾರ ಪತ್ನಿ " ಬಸಣ್ಣನವರು ತಮ್ಮ ಒಂದು ವಚನದಲ್ಲಿ 'ನೀಲಲೋಚನೆ ಪೃಥ್ವಿಗಗ್ಗಳ ಚೆಲುವೆ ಎಂದು ಬಣ್ಣಿಸಿದ್ದುಂಟು ಬಸವಣ್ಣನವರ ಮೊದಲ ಪತ್ನಿ ಗಂಗಾಬಿಂಕೆಯಾ ಸಹಿತ 'ಗಂಗಾ ಪ್ರಿಯ ಕೂಡಲ ಸಂಗಮ ದೇವ ಎಂಬ ಅಂಕಿತದಲ್ಲಿ ೬ ವಚನಗಳನ್ನು ಬರೆದಿದ್ದಾಳೆ" ನೀಲಲೋಚನೆಯ ವಚನಗಳಲ್ಲಿ ಬಸವಣ್ಣನ ಬಗೆಗೆ ಆಕೆ ಇರಿಸಿಕೊಂಡ ಪ್ರೀತಿ ವಾತ್ಸಲ್ಯಗಳು ಅನನ್ಯವಾಗಿ ವ್ಯಕ್ತಗೊಂಡಿವೆ ಬಸವಣ್ಣನವರು ಕಲ್ಯಾಣ ಬಿಟ್ಟು ಹೋದ ನಂತರ ಈಕೆ ಆತನನ್ನು ನೆನೆಸಿಕೊಂಡು ದು:ಖದಿಂದ ಭಾವುಕಳಾಗಿ

ವಚನಗಳನ್ನು ಬರೆದಿರುವಂತೆ ತೋರುತ್ತದೆ ಏಕೆಂದರೆ ಅವುಳಲ್ಲಿ ಶೋಕರಸ ಮಡುಗಟ್ಟಿರುವದನ್ನು ಕಾರಬಹುದಾಗಿದೆ.

“ ಅಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯಾ
ನಟ್ಟ ನಡು ಗ್ರಾಮವ ಕೆಡಿಸಿ ಹೋದಿರಿ ಬಸವಯ್ಯಾ
ಹುಟ್ಟಿಲ್ಲದ ಬಂಜೆಗೆ ಮಕ್ಕಳ ಕೊಟ್ಟರಿ ಬಸವಯ್ಯಾ
ಸಂಗಯ್ಯನಲ್ಲಿ ನೀನಂತಪ್ಪ ಮಹಿಮನಯ್ಯಾ ಬಸವಯ್ಯಾ”

ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋದಾಗ ಅವುಗಳು ಅನುಭವಿಸಿದ ಅನಾಥ ಭಾವನೆ, ನೋವು ಇಲ್ಲಿ ಕೆನೆಗಟ್ಟಿರುವಂತೆ ತೋರುತ್ತದೆ. ಆ ಅಗಲಿಕೆಯ ನೋವಿನಲ್ಲಿ ಮುಳುಗಿ ಹೋಗದೆಯೇ ಆತ್ಮ ಸ್ಥೈರ್ಯ ತಂದುಕೊಂಡು ಬಸವನ ಅನುಭವದಿಂದ ವಿವರವ ಕಂಡು ವಿಚಾರ ಪತ್ನಿಯಾದೆನಯ್ಯಾ ಎಂದು ಹೇಳುವಲ್ಲಿ ತಾನು ಬಸವಣ್ಣನವರ ಸರಿಸಮಾನಳಾಗಿ ಬೌದ್ಧಿಕವಾಗಿ ಬೆಳೆದು ಎನ್ನುವ ಮಾತನ್ನು ಹೇಳಲು ಪ್ರಯತ್ನಿಸಿರುವಂತೆ ತೋರುತ್ತದೆ.

ಇನ್ನು ಕನ್ನಡದ ಮೊದಲ ಕವಯಿತ್ರಿ ಎಂದು ಪ್ರಖ್ಯಾತಿ ಪಡೆದ ಶ್ರೇಷ್ಠ ವಚನಕಾರ್ತಿ ಅಕ್ಕಮಹಾದೇವಿಯು ವೈರಾಗ್ಯ ನಿಧಿಯಾಗಿ ಶ್ರೇಷ್ಠ ಅನುಭಾವಿಯಾಗಿ ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಧೀಮಂತೆ ಬಸವಣ್ಣ ಅಲ್ಲಮ ಪ್ರಭು ಸಿದ್ಧರಾಮ ರಂತಹ ಮಹಾನ ವಚನಕಾರರಿಂದ ಸ್ತುತಿಸಲ್ಪಟ್ಟಿದೆ.

ಈಕೆ ಶ್ರೇಷ್ಠ ಶಿವಶರಣೆಯಾಗಿದ್ದಾಳೆ ಈಕೆಯೂ ಸಹ ಅಂದಿನ ಸಾಮಾಜಿಕ ಸ್ಥಿತಿಗತಿಯಲ್ಲಿ ನೋವು ಅವಮಾನಗಳನ್ನು ಅನುಭವಿಸಿ ರಾಜನೂ ಪತಿಯೂ ಆಗಿದ್ದ ಕಾಶಿಕನನ್ನು ಧಿಕ್ಕರಿಸಿ ಶರಣ ಮಾರ್ಗವನ್ನು ತುಳಿದ ಹೋರಾಟಗಾರ್ತಿ.

ಮಹಾದೇವಿಯಕ್ಕ ತನ್ನ ಎಲ್ಲಾ ಭಾವನೆಗಳನ್ನು ತನ್ನ ಅನುಭವದ ಲೋಕಾನಭವಗಳನ್ನು ತನ್ನ ವಚನಗಳಲ್ಲಿ ವ್ಯಕ್ತಗೊಳಿಸಿದ್ದಾಳೆ. ಸುಮಾರು ೩೫೪ ವಚನಗಳನ್ನು ಚೆನ್ನ ಮಲ್ಲಿಕಾರ್ಜುನನನ ಅಂಕಿತದಲ್ಲಿ ರಚಿಸಿದ್ದಾಳೆ ಅತ್ಯಂತ ಕಿರಿಯ ವಯಸಸಿನಲ್ಲಿಯೇ ಅಧ್ಯಾತ್ಮದ ಶಿಖರವನ್ನೇರಿದ ವಚನ ಕಾರ್ತಿಯಾಗಿದ್ದು, ಈಕೆ ಭಾವಗೀತೆ ಗುಣವುಳ್ಳ ವಚನಗಳನ್ನು ಹೆಚ್ಚಾಗಿ ರಚಿಸಿರುವುದು ಕಂಡು ಬರುತ್ತದೆ. ಇದಲ್ಲದೇ ಆತ್ಮನ ಇವೇದನೆ ಪರಮಾತ್ಮನ ಸ್ವರೂಪ ಚಿಂತನೆ, ಆತನ ಮೇಲೆರಿಸಿ ಶ್ರದ್ಧೆ ನಿಷ್ಠೆ ಕಳವಳ ಸತಿ ಪತಿ ಭಾವ ಇವೆಲ್ಲ ಅನ್ಯಾದೃಶ್ಯವಾಗಿ

ಚಿತ್ರಣಗೊಂಡಿರುವುದನ್ನು ಕಾಣಬಹುದಾಗಿದೆ, ಪರಮಾತ್ಮನ ಧ್ಯಾನದಲ್ಲಿ ಮರೆದೊರಗಿದ ಅವಳ ಅನುಭಾವಿಕ ನೆಲೆಯ ಚಿತ್ರ ಕಣ್ಣು ಅಟ್ಟುವ ಹಾಗೆ ಈ ಕೆಳಗಿನ ವಚನವೊಂದರಲ್ಲಿ ಮೂಡಿ ಬಂದಿರುವುದನ್ನು ನೋಡಬಹುದು.

"ಕಾಣುತ್ತಾ ಕಾಣುತ್ತಾ, ಕಂಗಳ ಮುಚ್ಚಿದೆ ನೋಡವ್ವಾ

ಕೇಳುತ್ತ ಕೇಳುತ್ತ ಮೈಮರದೆ ನೋಡವ್ವಾ

ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತು ಕೇಳವ್ವಾ

ಚೆನ್ನ ಮಲ್ಲಿಕಾರ್ಜುನ ದೇವರ ದೇವನ ಕೂಡುವ ಕೊಟವ

ನಾನೇನೆಂದರಿಯದೆ ಮರೆದೆ ಕಾಣವ್ವಾ"

ಅನುಭಾವಿಕ ನೆಲೆಯಲ್ಲಿ ನಿಂತ ಅವಳ ಸ್ಥಿತಿಯನ್ನು ಈ ವಚನ ಭಾವಗೀತಾತ್ಮಕವಾಗಿ ಬಿಂಬಿಸುತ್ತದೆ. ಅಕ್ಕನ ವಚನಗಳು ಭಾವತೀವ್ರತೆ, ಚಿರಂತನತೆ, ಗೇಯತೆಗಳನ್ನೊಳಗೊಂಡ ಶ್ರೇಷ್ಠ ಭಾವಗೀತೆಗಳೇ ಆಗಿವೆ ಆತ್ಮೀಕ ಸೌಂದರ್ಯ, ಅಧ್ಯಾತ್ಮ ಸಾಧನೆ ಹೆಚ್ಚಾಗಿ ಬಂದಿದೆಯಾದರೂ ಅವಳು ಸಮಾಜ ವಿಡಂಬನೆಯನ್ನು ಕೆಲವೆಡೆ ಮಾಡಿದ್ದನ್ನು ಕಾಣುವವು. ಆಕೆಯ ವಚನಗಳಲ್ಲಿ ಸಮಾಜ ವಿಮರ್ಶೆಗಿಂತ ಸ್ವವಿಮರ್ಶೆಯೇ ಹೆಚ್ಚಾಗಿ ಬಂದುದು ಕೂಡಾ ಒಂದು ವಿಶೇಷತೆಯಾಗಿದೆ.

ಬೆಟ್ಟದ ಮೇಲೊಂದು ಮನೆಯ ಮಾಡಿ ಖಗ ಮೃಗಗಳಿ ಗಂಜಿದೊಡೆಂತಯ್ಯ! ಎನ್ನುವ ಅವಳ ಪ್ರಸಿದ್ಧ ವಚನ ಅವಳಿಗಿರುವ ಲೋಕಾನುಭವವನ್ನು ಎತ್ತಿ ತೋರಿಸುತ್ತದೆ ಬಸವಾದಿ ಶರಣರ ಒಡನಾಟದಲ್ಲಿ ಅಕ್ಕ ಅನೇಕ ಶ್ರೇಷ್ಠ ವಚನಗಳನ್ನು ಬರೆದು ವಚನ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾಳೆ

ಹನ್ನೆರಡನೇ ಶತಮಾನದ ವಚನಕಾರಲ್ಲಿ ಸಮಾಜದ ನ್ಯೂನತೆಗಳನ್ನು ತಿದ್ದುವ ಅನೇಕ ಅಂಶಗಳು ಅವರ ಸಾಹಿತ್ಯದಲ್ಲಿ ಕಂಡು ಬರುತ್ತವೆ ಕೇವಲ ಸಾಹಿತ್ಯದಲ್ಲಿ ಹೇಳದೆಯೇ ಅವುಗಳನ್ನು ವಚನಕಾರು ಆಕೆಯಲ್ಲಿಯೂ ತಂದಿರುವುದುಂಟು.

ಉದಾ: – ಕಾಯಕ, ದಾಸೋಹ, ಲಿಂಗಪೂಜೆ, ಜಂಗಮಪೂಜೆ ಮುಂತಾದವುಗಳು

---

೨೫. ಡಾ.ವ್ಹಿ.ಜಿ. ಪೂಜಾರ ವಚನ ಸಾಹಿತ್ಯ ಪರಂಪರೆ ಪು– ೧೨

೨೬. ಡಾ.ವ್ಹಿ.ಜಿ. ಪೂಜಾರ ವಚನಸಾಹಿತ್ಯ ಪರಂಪರೆ ಪು – ೫೬

ಛಲ ಬೇಕು ಶರಣಂಗೆ ಪರಸತಿ, ಪರಧನವ ನೊಲ್ಲೆನೆಂಬ ಎಂಬ ಛಲವನ್ನು ಹೊಂದಿ ಶರಣರು

"ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ

ಸುರಗಿಯ ಮೊನೆಗಂಜೆ ಒಂದಕ್ಕಂಜುವೆ ಒಂದಕ್ಕಳಕುವೆ

ಪರ ಸ್ತ್ರೀ ಪರಧನವೆಂಬೀ ಜೂಜಿಂಗಂಜುವೆ

ಮುನ್ನಂಜದ ರಾವಳನೇ ವಿಧಿಯಾದ

ಅಂಜುವೆನಯ್ಯಾ ಕೂಡಲ ಸಂಗಮ ದೇವಾ"

ಎಂಬ ವಚನ ಅವರು ಎಂತಹ ನೀತಿವಂತರಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ ಅನೀತಿ ಮಾರ್ಗದಲ್ಲಿ ನಡೆದವರಿಗೆ ದುರ್ಗತಿ ತಪ್ಪದು ಎಂಬ ಎಚ್ಚರಿಕೆಯ ಗಂಟೆಯನ್ನು ಅವರಲ್ಲಿ ಭಾರಿಸಿದ್ದಾರೆ. ಶರಣರ ವಚನಗಳು ಒಂದರ್ಥದಲ್ಲಿ ಜನಸಾಮಾನ್ಯರ ಬಾಳನ್ನು ನೀತಿಯ ನೆಲೆಗಟ್ಟಿನ ಮೇಲೆ ರೂಪಿಸಲು ಯತ್ನಿಸಿದವು. ಎಂಬುದನ್ನು ಮರೆಯಲಿಕ್ಕಾಗದು.

ಕಾಯಕ ಶರಣರು ಪ್ರಪಂಚಕ್ಕಿಂತ್ತ ಚಿರನೂತನ ಸಾರ್ವಕಾಲಿಕ ಮೌಲ್ಯವನ್ನೊಳಗೊಂಡ ತತ್ವವಾಗಿದೆ. ಇದರಲ್ಲಿ ಮೇಲು ಕೀಳೆಂಬುದು ಇಲ್ಲ. ಬಡವ ಬಲ್ಲಿದನೆಂಬ ಭೇದವಿಲ್ಲ. ಜಾತಿ ಭೇದವಿಲ್ಲ ಮತ್ತು ಲಿಂಭೇದವೂ ಇಲ್ಲ ಯಾರಿಗೆ ಯಾವುದು ಇಷ್ಟವೋ ಅವರು ಅದೇ ಕಾಯಕವನ್ನು ಕೈಗೊಳ್ಳಬಹುದು.

ಸ್ವರ್ಗ-ನರಕ ಪಾಪ- ಪುಣ್ಯ ವಿಧಿ-ದೈವ ಇವೆಲ್ಲವುಗಳು ಮಾನವನಿಂದಲೇ ರಚನೆಯಾದವುಗಳು ಇವನ್ನು ನಂಬುವುದು ನಂಬಿ ಕೈಕಟ್ಟಿ ಕೂಡುವುದು ಸರಿಯಲ್ಲ. ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂದು ಸಾರಿ ಸರಿಯಾದ ಮಾರ್ಗದಲ್ಲಿ ತಮ್ಮ ಕಾಯಕವನ್ನು ಮುಂದುವರಿಸಿಕೊಂಡು ಹೋದರೆ ಅಲ್ಲಿಯೇ ಸ್ವರ್ಗ ಪ್ರಾಪ್ತಿ ಎಂಬ ಮಹದಂಶವನ್ನು ಸರಳವಾದ ಶೈಲಿಯಲ್ಲಿ ವಚನಕಾರು ಹೇಳಿದ್ದಾರೆ.

೨೭.. ಡಾ.ವ್ಹಿ.ಜಿ. ಪೂಜಾರ ವಚನ ಸಾಹಿತ್ಯ ಪರಂಪರೆ ಪು- ೯೩

ಒಟ್ಟಿನಲ್ಲಿ ಹೆಳುವುದೇನೆಂದರೆ, ೧೧ನೇ ಶತಮಾನದಿಂದ ತೊಲಗಿ ಇಪ್ಪತನೆ ಶತಮಾನದವರೆಗೆ ರಚನೆಗೊಳ್ಳುತ್ತ ಬಂದ ಈ ಸಾಹಿತ್ಯಕ್ಕೆ ಒಂದು ಸುದೀರ್ಘವಾದ ಪರಂಪರೆ ಇದೇ ಸಮಾಜದಲ್ಲಿನ ಅನೇಕ ಮೂಢನಂಬಿಕೆಗಳಂತಹ ಅನಿಷ್ಟಗಳನ್ನು ಹೊಡೆದೋಡಿಸಲು ನಿರಂತರವಾಗಿ ಯತ್ನಿಸುತ್ತ ಬಂದ ಈ ಸಾಹಿತ್ಯ ತುಂಬ ಮೌಲಿಕವಾದುದ್ದಾಗಿದೆ. ವಚನ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ವಿನೂತನ ದೃಷ್ಟಿಯನ್ನು ದೊರಕಿಸಿಕೊಟ್ಟು ಅದನ್ನು ನವೀನ ಪಥದಲ್ಲಿ ಮುನ್ನಡೆಸಿದ ಮಹತ್ವದ ಸಾಹಿತ್ಯದ ಪ್ರಕಾರವಾಗಿದೆ.

೨೮. ಡಾ.ವ್ಹಿ.ಜಿ. ಪೂಜಾರ ವಚನಸಾಹಿತ್ಯ ಪರಂಪರೆ ಪು – ೪೧

ಅಧ್ಯಾಯ-೪

ಕನ್ನಡ ಸಾಹಿತ್ಯ ಸಂಸ್ಕೃತಿಗೆ ಡಾ. ವ್ಹಿ.ಜಿ. ಪೂಜಾರರ ಕೊಡುಗೆ.

ಅಧ್ಯಾಯ – ೪

ಕನ್ನಡ ಸಾಹಿತ್ಯ ಸಂಸ್ಕೃತಿಗೆ ಡಾ|| ವ್ಹಿ.ಜಿ. ಪೂಜಾರರ ಕೊಡುಗೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಹೊಸಗನ್ನಡ ಸಾಹಿತ್ಯ ಒಂದು ಮಹತ್ವದ ಘಟ್ಟ ಇದು ಇಂದು ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿದೆ ಬಿ.ಎಂ.ಶ್ರೀಯವರ ಇಂಗ್ಲಿಷ ಗೀತೆಗಳು ಎಂಬ ಯುಗ ಪ್ರವರ್ತಕ ಕೃತಿಯಿಂದ ಪ್ರಾರಂಭವಾದ ಈ ಸಾಹಿತ್ಯ ಕಾವ್ಯ ಕಾದಂಬರಿ ನಾಟಕ ಕಥೆ ಸಂಶೋಧನೆ, ಪ್ರಬಂಧ, ವಿಮರ್ಶೆ, ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕವಲೊಡೆದು ಬೃಹದಾಕಾರವಾಗಿ ಬೆಳೆಯುತ್ತಲೇ ಇದೆ. ಇಂತಹ ಬೆಳೆಯನ್ನು ಬೆಳೆಸುತ್ತಿರುವ ಅಲ್ಪಸಂಖ್ಯಾತ ಸಾಹಿತಿಗಳ ಸಾಲಿನಲ್ಲಿ ಡಾ|| ವ್ಹಿ.ಜಿ. ಪೂಜಾರರು ಒಬ್ಬರು ಡಾ|| ವ್ಹಿ.ಜಿ. ಪೂಜಾರರು ೧೯೫೨ ಜೂನ ೧ ಬೆಳಗಾವಿ ಜಿಲ್ಲೆಯ ಹೊಸೂರು ಗ್ರಾಮದಲ್ಲಿ ಜನಿಸಿ ಬೆಳಗಾವಿಯ ಲಿಂಗರಾಜ ಕಲಾ ಮಹಾ ವಿದ್ಯಾಲಯದಿಂದ ಪ್ರಥಮ ಶ್ರೇಣಿಯಲ್ಲಿ ಬಿ.ಎ ಪದವಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರದಿಂದ ಪ್ರಥಮ ಶ್ರೇಣಿಯಲ್ಲಿ ಎಂ.ಎ ಪದವಿ ಪಡೆದು ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು ಎಂಬ ವಿಷಯದಲ್ಲಿ ಪಿ.ಎಚ್.ಡಿ ಪದವಿಯನ್ನು ೧೯೮೨ರಲ್ಲಿ ಪಡೆದರು.

ಡಾ|| ವ್ಹಿ.ಜಿ. ಪೂಜಾರರು ಪ್ರಥಮವಾಗಿ ಸಾಹಿತ್ಯ ಕ್ಷೇತ್ರಕ್ಕೆ ಪಾದರ್ಪಣೆ ಮಾಡಿದ್ದು, ಪವಾಡಗಳು ಮತ್ತು ಮಾಂತ್ರಿಕ ವಿದ್ಯೆಗಳು ಎಂಬ ಲೇಖನದಿಂದ ಇದು ಕರ್ನಾಟಕ ವಿಶ್ವ ವಿದ್ಯಾಲಯದ ಮಾನವಿಕ ಭಾರತಿ ಎನ್ನುವ ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ಇಲ್ಲಿಂದ ಪ್ರಾರಂಭವಾದ ಅವರ ಸಾಹಿತ್ಯಸೇವೆ ಇಂದಿನವರೆಗೂ ನಿಂತರವಾಗಿ ನಡೆಯುತ್ತಾ ಬಂದಿದೆ ಇಲ್ಲಿಯವರೆಗೆ ಡಾ|| ಪೂಜರರ ಒಟ್ಟು ೪೧ ಕೃತಿಗಳು ಪ್ರಕಟವಾಗಿವೆ. ಅವುಗಳೆಲ್ಲ ಅಧ್ಯಯನ ದೃಷ್ಟಿಯಿಂದ ಅತ್ಯಂತ ಮಹತ್ವದ ಕೃತಿಗಳಾಗಿವೆ.

ಅದಲ್ಲದೆಯೇ ಇಲ್ಲಿಯವರೆಗೆ ಎರಡು ಸಂಶೋದನಾ ಯೋಜನೆಗಳನ್ನು ಸಹಿತ ಪೂರ್ಣಗೊಳಿಸಿದ್ದಾರೆ ಅವು ಗುಲ್ಬರ್ಗಾ ವಿಶ್ವ ವಿದ್ಯಾಲಯ ಗುಲಬರ್ಗಾದ ಧನಸಹಾಯದೊಂದಿಗೆ ೧೯೯೦ರಲ್ಲಿ ಗುಲಬರ್ಗಾ ತಾಲೂಕಿನ ಸ್ಥಳ ನಾಮಗಳು: ಭಾಷಿಕ ಸಾಂಸ್ಕೃತಿಕ ಅಧ್ಯಯನ ಮತ್ತು ನವ ದೆಹಲಿಯ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದೊಂದಿಗೆ ೧೯೯೨ರಿಂದ ೧೯೯೪ ರಲ್ಲಿ ಉತ್ತರ ಕರ್ನಾಟಕ ಎರಡು ಜಿಲ್ಲೆಗಳ ಭಾಷಾ ಪರಿವಿಕ್ಷಣೆ ಮತ್ತು ಅಧ್ಯಯನ ಎಂಬ ಸಂಶೋಧನಾ ಯೋಜನೆಗಳನ್ನು ಪೂರೈಸಿದ್ದಾರೆ.

ಡಾ॥ ಪೂಜಾರರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅವಿಸ್ಮರಣಿಯವಾದುದ್ದು, ಅವರು ಸಂಶೋಧನಾ ಸಾಹಿತ್ಯಕ್ಕೆ ಸಂಪಾದನಾ ಸಾಹಿತ್ಯಕ್ಕೆ ಸೃಜನಶೀಲ ಬರವಣಿಗೆಗೆ ಭಾಷಾಶಾಸ್ತ್ರಕ್ಕೆ ವಿಮರ್ಶಾ ಕ್ಷೇತ್ರಕ್ಕೆ ಅನೇಕ ಕೃತಿಗಳನ್ನು ರಚಿಸುವುದರೊಂದಿಗೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.

ಅವರ ಅನೇಕ ಸಂಶೋಧನಾ ಕೃತಿಗಳು ಇಂದು ಅಧ್ಯಾಯನಾಸಕ್ತರಿಗೆ ಉತ್ತಮ ಮಾರ್ಗದರ್ಶಕಗಳಾಗಿವೆ. ಪವಾಡ ಕಥೆಗಳು ಮತ್ತು ಇತರ ಲೇಖನಗಳು ಸಂಶೋಧನಾ ಕೃತಿಯು ವೀರಶೈವ ಸಾಹಿತ್ಯದಲ್ಲಿ ಮೂಡಿ ಬಂದಿರುವ ಪವಾಡ ಕಥೆಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದುದ್ದಾಗಿದೆ. ಇಲ್ಲಿ ಹಲವಾರು ಅಂಶಗಳು ಕಂಡುಬರುತ್ತವೆ ಅವು ಪವಾಡ ಕಥೆಗಳ ಸೃಷ್ಟಿಗೆ ಕಾರಣವೇನು ? ವೀರಶೈವ ಕವಿಗಳು ಯಾವ ಉದ್ದೇಶವನ್ನಿಟ್ಟುಕೊಂಡು ತಮ್ಮ ಕಾವ್ಯಗಳಲ್ಲಿ ಶಿವಶರಣರಿಗೆ ಹೊಂದಿಕೆಯಾಗುವಂತೆ ಈ ಪವಾಡ ಕಥೆಗಳನ್ನು ಸೃಷ್ಟಿಮಾಡಿದರು. ಇವೆಲ್ಲ ಅಂಶಗಳು ಈ ಕೃತಿಯಲ್ಲಿ ಮೂಡಿ ಬಂದಿವೆ.

"ಕನ್ನಡ ಸಾಹಿತ್ಯ ಸಂಬಂಧ" ವೆಂಬ ಅವರ ಇನ್ನೊಂದು ವಿಮರ್ಶೆ ಮತ್ತು ಸಂಶೋಧನಾ ಲೇಖನಗಳನ್ನು ಒಳಗೊಂಡ ಕೃತಿ ಇಲ್ಲಿ ಸಾಹಿತ್ಯಕ್ಕೆ ಸಂಸ್ಕೃತಿಕ ಭಾಷೆಗೆ ಮತ್ತು ಜಾನಾಪದ ಕ್ಷೇತ್ರಕ್ಕೆ ಸಂಬಂಧಿಸಿದ ಸುಮಾರು ೨೫ ಲೇಖನಗಳಿವೆ.

ಪ್ರೇರಣೆ ಧೋರಣೆಗಳ ಹಿನ್ನಲೆಯಲ್ಲಿ ಹಳಗನ್ನಡ, ನಡುಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವೀರಶೈವ ಪುರಾಣಗಳಿಗೆ ಸಂಬಂಧಿಸಿದ ನುಲಿಯ ಚಂದಯ್ಯನ ಇತಿವೃತ್ತಕ್ಕೆ ಮರು ನೋಟ ಬೀರುವ ಹೊಸಗನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ವಿನಾಯಕರ ನವ್ಯ ಕಾವ್ಯ ಪ್ರಯೋಗದ ಕುರಿತು ಮುಂತಾದ ವಿಮರ್ಶಾತ್ಮಕ ಮತ್ತು ಸಂಶೋಧನಾತ್ಮಕ ಲೇಖನಗಳಿವೆ. ಭಾಗ ೧ರಲ್ಲಿ

ಧರ್ಮದ ಅರ್ಥವ್ಯಾಪ್ತಿ ಒಂದು ಚಿಂತನೆ ಬಸವಣ್ಣನ ಪವಾಡಗಳ ಅಂತರಾರ್ಥದ ಒಂದು ವೈಚಾರಿಕ ನೋಟ ಕನ್ನಡದ ಅನುವಾದಿತ ನಾಟಕಗಳು ಇನ್ನೂ ಮುಂತಾದವು ಭಾಗ- ೨ರಲ್ಲಿವೆ.

ಭಾಗ-೩ರಲ್ಲಿ ಜಾನಪದ ಹಂತಿಹಾಡುಗಳು ಸಣ್ಣಾಟಗಳ ಹುಟ್ಟು ಸ್ವರೂಪ ಮತ್ತು ಹೈದ್ರಾಬಾದ ಕರ್ನಾಟಕ ಸಣ್ಣಾಟಗಳು ಮತ್ತು ವೃತ್ತಿ ರಂಗಭೂಮಿ ಜನಪರ ಮೌಲ್ಯಗಳು ಎಂಬ ಮೂರು ಸಂಶೋಧನೆ ಲೇಖನೆಗಳಿದ್ದು ಇವೆಲ್ಲವುಗಳು ಒಂದೊಂದು ಲೇಖನಗಳು ಒಂದು ಮಹಾ ಪ್ರಬಂಧದ ರಚನೆಗೆ ಬುನಾದಿಯಾಗುವ ಸಾಮಾರ್ಥ್ಯವನ್ನು ಹೊಂದಿವೆ ವಿಷಯದ ಆಳವಾದ ಸಂಶೋಧನೆ ಮತ್ತು ಅದರೆ ವಿಮರ್ಶೆಯನ್ನು ಇಲ್ಲಿ ಡಾ। ಪೂಜಾರರು ಮಾಡಿದ್ದಾರೆ.

ಇಂತಹ ಅನೇಕ ಕೃತಿಗಳು ಹೊಸಗನ್ನಡ ಸಾಹಿತ್ಯಕ್ಕೆ ನೀಡಿದ ಕೃತಿ ಕುಸಮಗಳಾಗಿವೆ, ಸಾಹಿತ್ಯ ಸಮಾವೇಶ, ನುಲಿಯ ಚಂದಯ್ಯ, ಕನ್ನಡ ಸಾಹಿತ್ಯ ವಚನ ಸಾಹಿತ್ಯ ಪರಂಪರೆ, ಆಧುನಿಕ ವಚನ ಸಾಹಿತ್ಯ, ಈ ಮುಂತಾದ ಕೃತಿಗಳು ಡಾ॥ ಪೂಜಾರರ ಸಂಪಾದನಾ ಕ್ಷೇತ್ರ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಅವರಿಗಿರುವ ನೈಪುಣ್ಯತೆಯನ್ನು ಎತ್ತಿ ತೋರಿಸುತ್ತಿವೆ.

ಡಾ॥ ಪೂಜಾರ ಪ್ರಕಟಿತ ಮೂವತ್ತಾರು ಕೃತಿಗಳಲ್ಲಿ ಒಟ್ಟು ಹತ್ತು ಸಂಶೋಧನೆ ಮತ್ತು ವಿಮರ್ಶೆಗೆ ಸಂಂಧಿಸಿದ ಕೃತಿಗಳು ಒಟ್ಟು ೧೪ ಸಂಪಾದನೆ ಮತ್ತು ಸೃಜನ ಶೀಲ ಕೃತಿಗಳು ಒಟ್ಟು ೯ ಚರಿತ್ರಾತ್ಮಕ ಮತ್ತು ಭಾಷಾ ವಿಜ್ಞಾನದ ಕೃತಿಗಳು ಮತ್ತು ಒಟ್ಟು ೫ ಪಠ್ಯ ಮತ್ತು ಸಮೀಕ್ಷಾ ಕೃತಿಗಳಿವೆ.

ಈಕೃತಿಗಳು ಕೇವಲ ಸಂಶೋಧಕರಿಗೆ, ಮಾತ್ರವಲ್ಲದೆ ಅಧ್ಯಾಯನಾಸ್ತಕರಿಗೆ, ವಿದ್ಯಾರ್ಥಿಗಳಿಗೆ, ಸಾಹಿತ್ಯಾ ಸಕ್ತರೆಲ್ಲರಿಗೂ ಅಮೂಲ್ಯವಾದುವಾಗಿವೆ. ಡಾ॥ ವ್ಹಿ.ಜಿ.ಪೂಜಾರರು ಕನ್ನಡ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸಿದ್ದು ಸಂಶೋಧನಾ ಲೇಖನಗಳ ಮುಖಾಂತರವಾದರೂ ಅವರು ಇಲ್ಲಿ ಗೈದ ಸಾಧನೆ ಎಲ್ಲಾ ಕ್ಷೇತ್ರಗಳಿಗೆ ಸಂಂಧಿಸಿದುದು.

ಡಾ॥ ಪೂಜಾರರು ತಮ್ಮ ಕೃತಿಗಳು ಸಾಹಿತ್ಯದ ಮೂಲಕ ನಾಟಕದ ಕನ್ನಡ ಸಾಹಿತ್ಯದಲ್ಲಿ ಮನ್ನಣೆಯ ಸ್ಥಾನವನ್ನು ಪಡೆದಿದ್ದಾರೆ. ಅಲ್ಲದೇ ಸುಧೀರ್ಘವಾದ ಜೀವನಾನುಭವ ಮತ್ತು ಸಾಧನೆಗಳಿಂದ ತಮ್ಮ ಸಾಹಿತ್ಯದ ಕಲೆಯಲ್ಲಿ ಉತ್ತರೋತ್ತರ ಪ್ರಗತಿಯನ್ನು ಸಾಧಿಸಿದ್ದಾರೆ.

ತಮ್ಮ ವಚನ ಸಾಹಿತ್ಯ ಮತ್ತು ಭಾಷಾ ಸಾಹಿತ್ಯ ಹಾಗೂ ವೀರಶೈವ ಕ್ಷೇತ್ರದಲ್ಲಿ ತಮ್ಮದೇ ಆದ ವಿಶೇಷ ಸ್ಥಾನವನ್ನು ಪಡೆದುಕೊಂಡರು ಡಾ॥ ವ್ಹಿ.ಜಿ. ಪೂಜಾರರು.

ಶಿವಶರಣರ ಎರಡು ನಾಟಕಗಳು ಎಂಬ ವಿಶೇಷವಾದ ಸೃಜನ ಶೀಲ ಬರವಣಿಗೆಯ ಕೃತಿಯನ್ನು ೧೯೯೩ರಲ್ಲಿ ಸಂಪಾಧಿಸಿದ ಸಾಹಿತ್ಯ ಕ್ಷೇತ್ರಕ್ಕೆ ಸಮರ್ಪಿಸಿದ್ದಾರೆ ಇಲ್ಲಿ ಶರಣ ಸಿರಿಕೊಂಡ ಗುಳಿ ಕೇಶರಾಜ ಮತ್ತು ಕಾಯಕ ಯೋಗಿ ಕುಂಬಾರ ಗುಂಡಯ್ಯ ಎಂಬ ಶಿವ ಶರಣರ ಎರಡು ನಾಟಕಗಳಿವೆ.

ಕನ್ನಡ ಸಂಶೋಧಕರೂ ಸಂಪಾದಕರೂ ಭಾಷಾ ಶಾಸ್ತ್ರಜ್ಞರೂ ಆದ ಡಾ॥ ವ್ಹಿ.ಜಿ. ಪೂಜಾರರು ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಸ್ಮರಣೀಯರಾಗಿದ್ದಾರೆ.

ನುಲಿಯ ಚಂದಯ್ಯ ಎಂಬ ಸಂಶೋಧನಾ ಕೃತಿಯನ್ನು ೨೦೦೦ನೇ ಇಸವಿಯಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ಇಲ್ಲಿ ೧೨ನೇ ಶತಮಾನದ ಶಿವಶರಣ ನುಲಿಯ ಚಂದಯ್ಯನ ಜೀವನ ವೃತ್ತಾಂತವನ್ನು ಬಿಡಿಸಿಟ್ಟಿದ್ದಾರೆ.

ಶಬ್ದ ಮಣಿದರ್ಪಣ ಸಂಗ್ರಹ ಎಂಬ ಕೃತಿಯನ್ನು ೨೦೦೪ರಲ್ಲಿ ಶ್ರೀ ಇಟಗಿ ಈರಣ್ಣನವರೊಂದಿಗೆ ಡಾ॥ ಪೂಜಾರರು ಸಂಪಾದಿಸಿದ್ದಾರೆ. ಈ ಕೃತಿಯನ್ನು ಕರ್ನಾಟಕದ ವಿಶ್ವವಿದ್ಯಾಲಯಗಳ ಪದವಿ ತರಗತಿಗಳಿಗೆ ೧೯೯೪-೯೫ನೇ

ಸಾಲಿನಿಂದ ಏಕರೂಪ ಪಠ್ಯ ಕ್ರಮವನ್ನು ಜಾರಿಗೊಳಿಸುವ ಉದ್ದೇಶವಿಟ್ಟುಕೊಂಡು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಅಧ್ಯಯನ ಸಂಸ್ಥೆಗಳ ಮುಖ್ಯಸ್ಥರನ್ನೊಳಗೊಂಡ ತಜ್ಞರ ಸಮಿತಿಯಲ್ಲಿ ಕನ್ನಡ ಮೂಲ ಪಠ್ಯ ಕ್ರಮವನ್ನು ಸಿದ್ಧಪಡಿಸಿ ರಚಿಸಲಾಗಿದೆ.

೧೯೮೨ ರಲ್ಲಿ ಸಂಪಾದಿಸಿದ ಕೃತಿ ಕವಿವಾಣಿಯಲ್ಲಿ ಶ್ರೀ ಷಣ್ಮುಖ ಶಿವಯೋಗಿ ಇದು ಸಮಿಶ್ರ ಕವನಗಳ ಸಂಕಲನವಾಗಿದೆ ಷಣ್ಮುಖ ಶಿವಯೋಗಿಗಳು ಬಸವೇಶ್ವರರಂತೆ ವಚನರಚನೆದೊಂದಿಗೆ ಅಸ್ಪೃಶ್ಯೋದ್ಧಾರ ಸಮಾಜ ಸುಧಾರಣೆಗಳಂಥ ಕಾರ್ಯಗಳನ್ನು ಗೈದಿದ್ದಾರೆ. ಜನಮನದಲ್ಲಿ ಅಚ್ಚಳಿಯದೆ ಪ್ರಭಾವ ಬೀರಿರುವ ಆವರು ಮೆಟ್ಟಿದ ನೆಲ ಇಂದಿಗೂ ಪಾವನ ಪರುಷವಾಗಿದೆ.

ಕವಿವಾಣಿಯಲ್ಲಿ ಅವರ ಮಹಿಮೆಯನ್ನು ಹಾಡಿಹೊಗಳುವ ಕವನಗಳು ಈ ಕೃತಿಯಲ್ಲಿವೆ.

ಪ್ರಸ್ತುತ ಸಂಗವಿಭು ೧೯೯೮ರಲ್ಲಿ ಪ್ರಕಟವಾದ ಅವರ ಇನ್ನೊಂದು ಸಂಪಾದನಾ ಕೃತಿ ಈ ಕೃತಿಯಲ್ಲಿ ಬಸವ ಶತಕ, ಭುವನೈಕ ನಾಯಕೀಶತಕ, ಪಂಪಾ ಶತಕ, ಕುಮಾರ ವಿಜಯ, ಮತ್ತು ಹಲವಾರು ಪ್ರಸಂಗಗಳಿವೆ ಸಂಗವಿಭು ೧೯ನೇ ಶತಮಾನದ ಆದಿ ಭಾಗದಲ್ಲಿ ರಾಯಚೂರು ಜಿಲ್ಲೆಯ ಗಣೇಕಲ್ ಎಂಬ ಗ್ರಾಮದಲ್ಲಿ ಬದುಕಿ ಬಾಳಿದ ಒಬ್ಬ ಜನಪ್ರೀಯ ಚಂಪೂ ಕವಿ ಆತನ ಶತಕಗಳು ಮತ್ತು ದೇವತಾ ಪ್ರಸಂಗಗಳನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

ರಾಮಪೂರ ಬಕ್ಕಪಯ್ಯನ

ಸ್ವರ ವಚನ – ತ್ರಿವಿದಿ:

ಈ ಕೃತಿಯನ್ನು ೧೯೯೯ರಲ್ಲಿ ಸಂಪಾದಿಸಿದ್ದಾರೆ. ಸ್ವರ ವಚನ ಸಾಹಿತ್ಯಕ್ಕೆ ಕಲಬುರ್ಗಿ ಜಿಲ್ಲೆಯ ಕೊಡುಗೆ ಮಹತ್ವದ್ದು ಸುಮಾರು ೩೦ಕ್ಕೂ ಸ್ವರ ವಚನಕಾರರೂ ಇಲ್ಲಿ ಆಗಿ ಹೋಗಿದ್ದಾರೆ. ಸ್ವರವಚನಗಳು ಇಲ್ಲಿ ಹೆಚ್ಚಾಗಿ ಭಜನೆ ಹಾಡುಗಳೆಂದು

ಪ್ರಚಾರ ಪಡೆದಿವೆ. ಇಲ್ಲಿಯ ಪ್ರಮುಖ ಸ್ವರ ವಚನಕಾರರಲ್ಲಿ ರಾಮಪೂರ ಬಕ್ಕಪಯ್ಯನು ಒಬ್ಬ

ಈ ಕೃತಿಯಲ್ಲಿ ೨ ಭಾಗಗಳನ್ನು ಮಾಡಲಾಗಿದ್ದು, ಮೊದಲನೆ ಭಾಗದಲ್ಲಿ ೫೫ ಸ್ವರ ವಚನಗಳು ಮತ್ತು ೨ನೇ ಭಾಗದಲ್ಲಿ ೧೧ ಸ್ವರ ವಚನಗಳಿವೆ.

ಆಯ್ದ ಸ್ವರ ವಚನಗಳು :

೨೦೦೪ರಲ್ಲಿ ಡಾ॥ ಈಶ್ವರಯ್ಯಾ ಮಠರವರ ಜೊತೆಗೆಗೂಡಿ ಸಂಪಾದಿಸಿರುವ ಕೃತಿ ಇದಾಗಿದೆ. ಈ ಕೃತಿಯಲ್ಲಿ ೨೬ ಕವಿಗಳು ಸ್ವರ ವಚನಗಲ್ಲಿ ಕಾಣಬಹುದಾಗಿದೆ.

ಸ್ವರ ವಚನಗಳಲ್ಲಿ ವಿಡಂಬನೆ:

ಈ ಕೃತಿಯು ೧೯೮೨ರಲ್ಲಿ ರಚಿಸಿದ ಕೃತಿಯಾಗಿದೆ. ಇಲ್ಲಿ ವಚನ, ವಚನ – ಗದ್ಯವೊ, ಪದ್ಯವೊ? ಸ್ವರ ವಚನಗಳು ಆದ್ಯ ಸ್ವರ ವಚನಕಾರರು-ಸ್ವರ ವಚನಗಳ ವಸ್ತು ಮತ್ತು ಸ್ವರ ವಚನಗಳಲ್ಲಿ ವಿಡಂಬನೆ ಈ ಎಲ್ಲದರ ನಿರೂಪಣೆ ಇದೆ.

ಸಾಹಿತ್ಯಾನ್ವೇಷಣೆ ಎಂಬ ಕೃತಿಯನ್ನು ೨೦೦೨ರಲ್ಲಿ ರಚಿಸಲಾಗಿದೆ. ಈ ಕೃತಿಯಲ್ಲಿ ಹಲವಾರು ಸಂದರ್ಭಗಳಲ್ಲಿ ಮಂಡಿಸಿದ ಸಂಶೋಧನಾ ಲೇಖನಗಳಿವೆ. ಈ ಕೃತಿಗೆ ಗೋರೂರು ಸಾಹಿತ್ಯ ಪ್ರತಿಷ್ಠಾನದ ಪ್ರಶಸ್ತಿ ಮತ್ತು ಆರ್. ಎಸ್. ಹುಲಗಬಾಳಿ ಪಾರಲೌಕಿಕ ಸಾಹಿತ್ಯ ಪ್ರಶಸ್ತಿಗಳು ಸಹ ಲಭಿಸಿವೆ.

೧೯೮೭ರಲ್ಲಿ ಪ್ರಕಟವಾದ ಸಾಹಿತ್ಯ ಸಮಾವೇಶ ಎಂಬ ವಿಮರ್ಶಾತ್ಮಕ ಲೇಖನಗಳ ಸಂಕಲನ ಈ ಕೃತಿಯಲ್ಲಿ ಸುಮಾರು ೧೧ ವಿಮರ್ಶಾತ್ಮಕವಾದ ಲೇಖನಗಳಾಗಿದ್ದು, ಅವು ಬೇರೆ – ಬೇರೆ ಕಾವ್ಯ ಕೃತಿಯ ಆಧಾರವಿಟ್ಟು ರಚಿಸಿದವುಳಾಗಿವೆ. ಅಲ್ಲದೇ ಈ ಕೃತಿಗೆ ಕಾವ್ಯಾನಂದ ಪ್ರಶಸ್ತಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪುರಸ್ಕಾರಗಳು ದೊರತಿವೆ.

ಕನ್ನಡ ಸಾಹಿತ್ಯ ಸಂಸ್ಕೃತಿ:

ಡಾ॥ ವ್ಹಿ.ಜಿ. ಪೂಜಾರರು ನಾಲ್ಕಾರು ವರ್ಷಗಳ ಅವಧಿಯಲ್ಲಿ ವಿವಿಧ ಸಂದರ್ಭಗಳಲ್ಲಿ ಬರೆದಿರುವ ೧೨ ಲೇಖನಗಳ ಸಂಕಲನವಾಗಿದೆ ಈ ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಹ ಲಭಿಸಿವೆ.

೧೯೯೭ರಲ್ಲಿ ಪ್ರಕಟವಾದ ವಚನ ಸಾಹಿತ್ಯ ಪರಂಪರೆ ಎಂಬ ಕೃತಿಯು ವಚನ ಸಾಹಿತ್ಯದ ಹಿನ್ನೆಲೆ ಅರ್ಥ, ಸ್ವರೂಪ, ಲಕ್ಷಣ, ಮೂಲ, ವಚನ ಸಾಹಿತ್ಯಯುಗಗಳು ಮತ್ತು ಪ್ರಮುಖ ವಚನಕಾರರು, ವಚನ ಸಾಹಿತ್ಯದ ವಸ್ತು ವಿನ್ಯಾಸ ಹಾಗೂ ಇಲ್ಲಿಯ ಪ್ರಗತಿ ಪರ ಧ್ಯೇಯ ಧೋರಣೆಗಳು ಇವೆಲ್ಲ ಅಂಶಗಳನ್ನು ಆಧಾರವಾಗಿಟ್ಟುಕೊಂಡು ರಚಿಸಲಾಗಿದೆ.

೧೯೯೮ರಲ್ಲಿ ಪ್ರಕಟವಾದ ಮತ್ತೊಂದು ಕೃತಿ ಆಧುನಿಕ ವಚನ ಸಾಹಿತ್ಯ ಈ ಕೃತಿಯಲ್ಲಿ ವಚನ ಸಾಹಿತ್ಯದ ಹಿನ್ನೆಲೆ ಆಧುನಿಕ ವಚನ ಸಾಹಿತ್ಯ ಮತ್ತು ಪ್ರಮುಖ ಆಧುನಿಕ ವಚನಕಾರರ ವಿಶ್ಲೇಷಣೆ ಇದೆ. ಆಧುನಿಕ ವಚನ ಸಾಹಿತ್ಯದ ವೈಶಿಷ್ಟ್ಯಗಳ ಕುರಿತಾದ ವಿಶ್ಲೇಷಣೆಯೂ ಇದೆ.

ಕನ್ನಡ ಭಾಷಾ ಸಮೀಕ್ಷೆ ಈ ಕೃತಿಯು ೨೦೦೩ರಲ್ಲಿ ಪ್ರಕಟವಾದ ಡಾ॥ ವ್ಹಿ.ಜಿ. ಪೂಜಾರರ ಭಾಷಾ ವಿಜ್ಞಾನದ ಬೇರೆ – ಬೇರೆ ಸಮಯದಲ್ಲಿ ನಡೆಸಿದ ಅಧ್ಯಾಯನದ ಫಲ ಶೃತಿಗಳನ್ನು ಲೇಖನಗಳ ರೂಪದಲ್ಲಿ ಒಳಗೊಂಡ ಕೃತಿಯಾಗಿದೆ. ಇಲ್ಲಿ ಒಟ್ಟು ಏಳು ಅಧ್ಯಾಯಗಳಿದ್ದು, ಅವೆಲ್ಲವುಗಳು ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ತೌಲನಿಕ ವಿವೇಚನೆಯನ್ನೊಳಗೊಂಡ ಲೇಖನಗಳಾಗಿವೆ. ಈ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪುರಸ್ಕರ ಕೂಡಾ ದೊರೆತಿದೆ.

ಸಂಶೋಧನಾ ಲೇಖನಗಳು ಈ ಕೃತಿಯು ೨೦೦೪ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ರಜತ ಮಹೋತ್ಸವ ಸಂದರ್ಭದಲ್ಲಿ ಪ್ರಸಾರಾಂಗದಿಂದ ಪ್ರಕಟವಾದ ಡಾ॥ ಪೂಜಾರರ ಸಂಪಾದನಾ ಕೃತಿಯಾಗಿದೆ.

ಈ ಕೃತಿಯು ಬೇರೆ - ಬೇರೆ ಲೇಖಕರ ಒಟ್ಟು ೨೮ ಸಂಶೋಧನಾ ಲೇಖನಗಳನ್ನು ಒಳಗೊಂಡಿದೆ. ಪ್ರತಿಯೊಂದು ಲೇಖನಗಳು ಆಯಾ ವಿಷಯದ ಆಳವಾದ ಅಧ್ಯಯನವನ್ನೊಳಗೊಂಡವುಗಳಾಗಿವೆ.

೨೦೦೫ರಲ್ಲಿ ಪ್ರಕಟವಾದ ಹೂಗಾರ ಸಮಾಜ ಒಂದು ಸಾಂಸ್ಕೃತಿಕ ಅಧ್ಯಾಯನ ಎಂಬ ಗ್ರಂಥವು ಹೂಗಾರ ಜನಾಂಗದ ಆಳಗಲಗಳನ್ನು ತಳಸೋಸಿ ಮಾಡಿದುದಾಗಿದೆ. ಹೂಗಾರರ ಮೂಲ ಪ್ರಾಚೀನತೆ, ಹುಟ್ಟು, ಬೆಳವಣಿಗೆ, ಸಮಾಜದವರ ಜೀವನ, ವಿಧಾನ, ಅಲ್ಲಿ ಆಗಿ ಹೋದ ಶರಣರು, ಮಠಾಧಿಪತಿಗಳು, ಮತ್ತು ಹೂಗಾರರ ವೃತ್ತಿಗಳು, ಕಲೆಗಳು ಅಲ್ಲದೇ ಹೂಗಾರರ ಸಮಾದ ಸದ್ಯದ ಸ್ಥಿತಿ-ಗತಿಯನ್ನು ಕುರಿತು ಬಹಳ ಆಳವಾದ ಅಧ್ಯಯನವನ್ನು ಈ ಕೃತಿ ಒಳಗೊಂಡಿದೆ.

ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು ಈ ಕೃತಿ ೧೯೯೧ರಲ್ಲಿ ಪ್ರಕಟವಾದ ಡಾ॥ ವ್ಹಿ.ಜಿ. ಪೂಜಾರರ ಪಿ.ಎಚ್.ಡಿ. ಮಹಾಪ್ರಬಂಧದ ಸಂಕ್ಷಿಪ್ತ ರೂಪವಾಗಿದೆ. ಈ ಕೃತಿಯು ಒಟ್ಟು ೭ ಅಧ್ಯಯನಗಳನ್ನು ಒಳಗೊಂಡಿದ್ದು, ಪವಾಡ ಕಥೆಗಳ ಹಿನ್ನೆಲೆ ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು ಅವುಗಳ ಪ್ರೇರಣೆ ಆಧಾರ ವಿಭಾಗ ಕ್ರಮ ಬೆಳವಣಿಗೆಗೆ ಅವುಗಳಿಂದ ಪುರಾಣ ಸಾಹಿತ್ಯದ ಬೆಳವಣಿಗೆ ಪವಾಡ ಕಥೆಗಳು ಕೊಡುಗೆ ಕೊರತೆ ಈ ಎಲ್ಲಾ ಅಂಶಗಳು ದೀರ್ಘವಾಗಿ ಚರ್ಚಗೆ ಒಳಪಟ್ಟಿವೆ.

೧೯೯೫ರಲ್ಲಿ ಪ್ರಕಟವಾದ ಕನ್ನಡ ಸಾಹಿತ್ಯ ಸಂಬಂಧ ಕೃತಿಯು ಆಯಾ ಸಂದರ್ಭಗಳಲ್ಲಿ ಮಂಡಿಸಿದ ಪ್ರಬಂಧಗಳ ಪುಸ್ತಕ ರೂಪವಾಗಿದೆ ಈ ಕೃತಿಗೆ ಹುಬ್ಬಳಿಯ ಮೂರು ಸಾವಿರ ಮಠದ ಸಾಹಿತ್ಯ ಪ್ರಶಸ್ತಿಯೂ ಲಭಿಸಿದೆ.

ಪವಾಡ ಕಥೆಗಳು ಮತ್ತು ಇತರ ಲೇಖನಗಳು ೧೯೮೨ರಲ್ಲಿ ಪ್ರಕಟವಾದ ಕೃತಿಯಲ್ಲಿ ೧೦ ಲೇಖನಗಳು ವೀರಶೈವ ಸಾಹಿತ್ಯಕ್ಕೆ ಸಂಬಂಧ ಪಟ್ಟವುಗಳು ೧೯೭೭ರಿಂದ ೧೯೭೮ರ ಅವಧಿಯಲ್ಲಿ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾದವುಗಳು

ಇತ್ತೀಚಿಗೆ ೨೦೦೫ರಲ್ಲಿ ಪ್ರಕಟವಾದ ಕೃತಿ ಕನ್ನಡ ಮಾಣಿಜ್ಯ ಸಂವಹನ ಈ ಕೃತಿಯು ಬಿ.ಕಾಂ. ಭಾಗ ೧ರ ವಿದ್ಯಾರ್ಥಿಳಿಗಾಗಿ ಅವರ ಪಠ್ಯಕ್ಕನುಸಾರವಾಗಿ ರಚಿಸಿದ ಪಠ್ಯ ಗ್ರಂಥವಾಗಿದೆ. ಕನ್ನಡ ಭಾಷೆ, ವ್ಯಾಕರಣ, ಲೇಖನ, ಚಿಹ್ನೆಗಳು, ಪತ್ರ ಲೇಖನ, ಅನುವಾದ, ಭಾಷಣ, ಸಂವಾದ, ಶೈಲಿ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಪತ್ರಲೇಖನ ಮುಂತಾದ ವಿಷಯಗಳು ಬರವಣಿಗೆಯ ಮಾದರಿಯೊಂದಿಗೆ ಈ ಕೃತಿಯಲ್ಲಿ ಪ್ರಕಟವಾಗಿವೆ.

ಅಧ್ಯಾಯ-೫

ಸಮಾರೂಪ

ಅಧ್ಯಾಯ-೫

ಸಮಾರೂಪ

ಒಟ್ಟಾರೆಯಾಗಿ ಹೇಳಬೇಕೆಂದರೆ ಡಾ॥ ವ್ಹಿ.ಜಿ. ಪೂಜಾರರ ಬದುಕು ಮತ್ತು ಬರಹ ಎಂಬ ಶೀರ್ಷಿಕೆಯ ಅಡಿಯಲ್ಲಿ ನಾನು ಕೈಗೊಂಡಿರುವ ಈ ಸಂಶೋಧನಾ ಲಘು ಪ್ರಬಂಧದಲ್ಲಿ ಹೈದ್ರಾಬಾದ ಕರ್ನಾಟಕ ಭಾಗದ ಹಲವು ಸಾಹಿತಿಗಳಲ್ಲಿ ಪ್ರಮುಖರಾದವರಾದ ಡಾ॥ ಚನ್ನಣ್ಣ ವಾಲಿಕಾರ ಡಾ॥ ಶಾಂತರಸ ಡಾ। ಗೀತಾ ನಾಗಭೂಷಣ ಇವರೆಲ್ಲರ ಸಾಲಿನಲ್ಲಿ ಒಬ್ಬರಾದ ಡಾ॥ ಪೂಜಾರರ ಜೀವನ ಶಿಕ್ಷಣ ಮತ್ತು ಸಾಹಿತಿಕ ಕೊಡುಗೆಗಳನ್ನು ~~ಐದು ಅಧ್ಯಯನಗಳಲ್ಲಿ~~ ವಿವರಿಸಲು ಪ್ರಯತ್ನಿಸಿದ್ದೇನೆ.

ಹೈದ್ರಾಬಾದ ಕರ್ನಾಟಕ ಕಲ್ಬುರ್ಗಿ ಭಾಗವು ಸಾಹಿತಿಕ ಧಾರ್ಮಿಕ, ರಾಜಕೀಯ ಐತಿಹಾಸಿಕ ವಿಷಯಗಳಲ್ಲಿ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದೆ.

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಹೊಸೂರ ಗ್ರಾಮದಲ್ಲಿ ಶ್ರೀ ವೆಂಕಣ್ಣ ತಂದೆ ಗಿರಿ ಮಲ್ಲಪ್ಪ ಪೂಜಾರರು ೧೯೫೨ಜೂನ್ ೧ರಂದು ಜನಿಸಿದರು ಬಾಲಕ ವೆಂಕಣ್ಣ ಪ್ರಾಥಮಿಕ ಶಿಕ್ಷಣವನ್ನು ಹೊಸೂರಲ್ಲಿ ಮಾಧ್ಯಮಿಕ ಶಿಕ್ಷಣ ಹೊಸಕೋಟೆಯಲ್ಲಿ ಕಾಲೇಜು ಶಿಕ್ಷಣವನ್ನು ಬೆಳಗಾವಿಯ ಲಿಂಗರಾಜ ಕಲಾ ಮಹಾವಿದ್ಯಾಲಯದಲ್ಲಿ ಇಲ್ಲಿಯೇ ಬಿ.ಎ. ಪದವಿಯಲ್ಲಿ ೧೯೭೩ರಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದುದಲ್ಲದೇ ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರದಿಂದ ಪ್ರಥಮ ಶ್ರೇಣಿಯಲ್ಲಿ ಎಂ.ಎ. ಪದವಿ ಪಡೆದು ೧೯೮೨ರಲ್ಲಿ ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು ಎಂಬ ವಿಷಯದಲ್ಲಿ ಪಿ.ಎಚ್.ಡಿ. ಪದವಿಯನ್ನು ಪಡೆದರು.

ಬಾಲ್ಯದಿಂದಲೂ ಡಾ॥ ಪೂಜಾರರಿಗೆ ಸಾಹಿತ್ಯದ ಕಡೆಗೆ ಬಹಳ ಒಲವು ಇದ್ದುದರಿಂದ ಬಾಲ್ಯದಲ್ಲಿಯೇ ತಂದೆ ತೀರಿ ಹೋಗಿದ್ದರೂ ಮನೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದರೂ ಲೆಕ್ಕಿಸದೇ ಕಷ್ಟ ಪಟ್ಟು ಉಚಿತ ಪ್ರಸಾದ ನಿಲಯದಲ್ಲಿದ್ದು ಕೊಂಡು ಬಿಟ್ಟು ಬಿಡದೇ ಪರಿಶ್ರಮದಿಂದ ವಿದ್ಯಾಭ್ಯಾಸ ಪೂರ್ಣಗೊಳಿಸಿದರು.

ಮುಂದೆ ೧೯೮೩ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಯನ ಸಂಸ್ಥೆಯ ಅಧ್ಯಾಪಕರಾಗಿ ನೇಮಕಗೊಂಡಾಗ ಅವರು ಇಲ್ಲಿಯ ತನಕ ಪಟ್ಟ ಶ್ರಮ ಸಾರ್ಥಕವಾಗಿ ಆರ್ಥಿಕ ಪರಿಸ್ಥಿತಿಯೂ ಸುಧಾರಿಸಿತು. ಆಗಲೂ ಸಹ ಅವರ ಸಾಹಿತ್ಯದ ಹಂಬಲ ಕಡಿಮೆಯಾಗಲಿಲ್ಲ ಹೋರತಾಗಿ ಇನ್ನೂ ಹೆಚ್ಚಾಯಿತು. ಆಡು ಮುಟ್ಟದ ಸೊಪ್ಪಿಲ್ಲವೆಂಬಂತೆ ಡಾ॥ ವ್ಹಿ.ಜಿ. ಪೂಜಾರರು ಆಸಕ್ತಿ ವಹಿಸದ ಸಾಹಿತ್ಯ ಕ್ಷೇತ್ರವೇ ಇಲ್ಲ.

ಅವರು ಮೊದಲಿನಿಂದಲೂ ವಚನ ಸಾಹಿತ್ಯ ವೀರಶೈವ ಸಾಹಿತ್ಯ ಮತು ಭಾಷಾ ಶಾಸ್ತ್ರದ ಕಡೆಗೆ ಹೆಚ್ಚಾಗಿ ಒಲವು ತೋರಿದುದ್ದರಿಂದ ಆ ಕ್ಷೇತ್ರಗಳಲ್ಲಿಯೇ ಹೆಚ್ಚಿನ ಸಾಧನೆಯನ್ನು ಗೈದಿದ್ದಾರೆ.

ಡಾ॥ ವ್ಹಿ.ಜಿ. ಪೂಜಾರರು ಎಂದಿಗೂ ಆಡಂಬರದ ಬದುಕಸಾಗಿಸಿದವರಲ್ಲ. ಆಡಂಬರಕ್ಕೆ ಮುಜುಗರ ಪಟ್ಟು ಕೊಳ್ಳುವ ಹಾಗೂ ಹೊಗಳಿದರೆ ಸಿಡಿಮಿಡಿಗೊಳ್ಳುವ ಸಂಕೋಚ ಸ್ವಭಾವದ ಸ್ನೇಹ ಜೀವಿಯಾಗಿದ್ದಾರೆ. ಮನೆಯದವರೆಲ್ಲರನ್ನು ಅತ್ಯಂತ ಗೌರವದಿಂದ ಕಾಣುವ ಪೂಜಾರರು ಮನೆಗೆ ಬಂದ ಅತಿಥಿಗಳನ್ನು ಸಹ ಸತ್ಕಾರದಿಂದ ಹಾಗೂ ಗೌರವದಿಂದ ಕಾಣುವರು ಸದ್ಯ ೫೯ ವಸಂತಗಳನ್ನು ಕಂಡಿರುವ ಇವರು ಸದಾ ಹಸನ್ಮುಖಿಯಾಗಿ ಇಂದಿಗೂ ಸಾಹಿತ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಚಲಿಸುವ ನದಿಯಂತೆ ಯಾವಾಗಲೂ ಹುಮ್ಮಸ್ಸಿನಿಂದ ವೇಗವಾಗಿ ಹರಿಯುವ ಸಾಹಿತ್ಯ ಡಾ॥ ಪೂಜಾರರದಾಗಿದೆ.

ಡಾ॥ ವ್ಹಿ.ಜಿ. ಪುಜಾರರ ಸಾಹಿತ್ಯ ಸೇವೆಯನ್ನು ಗುರುತಿಸಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ನೀಡಲಾಗಿದೆ. ೨೦೦೪ರ ರಾಮದುರ್ಗ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಪುರಸ್ಕೃತರಾಗಿದ್ದಾರೆ.

ಅವರು ಒಟ್ಟು ೩೬ ಪ್ರಕಟಿತ ಕೃತಿಗಳು ಸಾಹಿತ್ಯಾಸಕ್ತರಿಗೆ, ವಿದ್ಯಾರ್ಥಿಗಳಿಗೆ, ಉತ್ತಮ ಮಾರ್ಗದರ್ಶನ ಕೃತಿಗಳಾಗಿವೆ. ಅಲ್ಲದೇ ಗುಲಬರ್ಗಾ ತಾಲೂಕಿನ ಸ್ಥಳ ನಾಮಗಳು ಭಾಷಿಕ ಸಾಂಸ್ಕೃತಿಕ ಅಧ್ಯಯನ ಎಂಬ ಯೋಜನೆಯನ್ನು ೧೯೯೦ರಲ್ಲಿ ಮತ್ತು ಉತ್ತರ ಕರ್ನಾಟಕ ದ ಎರಡು ಜಿಲ್ಲೆಗಳ ಭಾಷಾ ಪರಿವೀಕ್ಷಣೆ ಮತ್ತು ಅಧ್ಯಯನ ಎಂಬ ಯೋಜನೆಯನ್ನು ೧೯೯೨ರಲ್ಲಿ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ (ನವದೆಹಲಿ) ಸಹಕಾರದೊಂದಿಗೆ ಎರಡು ಸಂಶೋಧನಾ ಯೋಜನೆಗಳನ್ನು ಸಹಿತ ಪೂರ್ಣಗೊಳಿಸಿದ್ದಾರೆ.

ಇದರೊಂದಿಗೆ ಗುಲಬರ್ಗಾ ವಿಶ್ವವಿದ್ಯಾಲಯ ಪ್ರಸಾರಾಂಗದ ನಿರ್ದೇಶಕರು, ಪ್ರಾಧ್ಯಾಪಕರು ಗುಲಬರ್ಗಾ ವಿಶ್ವವಿದ್ಯಾಲಯ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿಯೂ ಮತ್ತು ಹೈದ್ರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಅಭ್ಯಾಸ ಮಂಡಳಿಯ ಸದಸ್ಯರಾಗಿಯೂ ಆಡಳಿತಾನುಭವವನ್ನು ಹೊಂದಿದ್ದಾರೆ.

ಅಲ್ಲದೆಯೇ ಶಿವಮೊಗ್ಗ ಕುವೆಂಪು ವಿಶ್ವ-ವಿದ್ಯಾಲಯ ಅಧ್ಯಾಪಕ, ಪ್ರವಾಚಕ, ಹಾಗೂ ಪ್ರಾಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಮೈಸೂರು ವಿಶ್ವವಿದ್ಯಾಲಯ ಅಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಈ ನೇಮಕಾತಿ ಆಯ್ಕೆ ಸಮಿತಿಯ ತಜ್ಞರಾಗಿದ್ದಾರೆ.

ಸದ್ಯ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರು ಮತ್ತು ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹಾಗೂ ಬಸವಾದಿ ಶರಣ ಸಾಹಿತ್ಯ ಸಂಶೋಧನೆ ಕೇಂದ್ರ ನಿರ್ದೇಸಕರು ಮತ್ತು ಪ್ರಾಧ್ಯಾಪಕರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಡಾ॥ ಪೂಜಾರರು ಕನ್ನಡ ಸಾಹಿತ್ಯಕ್ಕೆ ನೀಡದ ಕೊಡುಗೆ ಅವಿಸ್ಮರಣೀಯವಾಗಿದೆ. ಅವರ ಸಂಶೋಧನಾ ಸಾಹಿತ್ಯ ಮತ್ತು ಸಂಪಾದ ಸಾಹಿತ್ಯಕ್ಕೆ ಸೃಜನಶೀಲ ಬರವಣಿಗೆಗೆ, ಭಾಷಾ ಶಾಸ್ತ್ರಕ್ಕೆ ವಿಮರ್ಶಾ ಕ್ಷೇತ್ರಕ್ಕೆ, ಅನೇಕ ಕೃತಿಗಳನ್ನು ರಚಿಸುವುದರೊಂದಿಗೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

ಅವರ ಪವಾಡ ಕಥೆಗಳು ಮತ್ತು ಇತರ ಲೇಖನಗಳು, ಸಂಶೋಧನಾ ಕೃತಿಯು, ವೀರಶೈವ ಸಾಹಿತ್ಯದಲ್ಲಿ ಮೂಡಿ ಬಂದಿರುವ ಪವಾಡ ಕಥೆಗಳನ್ನು ಆಧರಿಸಿ ರಚಿಸಿದುದ್ದಾಗಿದೆ. ಅದರಂತೆ ಇನ್ನೊಂದು ವಿಮರ್ಶೆ ಮತ್ತು ಸಂಶೋಧನಾ ಲೇಖನಗಳನ್ನು ಒಳಗೊಂಡ ಕೃತಿ ಇಲ್ಲಿ ಸಾಹಿತ್ಯಕ್ಕೆ ಸಂಸ್ಕೃತಿ ಭಾಷೆಗೆ ಮತ್ತು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಸುಮಾರು ೨೫ ಲೇಖನಗಳು ಇವೆ.

ಅದರಂತೆ ಪೂಜಾರರು ಪ್ರೇರಣೆ ಧೋರಣೆಗಳ ಹಿನ್ನೆಲೆಯಲ್ಲಿ ಹಳೆಗನ್ನಡ ನಡುಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ವೀರಶೈವಪುರಾಣಗಳಿಗೆ ಸಂಬಂಧಿಸಿದಂತೆ, ನೂಲಿಯ ಚಂದಯ್ಯನ ಇತಿ ವೃತ್ತಕ್ಕೆ ಮರುನೋಟ ಬೀರುವ ಹೊಸಗನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ವಿನಾಯಕರ ನವ್ಯಕಾವ್ಯದ ಕುರಿತು ಮುಂತಾದ ವಿಮರ್ಶಾತ್ಮಕ ಮತ್ತು ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ.

ಪೂಜಾರರ ಸಾಹಿತ್ಯಿಕ ನೈಪುಣ್ಯತೆಯು ಅಪ್ರತಿಮವಾದಂಥಹದ್ದಾಗಿದೆ. ಸಾಹಿತ್ಯವೆ ಪೂಜಾರರು ಮತ್ತು ಪೂಜಾರರೇ ಸಾಹಿತ್ಯ ಎನ್ನುವವಷ್ಟುರ ಮಟ್ಟಿಗೆ ಸಾಹಿತ್ಯದಲಿ ತಮ್ಮನ್ನು ಸಮರ್ಪಿಸಿಕೊಂಡಿದವರಾಗಿದ್ದಾರೆ. ಅದರಂತೆ ಅವರು ನಾಟಕ ಸಾಹಿತ್ಯಕ್ಕೂ ತಮ್ಮದೇ ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಂದರೆ ಶರಣ ಸಿರಿ, ಕೊಡಗುಳಿ ಕೇಶಿರಾಜ ಮತ್ತು ಕಾಯಕಯೋಗಿ ಕುಂಬಾರ ಗುಂಡಯ್ಯಾ.

ಒಟ್ಟಾರೆಯಾಗಿ ಪೂಜಾರರ ಸಾಹಿತ್ಯಕ ಸೇವೆ ಅಪ್ರತಿಮವಾದಂತಹದ್ದು.

ಅನುಬಂಧಗಳು

೧) ಡಾ.ವ್ಹಿ.ಜಿ ಪೂಜಾರರ ಅವರ ಪ್ರಕಟಿತ ಗ್ರಂಥಗಳು.

೨) ಡಾ.ವ್ಹಿ.ಜಿ. ಪೂಜಾರರ ಮಾರ್ಗದರ್ಶನದಲ್ಲಿ ಪಿಎಚ್.ಡಿ ಪಡೆದವರು.

೩) ಡಾ.ವ್ಹಿ.ಜಿ. ಪೂಜಾರರ ಅವರ ವಂಶವೃಕ್ಷದ ವಿವರಣೆ .

೪) ಡಾ.ವ್ಹಿ.ಜಿ. ಪೂಜಾರರ ಪ್ರಶಸ್ತಿ ಪುರಾಸ್ಕಾರ ಪಡೆದ ಕೃತಿಗಳ ವಿವರ.

೫) ಡಾ. ಪೂಜಾರರ ಶೈಕ್ಷಣಿಕ ಸಾಧನೆಗಳನ್ನು ಬಿಂಬಿಸುವ ಭಾವ ಚಿತ್ರಗಳು.

೬) ಆಕಾರ ಗ್ರಂಥಗಳು.

ಅನುಬಂಧಗಳು

ಡಾ. ವ್ಹಿ.ಜಿ. ಪೂಜಾರರ ಪ್ರಕಟಿತ ಗ್ರಂಥಗಳು – ಒಟ್ಟು – ೪೩

೧) ಪವಾಡ ಕಥೆಗಳು ಮತ್ತು ಇತರ ಲೇಖನಗಳು (ಸಂಶೋಧನೆ) -೧೯೮೨

೨) ಕವಿವಾಣಿಯಲ್ಲಿ ಶ್ರೀ ಷಣ್ಮುಖ ಶಿವಯೋಗಿ (ಸಂಪಾದನೆ)-೧೯೮೨

೩) ನಿಷ್ಠೆಯ ಕಡಲಪ್ಪನವರು- ವೀರಪ್ಪನವರು (ಚರಿತ್ರೆ)-೧೯೮೪

೪) ಸ್ವರವಚನಗಳಲ್ಲಿ ವಿಡಂಬನೆ (ವಿಮರ್ಶೆ)-೧೯೮೭

೫) ಸಾಹಿತ್ಯ ಸಮಾವೇಶ (ವಿಮರ್ಶೆ)-೧೯೮೭

೬) ಶ್ರೀ ಸದ್ಗುರು ಶರಣ ಶಿವಲಿಂಗೇಶ್ವರ ಪುರಾಣ (ಸಂಪಾದನೆಇತರರೊಂದಿಗೆ)೧೯೮೮

೭) ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು (ಸಂಶೋಧನೆ)-೧೯೯೧

೮) ಶರಣ ಸಾಹಿತ್ಯಮಾರ್ಗ (ವಿಮರ್ಶೆ)-೧೯೯೩

೯) ಸಂತುಷ್ಠಿ ಡಾ.ಎಮ್.ಎಸ್. ಲಠ್ಠೆ ಅಭಿನಂದನ ಗ್ರಂಥ (ಸಂಪಾದನೆ ಇತರರೊಂದಿಗೆ) ೧೯೯೩

೧೦) ಶರಣರ ಎರಡು ನಾಟಕಗಳು (ಸೃಜನ)-೧೯೯೩

೧೧) ಕನಡಸಾಹಿತ್ಯ (ಸಮೀಕ್ಷೆ)-೧೯೯೪

೧೨) ಶೋಧ ಸಮೀಕ್ಷೆ (ಸಂಪಾದನೆ ಇತರರೊಂದಿಗೆ)-೧೯೯೫

೧೩) ಕಾವ್ಯ ಮಂದಾರ ಭಾಗ-೨ ಪಠ್ಯ ಪುಸ್ತಕ (ಸಂಪಾದನೆ ಇತರರೊಂದಿಗೆ)-೧೯೯೫

೧೪) ಕನ್ನಡ ಸಾಹಿತ್ಯ ಸಂಬಂಧ (ವಿಮರ್ಶೆ, ಸಂಶೋಧನೆ)-೧೯೯೫

೧೫) ರಾಮಪೂರ ಬಕ್ಕಪ್ಪಯ್ಯನ ಸ್ವರವಚನ - ತ್ರಿವಿಧಿ (ಸಂಪಾದನೆ)-೧೯೯೬

೧೬) ವಚನ ಸಾಹಿತ್ಯ ಪರಂಪರೆ (ಸಮೀಕ್ಷೆ)-೧೯೯೭

೧೭) ಆಧುನಿಕ ವಚನ ಸಾಹಿತ್ಯ (ಸಮೀಕ್ಷೆ)೧೯೯೮

೧೮) ಸಂಗವಿಭು (ಸಂಪಾದನೆ)-೧೯೯೮

೧೯) ತೋಂಟದ ಸಿದ್ಧಲಿಂಗ ಶಿವಯೋಗಿ (ಚರಿತ್ರೆ)-೧೯೯೮

೨೦) ಕಲಬುರ್ಗಿ ಜಿಲ್ಲೆಯ ತತ್ವಪದಕಾರು (ಸಮೀಕ್ಷೆ)-೧೯೯೮

೨೧) ಷಡಕ್ಷರ ದೇವ (ಚರಿತ್ರೆ)-೧೯೯೮

೨೨) ಶಬ್ದಮಣಿ ದರ್ಪಣ ಸಂಗ್ರಹ- ಪಠ್ಯಪುಸ್ತಕ (ಸಂಪಾದನೆ ಇತರರೊಂದಿಗೆ)-೧೯೯೯

೨೩) ನುಲಿಯ ಚಂದಯ್ಯ (ಸಂಶೋಧನೆ)-೨೦೦೦

೨೪) ಶ್ರೀ ವಿರೇಂದ್ರ ಪಾಟೀಲ (ಚರಿತ್ರೆ ಇತರರೊಂದಿಗೆ)-೨೦೦೦

೨೫) ಶ್ರೀ ಕಡಿದಾಳ ಮಂಜಪ್ಪ (ಚರಿತ್ರೆ ಇತರರೊಂದಿಗೆ)-೨೦೦೦

೨೬) ಕಥಾ ಗಂಗಾ-೨ (ಸಂಪಾದನೆಇತರರೊಂದಿಗೆ)-೨೦೦೦

೨೭) ಕನ್ನಡ ಸಾಹಿತ್ಯ ಸಂಸ್ಕೃತಿ (ವಿಮರ್ಶೆ)-೨೦೦೧

೨೮) ಸಾಹಿತ್ಯಾನ್ವೇಷಣೆ (ಸಂಶೋಧನೆ)-೨೦೦೨

೨೯) ಜೇಡರ ದಾಸಿಮಯ್ಯ (ಚರಿತ್ರೆ) -೨೦೦೩

೩೦) ಷಣ್ಮುಖ ಶಿವಯೋಗಿ (ಚರಿತ್ರೆ)೨೦೦೩

೩೧) ಕನ್ನಡ ಭಾಷಾ ಸಮೀಕ್ಷೆ (ಭಾಷಾವಿಜ್ಞಾನ)-೨೦೦೩

೩೨) ಆಯ್ದುಸ್ವರ ವಚನಗಳು (ಸಂಪಾದನೆಇತರರೊಂದಿಗೆ)೨೦೦೪

೩೩) ಹಡಪದ ಅಪ್ಪಣ್ಣ (ಚರಿತ್ರೆ) -೨೦೦೪

೩೪) ಸಂಶೋಧನ ಲೇಖನಗಳು (ಸಂಪಾದನೆ)-೨೦೦೫

೩೫) ಹೂಗಾರ ಸಮಾಜ: ಒಂದು ಸಾಂಸ್ಕೃತಿಕ ಅಧ್ಯಯನ(ಸಂಶೋಧನೆ)-೨೦೦೫

೩೬) ಕನ್ನಡ ವಾಣಿಜ್ಯ ಸಂವಹನ (ಪಠ್ಯಪುಸ್ತಕ)-೨೦೦೫

೩೭) ಕನ್ನಡ ಸಾಹಿತ್ಯ ಕೋಮು ಸೌಹರ್ದತೆ (ವಿಮರ್ಶೆ)-೨೦೦೬

೩೮) ಬಸವೋತ್ತರ ಯುಗದ ಶರಣರ ಆಯ್ದ ವಚನಗಳು

(ಸಂಪಾದನೆ ಇತರರೊಂದಿಗೆ)-೨೦೦೭

೩೯) ಕನ್ನಡ ಸಾಹಿತ್ಯ ಜೀವನ ಮೌಲ್ಯಗಳು (ವಿಮರ್ಶೆ)-೨೦೦೮

೪೦) ಕನ್ನಡ ವ್ಯಾಕರಣ ಮತ್ತು ಭಾಷೆ (ಭಾಷಾವಿಜ್ಞಾನ)-೨೦೦೮

೪೧) ಹಸನು (ಚಿಂತನ ಬರಹ)-೨೦೦೮

೪೨) ವಚನ ಸಾಹಿತ್ಯ ಸಮೀಕ್ಷೆ (ವಿಮರ್ಶೆ)-೨೦೦೯

೪೩) ಮಧ್ಯಕಾಲೀನ ಕನ್ನಡ ಕಾವ್ಯ ಸಂಗ್ರಹ (ಪಠ್ಯವಸ್ತು)-೨೦೦೯

ಡಾ.ವ್ಹಿ.ಜಿ.ಪೂಜಾರರ ಮಾರ್ಗದರ್ಶನದಲ್ಲಿ ೧೧ ಜನ ಪಿ.ಎಚ್.ಡಿ ಪದವಿ ಪಡೆದಿದ್ದು ಮತ್ತು ಅವರ ಹೆಸರು ಹಾಗೂ ವಿಷಯಗಳು ಹೀಗಿವೆ :

೧. ಶ್ರೀಮತಿ ನಾಗಾಬಾಯಿ ಬುಳ್ಳಾ– 'ಡಾ.ಸಿದ್ದಯ್ಯ ಪುರಾಣಿಕರ ಕೃತಿಗಳು' – ೧೯೯೪

೨. ಶ್ರೀಮತಿ ಗದಿಗೆಮ್ಮಾ ಪೂಜಾರ– 'ಡಾ. ಎಚ್.ತಿಪ್ಪೇರುದ್ರ ಸ್ವಾಮಿಗಳವರ ವಿಚಾರ ಸಾಹಿತ್ಯ' – ೧೯೯೫

೩. ಶ್ರೀಮತಿ ಯಶೋಧರಾ ಶಾಸ್ತ್ರಿ– 'ಗುಲಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು' – ೧೯೯೫

೪. ಶ್ರೀಮತಿ ನೀಲಮ್ಮ ಕತ್ನಳ್ಳಿ – 'ಮಹದೇವ ಬಣಕಾರರ ಕೃತಿಗಳು' – ೧೯೯೫

೫. ಶ್ರೀ ನಾಗೇಂದ್ರ ಮಸೂಲೆ – 'ಕಲಬುರ್ಗಿ ಕನ್ನಡ ವರ್ಣನಾತ್ಮಕ ವ್ಯಾಕರಣ' – ೧೯೯೭

೬. ಶ್ರೀ ಯರನಾಳೆ ವಿ.ರಾಜೇಂದ್ರ– 'ಪೂರ್ಣಜ್ಞ ವಚನಗಳು'–ಒಂದು ಅಧ್ಯಯನ – ೨೦೦೦

೭. ಶ್ರೀಮತಿ ಶಶಿಕಲಾ ದಂಡಿಗಿಮಠ– 'ಡಾ.ಆರ್.ಸಿ.ಹಿರೇಮಠ ಅವರ ಜೀವನ ಮತ್ತು ಸಾಧನೆ'–೨೦೦೧


೮. ಶ್ರೀ ಮನ್ಮಥ ಎಚ್.ಡೋಳೆ– 'ಬಸವೇಶ್ವರ–ಅಂಬೇಡ್ಕರ' ಒಂದು ತೌಲನಿಕ ಅಧ್ಯಯನ–೨೦೦೨

೯. ಮಠ ಈಶ್ವರಯ್ಯ ಸ್ವಾಮಿ – 'ಸ್ವರ ವಚನ ಸಾಹಿತ್ಯ ಒಂದು ಅಧ್ಯಯನ'–೨೦೦೩

೧೦. ಶ್ರೀ ಶಾಂತಪ್ಪ ಎನ್– 'ರಸ್ತಾಪೂರದ ಭೀಮಕವಿ ಹಾಗೂ ಅವರ ಕೃತಿಗಳು' ಒಂದು ಅಧ್ಯಯನ – ೨೦೦೫

೧೧. ಶ್ರೀ ಶಿವರಾಜ ಹೆರೂರ – 'ಶ್ರೀ ಶರಣಬಸವೇಶ್ವರ ಪುರಾಣಗಳು' ಒಂದು ಅಧ್ಯಯನ – ೨೦೦೬

ಡಾ.ವ್ಹಿ.ಜಿ. ಪೂಜಾರರ ವಂಶವೃಕ್ಷದ ಮಾಹಿತಿ



ಡಾ.ವ್ಹಿ.ಜಿ. ಪೂಜಾರರಿಗೆ ದೊರೆತ ಪ್ರಶಸ್ತಿ ಪುರಸ್ಕಾರಗಳ ವಿವರಣೆ

೧) 'ಸಾಹಿತ್ಯ ಸಮಾವೇಶ' ಗ್ರಂಥಕ್ಕೆ ಕಾವ್ಯಾನಂದ ಪ್ರಶಸ್ತಿ-೧೯೮೭

೨) 'ಸಾಹಿತ್ಯ ಸಮಾವೇಶ' ಗ್ರಂಥಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪುರಸ್ಕಾರ-೧೯೮೮

೩) 'ಕನ್ನಡ ಸಾಹಿತ್ಯ ಸಂಬಂಧ' ಕೃತಿಗೆ ಹುಬ್ಬಳ್ಳಿ ಮೂರು ಸಾವಿರ ಮಠದ ಸಾಹಿತ್ಯ ಪ್ರಶಸ್ತಿ-೧೯೯೬

೪) 'ನುಲಿಯ ಚಂದಯ್ಯ' ಕೃತಿಗೆ ಕಲ್ಲದೇವನ ಹಳ್ಳಿಯ ಸಾಹಿತ್ಯ ಪ್ರತಿಷ್ಠಾನದ ಪ್ರಶಸ್ತಿ-೨೦೦೨

೫) 'ಕನ್ನಡ ಸಾಹಿತ್ಯ ಸಂಸ್ಕೃತಿ' ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ-೨೦೦೨

೬) 'ಸಾಹಿತ್ಯಾನ್ವೇಷಣೆ' ಕೃತಿಗೆ ಗೊರೂರು ಸಾಹಿತ್ಯ ಪ್ರತಿಷ್ಠಾನದ ಪ್ರಶಸ್ತಿ-೨೦೦೩

೭) 'ಸಾಹಿತ್ಯಾನ್ವೇಷಣೆ' ಕೃತಿಗೆ ಆರ್.ಎಸ್.ಹುಲಗಬಾಳಿ ಪಾರಲೌಕಿಕ ಸಾಹಿತ್ಯ ಪ್ರಶಸ್ತಿ-೨೦೦೩

೮) 'ಕನ್ನಡ ಭಾಷಾ ಸಮೀಕ್ಷೆ' ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪುರಸ್ಕಾರ-೨೦೦೪

೯) 'ಕನ್ನಡ ವ್ಯಾಕರಣ ಮತ್ತು ಭಾಷೆ' ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪುರಸ್ಕಾರ-೨೦೦೯

೧೦) ಡಾ. ಸಂಗಮೇಶ ಸವದತ್ತಿ ಮಠ ಸಾಹಿತ್ಯ ಪ್ರಶಸ್ತಿ – ತಾಲೂಕಾ ಧರಿನಾಡು- ಕನ್ನಡ ಸಾಹಿತ್ಯ ಸಂಘ ಹುಮನಾಬಾದ – ೨೦೦೯



ಗುಲಬರ್ಗಾ ವಿಶ್ವ ವಿದ್ಯಾಲಯದ ಘಟಕೋತ್ಸವ ಸಮಾರಂಭದಲ್ಲಿ
ಡಾ. ವ್ಹಿ.ಜಿ. ಪೂಜಾರ ಅವರು ಕಲಾನಿಕಾಯದ ಡೀನ್‌ರಾಗಿ
ಕುಲಾದಿಪತಿಗಳೊಂದಿಗೆ






ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಗೌರವವನ್ನು ಮಾನ್ಯ ಶ್ರೀ ಎಂ.ಪಿ. ಪ್ರಕಾಶ ಅವರಿಂದ ಸ್ವೀಕರಿಸುತ್ತಿರುವುದು.



ಅಧ್ಯಯನದಲ್ಲಿ ನಿರತರಾದ ಡಾ. ವ್ಹಿ.ಜಿ. ಪೂಜಾರರವರು







ಡಾ. ವ್ಹಿ.ಜಿ. ಪೂಜಾರ ಅವರು ಕನ್ನಡ ಸಾಹಿತ್ಯ ಪರಿಷತ್ತು ರಾಮದುರ್ಗ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಢೋಲು ಭಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವುದು



ರಾಮದುರ್ಗ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ಮೆರವಣಿಗೆಯಲ್ಲಿ ಹೋಗುತ್ತಿರುವುದು





ಆಕಾರ ಗ್ರಂಥಗಳು :-

ಕ್ರ.ಸಂ	ಪುಸ್ತಕದ ಹೆಸರು	ಲೇಖಕರು/ ಮುದ್ರಣದ ವರ್ಷ
೦೧.	ಪವಾಡ ಕಥೆಗಳು ಮತ್ತು ಇತರ ಲೇಖನಗಳು	- ವ್ಹಿ.ಜಿ. ಪೂಜಾರ ವಿಜಯ ಪ್ರಕಾಶನ ಸುರಪುರ - ೧೯೮೨
೦೨.	ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು	ವ್ಹಿ.ಜಿ. ಪೂಜಾರ ಪುಸ್ತಕ ಅಕಾಡೆಮಿ ಕಲಬುರ್ಗಿ- ೧೯೯೧
೦೩.	ಕನ್ನಡ ಸಾಹಿತ್ಯ ಸಂಬಂಧ	ವ್ಹಿ.ಜಿ.ಪೂಜಾರ ಚೇತನ ಪ್ರಕಾಶನ ಗುಲಬರ್ಗಾ- ೧೯೯೫
೦೪.	ಸಂಶೋಧನಾ ಲೇಖನಗಳು	ಸಂ.ವ್ಹಿ.ಜಿ. ಪೂಜಾರ ಪ್ರಸಾರಾಂಗ ಗು.ವಿ.ಗು - ೨೦೦೫
೦೫.	ವಚನ ಸಾಹಿತ್ಯ ಪರಂಪರೆ	ವ್ಹಿ.ಜಿ.ಪೂಜಾರ ಪ್ರಕಾಶಕರು ಪೂಜ್ಯದುರದುಂಡೀಶ್ವರ ಮಠ ಮುರುಗೋಡ - ೧೯೯೫
೦೬.	ನುಲಿಯ ಚಂದಯ್ಯಾ	ವ್ಹಿ.ಜಿ. ಪೂಜಾರ ಬಸವಾದಿ ಶರಣ ಸಾಹಿತ್ಯ ಕೇಂದ್ರ ಗು.ವಿ. ಗು. - ೨೦೦೦
೦೭.	ಹೂಗಾರ ಸಮಾಜ ಒಂದು ಸಾಂಸ್ಕೃತಿಕ ಅಧ್ಯಯನ	ವ್ಹಿ.ಜಿ. ಪೂಜರ ಸಿದ್ದಲಿಂಗೇಶ್ವರ ಪ್ರಕಾಶನ ಗುಲಬರ್ಗಾ-೨೦೦೫
೦೮.	ಕನ್ನಡ ಸಾಹಿತ್ಯ ಸಂಸ್ಕೃತಿ	ವ್ಹಿ.ಜಿ. ಪೂಜಾರ ಚೇತನ ಪ್ರಕಾಶನ ಗುಲಬರ್ಗಾ- ೨೦೦೧
೦೯.	ಹಡಪದ ಅಪ್ಪಣ್ಣ	ವ್ಹಿ.ಜಿ. ಪೂಜಾರ ಗುಲಬರ್ಗಾ-೨೦೦೪
೧೦.	ರಾಮಾಪುರದ ಬಕ್ಕಪ್ಪಯ್ಯಾನ ಸ್ವರವಚನ	ವ್ಹಿ.ಜಿ. ಪೂಜಾರ ಗುಲಬರ್ಗಾ- ೧೯೯೬
೧೧.	ಕಲಬುರ್ಗಿ ಜಿಲ್ಲೆಯ ತತ್ವದಕಾರರು	ವ್ಹಿ.ಜಿ. ಪೂಜಾರ ಗುಲಬರ್ಗಾ- ೧೯೯೮
೧೨.	ತೇಂಟದ ಸಿದ್ದಲಿಂಗ ಶಿವಯೋಗಿ	ವ್ಹಿ.ಜಿ. ಪೂಜಾರ ಗುಲಬರ್ಗಾ- ೧೯೯೮
೧೩.	ಸಾಹಿತ್ಯಾನ್ವೇಷಣೆ	ವ್ಹಿ.ಜಿ. ಪೂಜಾರ ಗುಲಬರ್ಗಾ-೨೦೦೨
೧೪.	ಜೇಡರ ದಾಸಿಮಯ್ಯ	ವ್ಹಿ.ಜಿ. ಪೂಜಾರ ಗುಲಬರ್ಗಾ-೨೦೦೩

೧೫. ಷಣ್ಮುಖ ಶಿವಯೋಗಿ ವ್ಹಿ.ಜಿ. ಪೂಜಾರ ಗುಲಬರ್ಗಾ-೨೦೦೩

೧೬. ಆಯ್ದ ಸ್ವರ ವಚನಗಳು ವ್ಹಿ.ಜಿ. ಪೂಜಾರ ಮತ್ತು ಈಶ್ವರಯ್ಯಾ ಮಠ ೨೦೦೪ ಗುಲಬರ್ಗಾ

೧೭. ಸ್ವರ ವಚನಗಳಲ್ಲಿ ವಿಡಂಬನೆ ವ್ಹಿ.ಜಿ. ಪೂಜಾರ ಗುಲಬರ್ಗಾ- ೧೯೮೭

೧೮. ನಿಷ್ಠೆ ಕಡಲಪ್ಪನವರು-ವೀರಪ್ಪನವರು ವ್ಹಿ.ಜಿ. ಪೂಜಾರ ಗುಲಬರ್ಗಾ-೧೯೮೪

೧೯. ಕವಿವಾಣಿಯಲ್ಲಿ ಶ್ರೀ ಷಣ್ಮುಖ ಶಿವಯೋಗಿ ವ್ಹಿ.ಜಿ. ಪೂಜಾರ ಗುಲಬರ್ಗಾ-೧೯೮೨

೨೦. ಕನ್ನಡ ವಾಣಿಜ್ಯ ಸಂವಹನ ವ್ಹಿ.ಜಿ. ಪೂಜಾರ ಗುಲಬರ್ಗಾ- ೨೦೦೫

೨೧. ಮಹಾತ್ಮ ಬೋಮಗೋಂಡೇಶ್ವರ ಪವಾಡಗಳು ಸಂ.ಮಾಳಪ್ಪಾ ಅಡವಾರೆ ಗುಲಬರ್ಗಾ-೧೯೯೫

೨೨. ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯಾ ಡಾ.ಬಸವರಾಜ ಪೋಲಿಸ ಪಾಟೀಲ ಗುಲಬರ್ಗಾ- ೨೦೦೧

೨೩. ಶರಣಬಸವೇಶ್ವರರು ಮತ್ತು ಅವರ ಪರಿಸರದ ಸಾಹಿತ್ಯ ಎಸ್.ಎಂ. ಹಿರೇಮಠ ಗುಲಬರ್ಗಾ-೨೦೦೦

೨೪. ಬೀದರ ಜಿಲ್ಲಾ ದರ್ಶನ ಸಂ.ಡಾ.ಜಗನ್ನಾಥ ಹೆಬ್ಬಾಳೆ ಬೀದರ - ೧೯೯೨

೨೫. ಬೀದರ ಜಿಲ್ಲೆಯ ಜನಪದ ಕಥೆಗಳು ಸಂ ಕ್ಯಾತನಹಳ್ಳಿ ರಾಮಣ್ಣ – ೧೯೭೬

೨೬. ಜನ ಜನಪದ ಜಾನಪದ ಎಂ.ಚಿದಾನಂದ ಮೂರ್ತಿ – ೨೦೦೩

೨೭. ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ ಬಸವರಾಜ ಸಬರದ - ೧೯೮೨

ಪತ್ರಿಕೆಗಳು :

೦೧. ಶರಣ ಸೌರಭ ಸ್ಮರಣ ಸಂಚಿಕೆ, ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ –೧೯೯೧

೦೨. ದಾಸೋಹ ಜ್ಞಾನರತ್ನ ಪಾಕ್ಷಿಕ ಪತ್ರಿಕೆ ಸಂಚಿಕೆ – ೧೯

ಸಂ.ಡಾ. ಲಕ್ಷ್ಮಣ ಕೌಂಟೆ – ೧೯–೩೦–೨೦೦೮

೦೩. ಬಸವ ಮಾರ್ಗ ಬಸವಾದಿ ಶರಣರ ಬದುಕು ಬೋದನೆ ಮೀಸಲಾದ ಸಂಚಿಕೆ – ೧೦.

ಸಂ. ಲಿಂಗಣ್ಣ ಸತ್ಯಂಪೇಟ್ ಫ್ರೇಬ್ರುವರಿ – ೨೦೦೮.